ಸಂಚಿಕೆ
೧೪
ಜನವರಿ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ





ಈ ಸಂಚಿಕೆಯಲ್ಲಿ....


| | | | |
|---|---|---|---|
| ಸಂಪಾದಕೀಯ | ಪು ೧ | ಅಂಕಣ | ಪು ೮-೯ |
| ಹಿನ್ನೋಟ | ಪು ೨ | ಲಘು ಹಾಸ್ಯ | ಪು ೧೦-೧೨ |
| ಧರ್ಮವಾಣಿ | ಪು ೩-೪ | ಅಂಕಣ | ಪು ೧೩-೧೪ |
| ಹಬ್ಬ | ಪು ೫-೭ | ಕವನ | ಪು ೧೫ |
| ನಾವು ನೋಡಿದ ಸಿನಿಮಾ | ಪು ೧೬ | | |




ಸತ್ಯ ಪ್ರಸಾದ್
ಪ್ರಧಾನ ಸಂಪಾದಕರು



ರಾಘವೇಂದ್ರ ಕುಂದಲಗುರ್ಕಿ
ಸಂಪಾದಕರು



ಭಾಸ್ಕರ ತೈಲಗೇರಿ
ಸಂಪಾದಕ ವರ್ಗ



ಅನಿಲ್ ಭಾರಧ್ವಾಜ
ಸಂಪಾದಕ ವರ್ಗ



ಪ್ರಶಾಂತ ಎಂ.
ಸಂಪಾದಕ ವರ್ಗ



ಅಮೂಲ್ಯ ಕಟ್ಟೀಮನಿ
ಸಂಪಾದಕ ವರ್ಗ

ಮುಖಪುಟ ಚಿತ್ರ
ಹಂಪಿ ವಿರುಪಾಕ್ಷೇಶ್ವರ

ಸಂಪಾದಕೀಯ ಪುಟ ಚಿತ್ರ:
ಉಡುಪಿಯ ಶ್ರೀಕೃಷ್ಣನ
ಪರ್ಯಾಯ ಮಹೋತ್ಸವ

ಚಿತ್ರ ಕೃಪೆ : ಅಂತರ್ಜಾಲ

## ಪ್ರಧಾನ ಸಂಪಾದಕರಿಂದ......

ಬೃಂದಾವನ ಓದುಗರಿಗೆ ಹೊಸ ವರ್ಷದ ಮತ್ತು ಸಂಕ್ರಾಂತಿ ಹಬ್ಬದ ಶುಭಾಶಯಗಳು !!!

೨೦೧೮ ರ ಹೊಸ ವರ್ಷ ನಿಮ್ಮೆಲ್ಲರಿಗೂ ಸುಖ, ಸಂತೋಷ ಮತ್ತು ನೆಮ್ಮದಿಯನ್ನು ಕೊಡಲಿ.

**ಸಂಕ್ರಾಂತಿ:** ಹೆಸರೇ ಸೂಚಿಸುವುಂತೆ ಪರಿವರ್ತನೆಯ ಹೊಸ ಬದಲಾವಣೆಗೆ ನಾಂದಿಹಾಡುವ ಹಬ್ಬ, ಭಗವಾನ್ ಸೂರ್ಯ ದೇವನಿಗೆ ಪ್ರಾಧ್ಯಾನ್ಯ ಕೊಟ್ಟ ಹಬ್ಬ, ಇದು ಅನ್ನದಾತನ ಹಬ್ಬ, ವರ್ಷವಿಡೀ ಮೈಮುರಿದು ದುಡಿದ ರೈತಾಪಿ ಜನಗಳ ಮೊಗದಲ್ಲಿ ಮಂದಹಾಸ ಮೂಡುವ ಕ್ಷಣ, ಹಳ್ಳಿಗಳಲ್ಲಿ ಈಗಲೂ ಸಂಭ್ರಮದ ಸಡಗರದ ಕಾಣಬಹುದು.

ಸೂಕ್ಷವಾಗಿ ಗಮನಿಸಿದರೆ, ನಮ್ಮ ಪೂರ್ವಜರು ಸೂರ್ಯ ಮತ್ತು ರೈತನನ್ನು ಜೋಡಿಸಿ ಎಷ್ಟೊಂದು ಅರ್ಥ ಪೂರ್ಣವಾಗಿ ಒಂದು ಹಬ್ಬವನ್ನು ಆಚರಿಸಿದ್ದಾರೆ. ಭುವಿಗೆ ಸೂರ್ಯನು ಹೇಗೆ ಉಸಿರೊ ಹಾಗೆ ಮನುಜನಿಗೆ ಉಳುವ ಯೋಗಿ ಉಸಿರು.

ಆದರೆ ಈಗಿನ ವಾಸ್ತವ ನೋಡಿದರೆ ತಲೆ ಸುತ್ತಿದಂತಾಗುತ್ತದೆ, ಉಸಿರಾಗಿರುವ ರೈತನ ಮೇಲೆ ಎಲ್ಲರೂ ಸವಾರಿ ಮಾಡುತ್ತಿದ್ದಾರೆ, ಅವನು ಉಸಿರುಕಟ್ಟಿ ತತ್ತರಿಸುತ್ತಿದ್ದಾನೆ. ದಿನಕ್ಕೊಂದರಂತೆ ಅವನ ಆತ್ಮಹತ್ಯೆಗಳು ಪತ್ರಿಕೆ ಮಾಧ್ಯಮದಲ್ಲಿ ರಾರಾಜಿಸುತ್ತಿವೆ. ರಾಜಕಾರಣಿಗಳಿಗೆ ಈ ಸುದ್ದಿಗಳೇ ಭಂಡವಾಳಗಳು...

ಒಬ್ಬೇ ಒಬ್ಬ ರೈತನು ಆತ್ಮಹತ್ಯೆ ಮಾಡಿಕೊಳ್ಳದ ವರುಷವೇ ನಿಜವಾದ ಸಂಕ್ರಾಂತಿ ಹಬ್ಬ.

ನಮ್ಮ ವ್ಯವಸ್ಥೆ ಇದನ್ನು ನೀಡಲಾರದು....ಪ್ರಕೃತಿಯಲ್ಲಿ ಬೇಡಿಕೊಳ್ಳೋಣ ಆ ಹಬ್ಬ ನೀಡಲೆಂದು.

ಮುಂದಿನ ಸಂಚಿಕೆಯಲ್ಲಿ ಸಿಗೋಣ

*-ಸತ್ಯ*



## ಸಂಪಾದಕರಿಂದ......

ಬೃಂದಾವನ ವಾಣಿಯ ಎಲ್ಲ ಕನ್ನಡ ಸಹೃದಯ ಓದುಗರಿಗೂ

೨೦೧೮- ಹೊಸ ವರ್ಷದ ಹಾಗು ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ಹೊಸ ವರುಷ ನಮ್ಮೆಲ್ಲ ಓದುಗರಿಗೂ ಸುಖ-ಶಾಂತಿ ಯನ್ನು ತರಲಿ ಎಂದು ವಾಣಿಯ ಸಂಪಾದಕ ವರ್ಗ ಆಶಿಸುತ್ತದೆ.

**ಉಡುಪಿಯ ಪರ್ಯಾಯ ಮಹೋತ್ಸವ** ೭೫೦ ವರ್ಷ ಇತಿಹಾಸದ ಜಗದ್ಗುರು ಶ್ರೀ ಮಧ್ವಾಚಾರ್ಯ ಪ್ರತಿಷ್ಠಾಪಿತ ಉಡುಪಿಯ ಶ್ರೀ ಕೃಷ್ಣನ ಪರ್ಯಾಯ ಮಹೋತ್ಸವ ಜನವರಿ ೧೮ ರಂದು ಪಲಿಮಾರು ಮಠದ ಶ್ರೀ ವಿದ್ಯಾಧೀಶ ಸ್ವಾಮೀಜಿಯವರು ಎರಡನೇ ಭಾರಿ ನಡೆಸಲಿದ್ದಾರೆ. ಪರ್ಯಾಯ ಯಶಸ್ವಿಯಾಗಲಿ ಎಂದು ಬೃಂದಾವನ ವಾಣಿಯ ಶುಭ ಹಾರೈಕೆ. ಪ್ರಸ್ತುತ ತಮ್ಮ ೫ನೆ ಪರ್ಯಾಯವನ್ನು ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ೮೭ ನೇ ವಯಸ್ಸಿನಲ್ಲಿ ಯಶಸ್ವಿಯಾಗಿ ಸಮಾಪ್ತಿ ಗೊಳಿಸಲಿದ್ದಾರೆ. ಪ್ರತಿದಿನವೂ ಹಲವಾರು ಬಾರಿ ಪೂಜಿಸಲ್ಪಡುವ ಶ್ರೀ ಕೃಷ್ಣನ ಕೈಂಕರ್ಯ ಒಂದು ಸಾಧನೆಯ ಸರಿ.

**ಇಸ್ರೋ ಸಾಧನೆ**, ಇಸ್ರೋ ತನ್ನ ೧೦೦ ನೇ ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿ ಬಿಡಲಾಯಿತು, ಕಳೆದ ಆಗಸ್ಟ್ ನಲ್ಲಿ ವಿಫಲವಾದ IRNSS-1H ನಂತರ ನಾಲ್ಕೇ ತಿಂಗಳಲ್ಲಿ ಯಶಸ್ವಿ ಉಡಾವಣೆ ವಿಜ್ಞಾನಿಗಳ ಪರಿಶ್ರಮವನ್ನು ಎತ್ತಿ ತೋರಿಸುತ್ತದೆ. ಹಲವಾರು ರಾಷ್ಟ್ರಗಳ ಉಪಗ್ರಹವನ್ನು ಹೊತ್ತ (ಪಿ ಸ್ ಎಲ್ ವಿ ), ಭಾರತದ Cartosat ೨ (ರಾಷ್ಟ್ರದ ಕಣ್ಗಾವಲಾ ಉಪಗ್ರಹ). ಇದರ ವಿಶೇಷ ಉಪಗ್ರಹಗಳನ್ನು ಎರಡು ಕಕ್ಷೆಗಳಲ್ಲಿ (550km/359km) ಒಂದೇ ಉಡಾವಣೆಯಲ್ಲಿ ಬಿಡಲಾಗಿದೆ. ಇಸ್ರೋ ಇನ್ನು ಹೆಚ್ಚಿನ ಸಾಧನೆ ಮಾಡಲಿ ಎಂದು ವಾಣಿ ಹಾರೈಸುತ್ತದೆ

ಈ ಸಂಚಿಕೆಯಲ್ಲಿ ಹಲವಾರು ವಿಶೇಷ ಲೇಖನಗಳಿವೆ ,

ಪುರುಷಾರ್ಥದ ಅರ್ಥಪೂರ್ಣವಾದ ಲೇಖನ,ಸಂಕ್ರಾಂತಿಯ ಮೇಲಿನ ಲಲಿತ ಪ್ರಬಂಧ, ಕಾಫಿಯ ಮೋಜು. ಜಗದ್ಗುರು ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ ಇನ್ನೂ ಹಲವಾರು ಕುತೂಹಲಕಾರಿ ಬರವಣಿಗೆಗಳಿವೆ. ಎಲ್ಲವನ್ನು ಓದಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ.

*-ರಾಘವೇಂದ್ರ ಕುಂದಲಗುರ್ಕಿ*


Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮



## ಬೃಂದಾವನ ಮಕ್ಕಳೋತ್ಸವ



ಅನಿಲ್ ಭಾರದ್ವಾಜ

೨೦೧೭ರ ಡಿಸೆಂಬರ್ ೧೦, ಭಾನುವಾರದಂದು , ನ್ಯೂಜೆರ್ಸಿಯ ಬೃಂದಾವನ ಕನ್ನಡ ಕೂಟದ ವತಿಯಿಂದ ಮಕ್ಕಳೋತ್ಸವ ಕಾರ್ಯಕ್ರಮ ಬಹಳ ವಿಜೃಂಭಣೆಯಿಂದ ಜರುಗಿತು.

ಈಸ್ಟ್ ಬ್ರನ್ಸ್ವಿಕ್ ಪ್ರೌಢಶಾಲೆಯಲ್ಲಿ ನಡೆದ ಈ ಕಾರ್ಯಕ್ರಮ ಅಭಿಮಾನಿ ತಂಡದ ವಾರ್ಷಿಕ ವರದಿ ಮತ್ತು ಮಕ್ಕಳ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳಿಂದ ಶುರುವಾಯಿತು. ಪುಟ್ಟ ಚಿಣ್ಣರಿಂದ ಹಿಡಿದು ಹದಿವಯಸ್ಸಿನ ಮಕ್ಕಳು ಈ ಸ್ಪರ್ಧೆಗಳಲ್ಲಿ ಬಹಳ ಉತ್ಸಾಹದಿಂದ ಪಾಲ್ಗೊಂಡರು. ಹಲವಾರು ವೇದಿಕೆ ಹಾಗೂ ಕೊಠಡಿಗಳಲ್ಲಿ ಸಮಕಾಲಿಕವಾಗಿ ನಡೆಯುತ್ತಿದ್ದ ಸ್ಪರ್ಧೆಗಳಲ್ಲಿ, ಮೇಲೆ-ಕೆಳಗೆ ಓಡಾಡುತ್ತಿದ್ದ ಸ್ಪರ್ಧಿಗಳು, ಅವರ ಪೋಷಕರು ಹಾಗು ತೀರ್ಪುಗಾರರು ಹಬ್ಬದ ಸಡಗರದ ವಾತಾವರಣ ಮೂಡಿಸಿದ್ದರು. ಭಾಗವಹಿಸಿದ ಎಲ್ಲಾ ಮಕ್ಕಳ ಮೊಗದಲ್ಲಿ ಒಂದು ರೀತಿಯ ಗೆಲುವಿನ ಮಿನುಗು ಕಾಣುತ್ತಿತ್ತು.

ನಂತರ ಮುಖ್ಯ ವೇದಿಕೆಯ ಮೇಲೆ ಬೃಂದಾವನ ಕನ್ನಡ ಶಾಲೆಯ ಮಕ್ಕಳು ಸಂಕೇತಗೀತೆ 'ಕನ್ನಡದ ಕುಲದೇವಿ' ಮತ್ತು 'ಕಲಿಸು ಗುರುವೇ ಕಲಿಸು' ಎಂಬ ಹಾಡನ್ನು ಹೇಳಿದರು. ಆ ಹಾಡಿನ ಗಾಢವಾದ ಅರ್ಥ ಹಾಗು ಮಕ್ಕಳು ಅದನ್ನು ಅಚ್ಚುಕಟ್ಟಾಗಿ ಪ್ರಸ್ತುತಪಡಿಸಿದ್ದು ಬಹಳ ಜನರ ಮೆಚ್ಚುಗೆ ಪಡೆಯಿತು. "ನಾದ ಬೃಂದಾವನ" ಹಾಗು "ನೃತ್ಯ ವೃಂದಾವನ" ಎಂಬ ವಿಶಿಷ್ಟ ಕಾರ್ಯಕ್ರಮಗಳಲ್ಲಿ, ನ್ಯೂಜೆರ್ಸಿಯಲ್ಲಿ ಕನ್ನಡಿಗರು ನಡೆಸುವ, ಹಲವಾರು ಸಂಗೀತ ಮತ್ತು ನೃತ್ಯಶಾಲೆಗಳ ಮಕ್ಕಳು ಶಾಸ್ತ್ರೀಯ ಸಂಗೀತ ಹಾಗು ನೃತ್ಯ ಪ್ರದರ್ಶನ ಮಾಡಿದರು. ಈ ಮಕ್ಕಳು ದಾಸರ ಮತ್ತು ಶರಣರ ಪದಗಳನ್ನು ಹಾಡಿ ಮತ್ತು ವಿಭಿನ್ನವಾದ ಅಭಿನಯಮಾಡಿ ಎಲ್ಲರ ಮನಸೆಳೆದರು. ಈ ಶಾಲೆಗಳ ಗುರುಗಳನ್ನು ಬೃಂದಾವನ ಕನ್ನಡ ಕೂಟ ಗೌರವಿಸಿತು.

ಬೃಂದಾವನ ಕನ್ನಡ ಶಾಲೆಯ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಪ್ರಸ್ತುತಪಡಿಸಿದ 'ಕರುನಾಡ ತಾಯಿ ಸದಾ ಚಿನ್ಮಯಿ' ರೂಪಕ ಕರ್ನಾಟಕದ ಶ್ರೀಮಂತ ಇತಿಹಾಸವನ್ನು 'ವಿಶ್ವವಿನೂತನ ವಿದ್ಯಾಚೇತನ' ಹಾಡನ್ನು ಆಧರಿಸಿ ಬಹಳ ಸೊಗಸಾಗಿ ಪರಿಚಯಿಸಿಕೊಟ್ಟಿತು. ವಿವಿಧ ಕನ್ನಡ ಸಾಮ್ರಾಜ್ಯಗಳ ಅರಸುಗಳು, ವೀರ ಯೋಧರು ಹಾಗು ವನಿತೆಯರ ವೇಷ ಧರಿಸಿದ್ದ ಮಕ್ಕಳನ್ನು ಸಭಿಕರು ತುಂಬುಹೃದಯದಿಂದ ಹುರಿದುಂಬಿಸಿದರು.

ಏತನ್ಮಧ್ಯೆ, ರುಚಿಕರವಾದ ಭೋಜನ ಮಧ್ಯಾಹ್ನದ ಹೊತ್ತಿನಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮದ ಕೊನೆಯಲ್ಲಿ ಬೃಂದಾವನದ ಕನ್ನಡ ಬೆಡಗಿಯರಿಂದ ಫ್ಯಾಷನ್ ಶೋ ನಡೆಯಿತು. ಈ ಕಾರ್ಯಕ್ರಮದ ವೈಶಿಷ್ಟ್ಯವೇನೆಂದರೆ ರೇಷ್ಮೆ ಸೀರೆಗಳ ಮೂಲಕ ಪ್ರಕೃತಿಯ ವಿವಿಧ ಬಣ್ಣಗಳನ್ನು, ತಾಯಿ-ಮಗಳ ಪ್ರೀತಿಯನ್ನು ತೋರಿಸುವುದು ಇತ್ಯಾದಿ. ಕಾಮನಬಿಲ್ಲಿನ ಎಲ್ಲ ಬಣ್ಣಗಳನ್ನು ಜಾಗರೂಕವಾಗಿ ಮಿಶ್ರಿಸಿ, ಜಾದು ಮಾಡಿ ತಯಾರಿಸಿದಂತಿತ್ತು ಆ ಬಣ್ಣಗಳು. ಭಾರತದ ಹಾಗು ವಿಶಿಷ್ಟವಾಗಿ ಕರ್ನಾಟಕದ ಸೀರೆಯ ಕಲೆಗಳನ್ನು ಅಂದವಾಗಿ ಪ್ರದರ್ಶಿಸಿದರು ಆ ಮಹಿಳೆಯರು.

ಬೃಂದಾವನ ಕನ್ನಡ ಕೂಟ ಹಾಗು ಅಭಿಮಾನಿ ತಂಡದ ಈ "ಮಕ್ಕಳೋತ್ಸವ " ಕಾರ್ಯಕ್ರಮ ಬಹಳ ಯಶಸ್ವಿಯಾಗಿ ನಡೆಯಿತು.




















Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮






# ಜೀವನದರ್ಥ- ಪುರುಷಾರ್ಥ



ಡಾ|| ಎಂ.ಜಿ.ಪ್ರಸಾದ್

**ಪೀಠಿಕೆ**

ಮನುಷ್ಯರೆಲ್ಲರಿಗೂ ಸಮಾನವಾಗಿ ಬರುವ ಒಂದು ಪ್ರಶ್ನೆಯೆಂದರೆ ಜೀವನಕ್ಕೆ ಅರ್ಥವೇನು ಅಥವಾ ಜೀವನಕ್ಕೆ ಗುರಿಯಿದೆಯೇ? ಗುರಿಯಿದ್ದರೆ ಆ ಗುರಿಯೇನು? ಈ ಪ್ರಶ್ನೆ ಹೊಸತೇನಲ್ಲ. ಬುದ್ಧಿಜೀವಿಗಳೆಂಬ ಮನುಷ್ಯ ಜನಾಂಗ ವಿಶ್ವದ ಇತಿಹಾಸದಲ್ಲಿ ಎಂದಿನಿಂದ ಇದೆಯೋ ಅಂದಿನಿಂದ ಈ ಪ್ರಶ್ನೆ ಇದೆ. ವಿಶ್ವದ ಪ್ರಾಚೀನತಮ ಸಾಹಿತ್ಯವಾದ ವೇದೋಪನಿಷತ್ತುಗಳಿಂದ ರೂಪಿತವಾದ ಸನಾತನ ಧರ್ಮದಲ್ಲಿ ಜೀವನದ ಗುರಿಯೇನು? ಜೀವನದ ಅರ್ಥವೇನು? ಎಂಬ ಪ್ರಶ್ನೆಗಳ ಉತ್ತರವನ್ನು ಕಂಡುಹಿಡಿದವರೇ ಋಷಿಗಳು. ಋಷಿಗಳು ಎಂದರೆ ಜೀವನದ ಗುರಿ ಮತ್ತು ಅರ್ಥವನ್ನು ತಿಳಿದುಕೊಂಡು ಸಾಧನೆ ಮಾಡಿ ಗುರಿಯನ್ನು ತಲುಪಿದವರು. ಸನಾತನ ಧರ್ಮದ ಸಾಹಿತ್ಯವೇ ಋಷಿಗಳ ಅನುಭವ ವಿವರಣೆಗಳು. ಋಷಿಗಳು ಒಂದೇ ಕಾಲಕ್ಕೆ ಸೀಮಿತವಲ್ಲ. ಯಾವ ಕಾಲದಲ್ಲಿಯಾದರೂ, ಯಾವ ಭಾಷೆಯಲ್ಲಾದರೂ ಋಷಿಗಳು ಬರಬಹುದು. ಈ ಲೇಖನದಲ್ಲಿ ಪ್ರಧಾನವಾಗಿ ಸನಾತನ ಧರ್ಮದ ಸಾಹಿತ್ಯದಲ್ಲಿ ಋಷಿಗಳು ನೀಡಿರುವ ಜೀವನದ ಅರ್ಥವನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಸನಾತನ ಧರ್ಮದ ಅಪಾರ ಸಾಹಿತ್ಯದಲ್ಲಿ ಜೀವನದರ್ಥವೇನು ಎಂಬ ಪ್ರಶ್ನೆಗೆ ಸಿಗುವ ಉತ್ತರವೇ ಪುರುಷಾರ್ಥ.




**ಪುರುಷಾರ್ಥ**

ಈ 'ಪುರುಷಾರ್ಥ' ಪದದಲ್ಲಿ ಎರಡು ಪದಗಳಿವೆ. ಮೊದಲನೆಯದು 'ಪುರುಷ' ಮತ್ತು ಎರಡನೆಯದು 'ಅರ್ಥ'. ಇಲ್ಲಿ 'ಪುರುಷ' ಎಂದರೆ 'ಗಂಡಸು' ಎಂದಲ್ಲ. 'ಪುರುಷ' ಎಂದರೆ ಇಲ್ಲಿ 'ಜೀವ' ಎಂದಾಗುತ್ತದೆ. 'ಪುರುಷ' ಎಂದರೆ 'ಪುರಿಶೇತೇ ಇತಿ ಪುರುಷ' - ದೇಹ ಎಂಬ ಪುರದೊಳಗಿರುವ ಜೀವ' ಎಂದು. 'ಅರ್ಥ' ಎಂದರೆ 'ಪ್ರಯೋಜನ' ಅಥವಾ 'ಗುರಿ ಎಂದು. ಆದ್ದರಿಂದ ಪುರುಷಾರ್ಥ ಎಂದರೆ ಮನುಷ್ಯನ ಜೀವನದ ಅರ್ಥ ಅಥವಾ ಗುರಿ ಎಂದಾಗುತ್ತದೆ. ಜೀವನದ ಅರ್ಥ ಏನು ಎನ್ನುವ ಮೂಲಭೂತ ಪ್ರಶ್ನೆಗೆ ಸನಾತನ ಧರ್ಮದ ನಿಶ್ಚಯಾತ್ಮಕ ಉತ್ತರವೇ 'ಪುರುಷಾರ್ಥ'. ಇಲ್ಲಿ ಪುರುಷಾರ್ಥ ಎನ್ನುವುದು ಒಂದೇ ಗುರಿಯಲ್ಲ. ಇದು ನಾಲ್ಕು ಗುರಿಗಳನ್ನು ಒಳಗೊಂಡಿದೆ. ಆ ನಾಲ್ಕು ಗುರಿಗಳು ಸ್ವತಂತ್ರವಾದ ಗುರಿಗಳಲ್ಲ. ಆ ನಾಲ್ಕೂ ಗುರಿಗಳೂ ಪರಸ್ಪರವಾಗಿ ಸದಾ ಹೆಣೆದುಕೊಂಡಿರುತ್ತವೆ. ಆ ನಾಲ್ಕು ಗುರಿಗಳೇ 'ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ'. ಇವುಗಳನ್ನು ಒಂದೊಂದಾಗಿ ವಿಚಾರ ಮಾಡೋಣ.

**ಧರ್ಮ**

ನಿಸರ್ಗದ ಶಕ್ತಿಗಳ ಆಧಾರದಿಂದ ವಿಶ್ವದ ಚಾಲನೆ ಆಗುತ್ತಿದೆ. ಈ ಶಕ್ತಿಗಳೇ ವಿಶ್ವವನ್ನು ಧರಿಸಿವೆ. ಇದನ್ನೇ ಧರ್ಮ ಎಂದು ಹೇಳಿದೆ. ಉದಾಹರಣೆಗೆ ಬೆಂಕಿಯ ಧರ್ಮ ಅಥವಾ ಲಕ್ಷಣ ಸುಡುವುದು. ನೀರಿನ ಧರ್ಮ ಹರಿಯುವುದು. ಅದಕ್ಕೇ ಧರ್ಮಕ್ಕೆ 'ಧಾರಣಾತ್ ಧರ್ಮ ಇತಿ' ಎಂದರೆ ಧರಿಸುವುದರಿಂದ ಧರ್ಮ ಎಂದು ಹೇಳಿದೆ. ಮಹಾನಾರಾಯಣೋಪನಿಷತ್ತಿನಲ್ಲಿ "ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ"ಎಂದರೆ ಧರ್ಮವು ವಿಶ್ವದಲ್ಲೆಲ್ಲಾ ಪ್ರತಿಷ್ಠೆಗೊಂಡಿದೆ. ಜಗತ್ತಿನಲ್ಲಿ ಕಾಣುವ ಧರ್ಮದ ಹಿಂದೆ ಇನ್ನೆರಡು ತತ್ವಗಳಿವೆ. ಆ ತತ್ವಗಳೇ ಋತ ಮತ್ತು ಸತ್ಯ.ಋತ, ಸತ್ಯ ಮತ್ತು ಧರ್ಮ ಎಂಬ ಕ್ರಮದಲ್ಲಿ ಈ ಮೂರು ತತ್ವಗಳು ಪರಸ್ಪರ ಸಂಬಂಧಗೊಂಡಿವೆ. ಋತ ಎಂದರೆ ವಿಶ್ವಾಂತರ್ಗತವಾದ ತತ್ವಗಳು ಅಪ್ರಕಟಿತ ಸ್ಥಿತಿಯಲ್ಲಿರುವುದು.ಋತ ತತ್ವಗಳು ಮೂಲಕ್ಕನುಗುಣವಾಗಿ ಪ್ರಕಟಗೊಂಡಾಗ ಅದೇ ಸತ್ಯವಾಗುತ್ತದೆ. ಆ ಸತ್ಯ ಆಚರಣೆಗೆ ಬಂದಾಗ 'ಧರ್ಮ' ಎನಿಸುತ್ತದೆ. ಉದಾಹರಣೆಗೆ, ವ್ಯಕ್ತಿಯ ಮನಸ್ಸಿನೊಳಗೆ ಒಂದು ಸ್ವತಂತ್ರ ಭಾವನೆ ಬಂದಾಗ ಅದು ಅಪ್ರಕಟಿತ ಸ್ಥಿತಿಯಲ್ಲಿರುವುದರಿಂದ ಅದು ಋತವಾಗಿರುತ್ತದೆ. ಆ ವ್ಯಕ್ತಿಯು ತನ್ನೊಳಗಿನ ಆ ಭಾವನೆಯನ್ನು ಹಾಗೆಯೇ ಮಾತಿನಲ್ಲಿ ಪ್ರಕಟಿಸಿದಾಗ ಅದು ಸತ್ಯವಾಗುತ್ತದೆ. ಪ್ರಕಟಿಸಿದ ಸತ್ಯವನ್ನು ಆ ವ್ಯಕ್ತಿ ಆಚರಣೆಗೆ ತಂದಾಗ ಅದು ಧರ್ಮ ಎಂದೆನಿಸುತ್ತದೆ. ಆದ್ದರಿಂದಲೇ ಉಪನಿಷತ್ತು "ಸತ್ಯಂ ವದ; ಧರ್ಮಂ ಚರ", ಎಂದರೆ "ಸತ್ಯವನ್ನು ನುಡಿ, ಧರ್ಮವನ್ನು ಆಚರಿಸು" ಎಂದು ಉಪದೇಶಿಸುತ್ತದೆ. ಮುಖ್ಯವಾಗಿ ವ್ಯಕ್ತಿಯು ಧರ್ಮವನ್ನು ತಿಳಿದು ಆಚರಿಸಿದಾಗ ಅದರಿಂದ ಸ್ವಂತ ಹಿತ ಮಾತ್ರವಲ್ಲದೇ, ಪರರಿಗೆ ಕೆಡುಕನ್ನುಂಟುಮಾಡದೇ ಲೋಕ ಹಿತವೂ ಆಗಬೇಕು. ಆದ್ದರಿಂದಲೇ ಸನಾತನ ಧರ್ಮದ ಸಾಹಿತ್ಯದಲ್ಲಿ ಮನಸ್ಸು, ಮಾತು ಮತ್ತು ಕಾರ್ಯ ಇವುಗಳು ಮನುಷ್ಯನಲ್ಲಿ ಶುದ್ಧವಾಗಿರಬೇಕೆಂದು ಒತ್ತಿ ಒತ್ತಿ ಹೇಳಿದೆ.

ಮನುಷ್ಯನ ಜೀವನದಲ್ಲಿ ಋತ, ಸತ್ಯ ಹಾಗೂ ಧರ್ಮಕ್ಕೆ ಸಂಬಂಧಿಸಿದಂತೆ ಇನ್ನೊಂದು ತತ್ವ ಮುಖ್ಯವಾಗಿದೆ. ಆ ತತ್ವವೇ ಋಣ. ನಮಗೆಲ್ಲಾ ತಿಳಿದಂತೆ ಮನುಷ್ಯ ಜನ್ಮ ಮಿಕ್ಕೆಲ್ಲಾ ಪ್ರಾಣಿಗಳಿಗಿಂತ ವಿಭಿನ್ನವಾದುದು. ಏಕೆಂದರೆ ಮನುಷ್ಯ ಸಂಘಜೀವಿ ಮತ್ತು ವಿಚಾರ ಶಕ್ತಿಯನ್ನು ಹೊಂದಿದ್ದಾನೆ. ಪ್ರತಿಯೊಬ್ಬ ವ್ಯಕ್ತಿಯೂ ಹುಟ್ಟುವಾಗಲೇ ಐದು ರೀತಿಯ ಋಣದ ಜೊತೆ ಹುಟ್ಟುತ್ತಾನೆ. ಇಲ್ಲಿ 'ಋಣ' ಎಂದರೆ ಸಾಲವಲ್ಲ. ಋಣ ಎಂದರೆ ಸಂತೋಷದಿಂದ, ಸಂತೋಷಮಯ ಜೀವನ ನಡೆಸಲು ಮಾಡಬೇಕಾದ ಕರ್ತವ್ಯಗಳು. ಮನುಷ್ಯನಿಗೆ ಐದು ರೀತಿಯ ಋಣಗಳಿವೆ. ಅವೇ 'ದೇವ, ಋಷಿ, ಪಿತೃ, ಮನುಷ್ಯ ಮತ್ತು ಭೂತ' ಋಣಗಳು. ಈ ಐದು ಋಣಗಳೇ ಪ್ರತಿಯೊಬ್ಬ ಮನುಷ್ಯನೂ ಮಾಡಬೇಕಾದ ಕೃತಜ್ಞತಾ ಪೂರ್ವಕ ಕಾರ್ಯಗಳು. ಹೇಗೆಂದರೆ ದೇವ ಋಣದಲ್ಲಿ ನಾವು ನಮ್ಮ ಜೀವನದ ಒಳಿತಿಗೆ ನೀಡಿರುವ ನಿಸರ್ಗದ ಹಿಂದಿರುವ ಗುಪ್ತವಾದ ದೈವೀ ಶಕ್ತಿಗಳಿಗೆ ಪೂಜಾ ರೂಪದಲ್ಲಿ ಕೃತಜ್ಞತೆ ತೋರುವುದು. ಋಷಿ ಋಣದಲ್ಲಿ ನಾವು ನಮ್ಮ ಜೀವನವನ್ನು ಸಂತೋಷದಿಂದ ನಡೆಸುವುದಕ್ಕೆ ಬೇಕಾದ ವಿದ್ಯೆ ಹಾಗೂ ಜ್ಞಾನ ನೀಡುವ ಅಪಾರ ಸಾಹಿತ್ಯವನ್ನು ರಚಿಸಿದ ಋಷಿಗಳಿಗೆ ಕೃತಜ್ಞತೆ ಅರ್ಪಿಸುವುದು. ನಾವು ಋಷಿಗಳ ಸಾಹಿತ್ಯವನ್ನು ಯಥಾಶಕ್ತಿ ಚೆನ್ನಾಗಿ ಓದಿ ಆಚರಣೆಗೆ ತಂದು ಮತ್ತೊಬ್ಬರಿಗೆ ಹೇಳಿಕೊಟ್ಟಾಗ ಋಷಿಗಳಿಗೆ ಕೃತಜ್ಞತೆ ತೋರಿದಂತಾಗುತ್ತದೆ. ಪಿತೃ ಋಣದಲ್ಲಿ ನಾವು ನಮ್ಮನ್ನು ಪಾಲಿಸಿ ಪೋಷಿಸಿದ ತಾಯಿ, ತಂದೆ, ಅಜ್ಜ, ಅಜ್ಜಿ, ಹಾಗೂ ಹಿರಿಯರುಗಳಿಗೆ ತೋರಿಸುವ ಕೃತಜ್ಞತೆಗಳು. ಮನುಷ್ಯ ಋಣದಲ್ಲಿ ನಮ್ಮ ಪರಿಸರದ ಸಹೋದರ, ಸಹೋದರಿಯರು ಹಾಗೂ ಬಂಧು ಮಿತ್ರರುಗಳಿಗೆ ಮಾಡುವ ಕೃತಜ್ಞತಾಪೂರ್ವಕ ಕಾರ್ಯಗಳು. ಭೂತ ಋಣದಲ್ಲಿ ನಾವು ನಮ್ಮೊಡನೆ ಜಗತ್ತಿನಲ್ಲಿ ವಾಸಿಸುತ್ತಿರುವ ಪ್ರಾಣಿಗಳಿಗೆ ಕೃತಜ್ಞತೆಯನ್ನು ತೋರುವುದು. ಒಟ್ಟಿನಲ್ಲಿ ನೋಡಿದಾಗ ಮನುಷ್ಯನ ಧರ್ಮ ಏನು ಎಂದಾಗ ಜಗತ್ತಿನ ಋತ ಹಾಗೂ ಸತ್ಯಗಳನ್ನು ಅರಿತು ತನ್ನ ಜೀವನದಲ್ಲಿ ಸಂತೋಷದಿಂದ ಇದ್ದು, ಇತರರಿಗೂ ಸಂತೋಷವನ್ನು ಉಂಟುಮಾಡಬೇಕಾದರೆ ಮೇಲೆ ಹೇಳಿದ ಋಣಗಳೆಂಬ ಕೃತಜ್ಞತಾಪೂರ್ವಕ ಕರ್ತವ್ಯಗಳನ್ನು ಸಂತೋಷದಿಂದ ಮಾಡುವುದು. ಆದ್ದರಿಂದಲೇ ಧರ್ಮ ಮನುಷ್ಯನ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಸ್ಥಾನ ಪಡೆದಿದೆ. ಧರ್ಮದ ಮೂಲಕ ಮಾತ್ರ ಮನುಷ್ಯನಿಗೆ ಜೀವನದಲ್ಲಿ ಸದಾ ಶಾಂತಿ ಹಾಗೂ ಆನಂದ ಪಡೆಯಲು ಸಾಧ್ಯ. ಧರ್ಮವನ್ನು ಎಲ್ಲರಿಗೂ ತಿಳಿದು ಆಚರಿಸುವಂತೆ ವಿಶದವಾಗಿ ಹೇಳಿರುವ ಎರಡು ಮಹಾ ಇತಿಹಾಸ ಗ್ರಂಥಗಳೇ ರಾಮಾಯಣ ಹಾಗೂ ಮಹಾಭಾರತ.

(ಮುಂದಿನ ಪುಟಕ್ಕೆ...)


Copyright © KCO – Brindavana

## ಜೀವನದರ್ಥ- ಪುರುಷಾರ್ಥ

ಶ್ರೀ ರಾಮ ಹಾಗೂ ಶ್ರೀ ಕೃಷ್ಣ ಧರ್ಮವನ್ನು ತೋರಿಸುವ ವ್ಯಕ್ತಿಗಳು. ಮನುಷ್ಯನಿಗೆ ಇಹ ಜೀವನ ಹಾಗೂ ನಂತರದ ಪಾರಮಾರ್ಥಿಕ ಗತಿ ಎರಡೂ ಮುಖ್ಯ. ಯೋಗಿ ಹಾಗೂ ಜ್ಞಾನಿಯಾದ ಶ್ರೀರಂಗ ಸದ್ಗುರುವಿನ "ಧರ್ಮವು ಐಹಿಕ, ಪಾರಮಾರ್ಥಿಕ ಬಾಳಾಟಗಳಿಗೆ ಸೇತುವಾಗಿದೆ", ಎಂಬ ಮಾತು, ಬಾಳಿನಲ್ಲಿ ಏಕೆ ಧರ್ಮವನ್ನು ಮುಂದಿಟ್ಟುಕೊಳ್ಳಬೇಕು ಎಂದು ಹೇಳುತ್ತದೆ. ಈಗ ಧರ್ಮದ ಮೂಲಕ ಮುಂದಿನ ಗುರಿ ಅರ್ಥವನ್ನು ನೋಡೋಣ.

### ಅರ್ಥ

ಜೀವನದ ಎರಡನೆಯ ಗುರಿಯೇ ಅರ್ಥ. ಪ್ರಧಾನವಾಗಿ 'ಅರ್ಥ' ಎನ್ನುವ ಪದ ಪುರುಷಾರ್ಥಗಳಲ್ಲಿ ಬಂದಾಗ, 'ಹಣ' ಎನ್ನುವುದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ತೆಗೆದುಕೊಂಡಾಗ 'ಅರ್ಥ' ಎಂದರೆ ಪ್ರಯೋಜನ ಎಂದಾಗುತ್ತದೆ. ಆದರೆ ಈ ಸಂದರ್ಭದಲ್ಲಿ 'ಹಣ' ಅಥವಾ 'ಧನ'ವನ್ನು ಸಂಪಾದಿಸುವ ಗುರಿ ಎಂದು ಅರ್ಥದ ವಿಚಾರ ಮಾಡೋಣ.

ನಮಗೆಲ್ಲಾ ತಿಳಿದಂತೆ ಹಣ ಎಲ್ಲರಿಗೂ, ಅದರಲ್ಲೂ ಗೃಹಸ್ಥರಿಗೆ ಅತ್ಯಗತ್ಯ. ಹಾಗೆಯೇ ಎಲ್ಲರಿಗೂ ತಿಳಿದ ವಿಷಯವೇನೆಂದರೆ ಹಣ ಒಂದು ವ್ಯಾವಹಾರಿಕ ಮಾಧ್ಯಮ. ಹಣದ ಮೂಲಕವೇ ನಾವು ಎಲ್ಲಾ ವಸ್ತುಗಳನ್ನೂ ಗಳಿಸುವುದು. ನಾವು ಹಣದ ಮೂಲಕ ಅನ್ನ, ವಸ್ತ್ರ, ವಸತಿ, ವಾಹನ ಮತ್ತು ಅನೇಕ ಲೌಕಿಕ ಸುಖ ನೀಡುವ ವಸ್ತುಗಳನ್ನು ಸಂಪಾದಿಸುತ್ತೇವೆ. ಅರ್ಥಶಾಸ್ತ್ರವನ್ನು ರಚಿಸಿದ ಜ್ಞಾನಿ ಹಾಗೂ ಮಹಾ ಮೇಧಾವಿಯಾದ ಕೌಟಿಲ್ಯನು "ಯತಃ ಸರ್ವ ಪ್ರಯೋಜನ ಸಿದ್ಧಿಃ ಸಃ ಅರ್ಥಃ", ಎಂದರೆ "ಯಾವುದರಿಂದ ಎಲ್ಲ ರೀತಿಯ ಪ್ರಯೋಜನಗಳು (ನಮಗೆ) ಉಂಟಾಗುವುದೋ ಅದೇ ಅರ್ಥ" ಎಂದು ಹೇಳಿದ್ದಾನೆ.

ಹಣಕ್ಕೆ ಪ್ರಬಲ ಶಕ್ತಿಯಿದೆ. ಈ ಕಾರಣದಿಂದಲೇ ಜೀವನದ ಬಹು ಕಾಲ ಹಣ ಗಳಿಸುವುದರಲ್ಲಿ ವ್ಯಯವಾಗುತ್ತದೆ.

ಹಣ ಗಳಿಕೆಯಲ್ಲಿ ಎರಡು ಮಾರ್ಗಗಳಿವೆ. ಒಂದು ಧರ್ಮ ಮಾರ್ಗ, ಎರಡನೆಯದು ಅಧರ್ಮ ಮಾರ್ಗ. ಹಣವನ್ನು ಧರ್ಮ ಮಾರ್ಗದಲ್ಲಿ ಸಂಪಾದಿಸುವಾಗ ಮನಸ್ಸಿಗೆ ಶಾಂತಿ ಹಾಗೂ ಸಂತೋಷವಿರಬೇಕು. ಹಣ ಸಂಪಾದನೆಯಲ್ಲಿ ಕಷ್ಟವಿದ್ದರೂ ಮನಶ್ಶಾಂತಿ ಕೆಡಬಾರದು. ಅಧರ್ಮ ಮಾರ್ಗದಲ್ಲಿ ಸಂಪಾದಿಸಿದ ಹಣ ಅಧಮವಾದುದು ಮತ್ತು ಅದರ ಜೊತೆಗೆ ಮನಸ್ಸಿಗೆ ಅಶಾಂತಿಯನ್ನು ತರುವುದಲ್ಲದೆ, ಕಷ್ಟಗಳನ್ನು ತರುತ್ತದೆ. ಎಷ್ಟು ಹಣ ಸಂಪಾದಿಸಬೇಕು? ಎನ್ನುವ ಪ್ರಶ್ನೆಗೆ ಉತ್ತರ ನೀಡುವುದು ಸುಲಭವಲ್ಲವಾದರೂ ಮೂರು ಸ್ತರಗಳನ್ನು ಹೇಳಬಹುದು. ಅವುಗಳೇ, ಅಗತ್ಯವಿದ್ದಷ್ಟು, ಆಸೆಗಳಿದ್ದಷ್ಟು ಮತ್ತು ದುರಾಸೆಗಳಿದ್ದಷ್ಟು.ಈ ಮೂರು ಸ್ತರಗಳಲ್ಲಿ ಮೂರನೆಯ ಸ್ತರ ಅಧರ್ಮ ಮಾರ್ಗಕ್ಕೆ ಎಳೆಯುವ ಸಾಧ್ಯತೆಗಳಿವೆ. ಈ ಮೂರು ಸ್ತರಗಳಲ್ಲಿ ಮೂರನೆಯ ಸ್ತರ ಅಧರ್ಮ ಮಾರ್ಗಕ್ಕೆ ಎಳೆಯುವ ಸಾಧ್ಯತೆಗಳಿವೆ. ಆದ್ದರಿಂದ ಧರ್ಮ ಮಾರ್ಗದ ಮೂಲಕ ತನ್ನ ಶಕ್ತಿಯಿದ್ದಷ್ಟು ಹಣವನ್ನು ಸಂಪಾದಿಸಬೇಕು. ಧರ್ಮದಿಂದ ಸಂಪಾದಿಸಿದ ಹಣವನ್ನು ಹೇಗೆ ಉಪಯೋಗಿಸಬೇಕು? ಎನ್ನುವ ಪ್ರಶ್ನೆಗೆ ಉತ್ತರವೇ ಜೀವನದ ಅಗತ್ಯಗಳ ಪೂರೈಕೆ ಮತ್ತು ಒಳ್ಳೆಯ ಆಸೆಗಳ ಪೂರೈಕೆ. ಇವುಗಳ ಜೊತೆಗೆ ಶಕ್ತಿಯಿದ್ದಷ್ಟು ದಾನವನ್ನು ಮಾಡಬೇಕು.ದಾನ ಮಾಡುವುದರಿಂದ ಧರ್ಮ ಪ್ರಜ್ಞೆ ಹೆಚ್ಚುತ್ತದೆ. ಆದ್ದರಿಂದಲೇ ಮೊದಲು ಧರ್ಮವನ್ನು ಅರಿತು ನಂತರ ಅರ್ಥ ಅಥವಾ ಹಣದ ಗುರಿಯನ್ನು ಸಾಧಿಸಬೇಕು.

### ಕಾಮ

ಜೀವನದ ಮೂರನೆಯ ಗುರಿಯೇ ಕಾಮ. ಧರ್ಮ ಮಾರ್ಗದಿಂದ ಹಣ ಗಳಿಸಿದ ಮೇಲೆ, ಧರ್ಮ ಪ್ರಜ್ಞೆಯಿಂದ ತನ್ನ ದೈಹಿಕ ಮತ್ತು ಮಾನಸಿಕ ಮಾಧ್ಯಮಗಳಿಂದ ಅನುಭವಿಸುವ ಆಸೆಗಳನ್ನು 'ಕಾಮ' ಎನ್ನುವುದು. ಆದ್ದರಿಂದಲೇ "ಯತ್ರ ಸರ್ವೇಂದ್ರಿಯ ಪ್ರೀತಿಃ ಸ ಕಾಮಃ" ಎಂದರೆ "ಎಲ್ಲಿ ಎಲ್ಲಾ ಇಂದ್ರಿಯಗಳಿಗೂ ಸಂತೋಷವಾಗುತ್ತದೆಯೋ ಅದೇ ಕಾಮ" ಎನ್ನುವುದು. ಹೇಗೆ ಅರ್ಥ(ಹಣ)ವಿಲ್ಲದೆ ಜೀವನ ನಡೆಯುವುದಿಲ್ಲವೋ ಹಾಗೆಯೇ ಕಾಮವಿಲ್ಲದ ಜೀವನದಲ್ಲಿ ಉತ್ಸಾಹವೇ ಇರುವುದಿಲ್ಲ. ಜೀವನವೆಂಬ ಗಾಡಿಗೆ ಎರಡು ಚಕ್ರಗಳೇ 'ಅರ್ಥ ಮತ್ತು ಕಾಮ' ಎಂದು ಹೇಳಬಹುದು. ಆದರೆ ಗಾಡಿಯು ಧರ್ಮ ಮಾರ್ಗದಲ್ಲಿ ಹೋದಾಗಲೇ ಸುಖ ಮತ್ತು ಶಾಂತಿ ಇರುವುದು.

ಪ್ರತಿಯೊಬ್ಬರಿಗೂ ಕಾಮ ಅಥವಾ ಆಸೆಗಳಿರುತ್ತವೆ. ಆಸೆಗಳಲ್ಲಿ ಪ್ರಧಾನವಾಗಿ ಎರಡು ರೀತಿಯ ಆಸೆಗಳಿರುತ್ತವೆ. ಒಂದು ಧರ್ಮಬದ್ಧವಾದ ಆಸೆಗಳು ಮತ್ತು ಎರಡನೆಯದು ಅಧರ್ಮದಿಂದ ಕೂಡಿದ ಆಸೆಗಳು. "ಆಸೆಯೇ ದುಃಖಕ್ಕೆ ಕಾರಣ" ಎಂದಾಗ, ಅಲ್ಲಿ "ಅಧರ್ಮದಿಂದ ಕೂಡಿದ ಆಸೆಗಳಿಂದ ದುಃಖಗಳು ಬರುತ್ತವೆ" ಎಂದು ಅರ್ಥ. ಶ್ರೀಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ "ಧರ್ಮಾವಿರುದ್ಧ ಕಾಮೋಸ್ಮಿ ಭರತರ್ಷಭ", ಎಂದರೆ "ಅರ್ಜುನ, ಧರ್ಮಕ್ಕೆ ವಿರೋಧವಿಲ್ಲದ ಕಾಮವು ಯಾವುದುಂಟೋ ಅದು ನಾನಾಗಿರುತ್ತೇನೆ" ಎಂದು ಹೇಳಿದ್ದಾನೆ. ಆದ್ದರಿಂದಲೇ ಸನಾತನ ಧರ್ಮದ ಋಷಿಗಳು ಕಾಮವನ್ನು ಮೂರನೆಯ ಸ್ಥಾನದಲ್ಲಿ ಹೇಳಿದ್ದಾರೆ. ಧರ್ಮವನ್ನು ಅರಿತು, ಧರ್ಮ ಮಾರ್ಗದಲ್ಲಿ ಅರ್ಥವನ್ನು ಗಳಿಸಿ, ಧರ್ಮ ಪ್ರಜ್ಞೆಯಿಂದ ಅನುಭವಿಸಿದ ಕಾಮವು ದೇಹಕ್ಕೆ ಸುಖ ಮತ್ತು ಮನಸ್ಸಿಗೆ ಶಾಂತಿಯನ್ನು ನೀಡುತ್ತದೆ. ಧರ್ಮವನ್ನು ತಿರಸ್ಕಾರ ಮಾಡಿ ಅಧರ್ಮದಿಂದ ಕಾಮವನ್ನು ಅಪ್ಪಿದರೆ ಅದರಿಂದ ಕೇಡಾಗುತ್ತದೆ. ಕಾಮವು ಅಗ್ನಿಯಂತೆ. ಧರ್ಮಕ್ಕನುಗುಣವಾಗಿದ್ದರೆ ಅದರಿಂದ ಸುಖ. ಅಧರ್ಮದಿಂದ ಅನುಭವಿಸಿದ್ದಾದರೆ ಅವರನ್ನೇ ಅದು ಸುಡುತ್ತದೆ.

### ಮೋಕ್ಷ

ಜೀವನದ ಮಹಾಧ್ಯೇಯ ಹಾಗೂ ನಾಲ್ಕನೆಯ ಗುರಿಯೇ ಮೋಕ್ಷ. ಮೋಕ್ಷವೆಂದರೆ ನಿಜವಾದ ಸ್ವಾತಂತ್ರ್ಯ. ಎಲ್ಲರೂ ಸ್ವಾತಂತ್ರ್ಯವನ್ನೇ ಬಯಸುವುದು. ಯಾರೂ ಬಂಧನವನ್ನು ಇಷ್ಟಪಡುವುದಿಲ್ಲ. ಯಾರಿಗೆ ನಿಜವಾದ ಸ್ವಾತಂತ್ರ್ಯವಿದೆ ಎಂದರೆ, ಬ್ರಹ್ಮಾಂಡದ ಎಲ್ಲೆಡೆಯೂ ತುಂಬಿಕೊಂಡಿರುವ ವಿಶ್ವಾತ್ಮಕ ಶಕ್ತಿಯಾದ ಪರಮಾತ್ಮ ನಿಗೆ ಪೂರ್ಣ ಸ್ವಾತಂತ್ರ್ಯ. ಆದ್ದರಿಂದಲೇ ದೇಹವೆಂಬ 'ಪುರ' ದಲ್ಲಿ ಬಂಧನದಿಂದಿರುವ ಜೀವಾತ್ಮನು ಧರ್ಮ-ಅರ್ಥ-ಕಾಮಗಳೆಂಬ ಗುರಿಗಳನ್ನು ಸಾವಧಾನದಿಂದ, ಶ್ರದ್ಧಾ-ಭಕ್ತಿಗಳಿಂದ ಸಾಧಿಸಿ, ಪೂರ್ಣನಾದ ಪರಮಾತ್ಮನನ್ನು ಅನುಭವಿಸಿದಾಗ, ಎಲ್ಲಾ ಬಂಧನಗಳಿಂದ ಬಿಡುಗಡೆ ಹೊಂದಿ ಆನಂದದಿಂದ ತುಂಬಿ ಮೋಕ್ಷದ ಗುರಿಯನ್ನು ತಲುಪುತ್ತದೆ. ಎಲ್ಲರಿಗೂ ಸುಖ ಹಾಗೂ ಸಂತೋಷ ಬೇಕು. ಎಲ್ಲರೂ ಧರ್ಮ-ಅರ್ಥ-ಕಾಮಗಳ ಮಾರ್ಗದಲ್ಲಿ ನಡೆದು ಮೋಕ್ಷವನ್ನು ಸಾಧಿಸಬಹುದು ಎಂದು ಸನಾತನ ಧರ್ಮದ ಋಷಿಗಳು ಧೀರ ವಾಣಿಯಿಂದ ಹೇಳುತ್ತಾರೆ. ಮೋಕ್ಷ ಎಂದರೆ ಮರಣ ಅಲ್ಲ.

### ಸಾರಂಶ

ಈ ಸಂಕ್ಷಿಪ್ತ ಲೇಖನದಲ್ಲಿ ನೋಡಿದಂತೆ ಜೀವನದರ್ಥ ಏನು ಎಂಬ ಪ್ರಶ್ನೆಗೆ ಇರುವ ಸರಿಯಾದ ಉತ್ತರವೇ ಪುರುಷಾರ್ಥಗಳನ್ನು ಸಾಧನೆಯಿಂದ ಪಡೆಯುವುದು. ಯೋಗಿ ಹಾಗೂ ಜ್ಞಾನಿಯಾದ ಶ್ರೀರಂಗ ಸದ್ಗುರುವಿನ ಮಾತಿನಲ್ಲಿ ಹೇಳುವುದಾದರೆ "ಪುರುಷಾರ್ಥಗಳನ್ನು ಹೇಳುವಾಗ ಧರ್ಮ, ಅರ್ಥ, ಕಾಮ, ಮೋಕ್ಷ-ಈ ಕ್ರಮವನ್ನು ಬದಲಾಯಿಸಬಾರದು. ಹಾಗೆ ಹೇಳಿರುವುದು ಸರಿಯಾಗಿಯೇ ಇದೆ. ಏಕೆಂದರೆ ಧರ್ಮ-ಮೋಕ್ಷಗಳೆರಡರ ಹದ್ದುಬಸ್ತಿನಲ್ಲೇ ಅರ್ಥ -ಕಾಮಗಳಿರಬೇಕು. ಜೀವನವು ಅಲ್ಪವಲ್ಲ. ಮಹತ್ತರವಾದುದು. ನಾಲ್ಕು ಪುರುಷಾರ್ಥಗಳಲ್ಲಿ ಯಾವುದನ್ನು ಪಡೆಯದೇ ಹೋದರೂ ಜೀವನ ಅಪೂರ್ಣ."

ಪುರುಷಾರ್ಥಗಳನ್ನು ಪಡೆದು, ತಮ್ಮ ಅನುಭವ ವಾಣಿಯಾದ ವೇದೋಪನಿಷತ್ತುಗಳನ್ನು ನಮಗೆ ನೀಡಿರುವ ಋಷಿಗಳ ಸ್ಫೂರ್ತಿ ಹಾಗೂ ಮಾರ್ಗದರ್ಶನದಿಂದ ನಾವೆಲ್ಲರೂ ಚತುರ್ವಿಧ ಪುರುಷಾರ್ಥಗಳನ್ನು ಸಾಧಿಸುವಂತಾಗಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥಿಸೋಣ. ●

ಸಂಚಿಕೆ
೧೪
ಜನವರಿ, ೨೦೧೪

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



# ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣ್ರಿ...



ಸರಿತಾ ನವಲಿ

ಸಂಕ್ರಾಂತಿ ಹಬ್ಬ ಅಂದಕೂಡಲೇ ನೆನಪಾಗೋದು ಒಂದ ಮಾತ ನೋಡ್ರಿ. "ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣ" ಅಂತ ನಾವು ಅಚ್ಚ ಕನ್ನಡದಾಗ ಹೇಳಿದ್ರ, ಮರಾಠಿ ಮಂದಿ ಇದನ್ನೇ "ತಿಳ್-ಗುಡ್ ಘ್ಯಾ, ಗೋಡ್, ಗೋಡ್ ಬೋಲಾ" ಅಂತ ಹೇಳ್ತಾರ. ಇನ್ನು ನಾನು ಕಾಲೇಜು ಕಲೀಬೇಕಾದ್ರ, ಆ ಕಾಲೇಜಿನ ಕಟ್ಟಿ ಹತ್ತಿ ಭಾರಿ ಗುಡ್ಡ ಕಡಿದ ಹಾಕೇವಿ ಅಂತ ತಿಳ್ಕೊಂಡಿದ್ದ ಕೆಲವು ಹುಡುಗೂರು, ಹುಡಿಗೇರು "Take Sweet, Talk Sweet" ಅಂತ ಸೋಗು ಮಾಡಿಕೋತ ಇಂಗ್ಲೀಷಿನ್ಯಾಗ ಹೇಳ್ತಿದ್ರು ಅಂತ ನೆನಪಾಗ್ತದ. ಆದ್ರ ಭಾಷಾ ಯಾವುದ ಇದ್ರೂ, ಒಬ್ಬರಿಗೊಬ್ಬರು ಎಳ್ಳು-ಬೆಲ್ಲ ಕೊಟ್ಟು ಒಳ್ಳೇ ಮಾತಾಡೋಣ ಅನ್ನೋ ಮಾತಂತೂ, ಈ ಎಳ್ಳು-ಬೆಲ್ಲ ಹೆಂಗ ಯಾವಾಗಲೂ ಜೊತಿ-ಜೊತಿಯಾಗಿ ಇರತಾವೋ ಹಂಗೇ ಸಂಕ್ರಾಂತಿ ಹಬ್ಬದ ಜೋಡಿ ಉಳಕೋತದ, ಹೌದಲ್ಲೋ?

ನಾನೊಂದು ಐದಾರು ವರ್ಷದಕಿ ಇದ್ದಾಗಿಂದ ಈ ಹಬ್ಬ-ಹುಣ್ಣವಿ, ಗುಡಿ-ಜಾತ್ರಿ ಅನ್ನೋದನ್ನ ಮತ್ತ ನಮ್ಮ ಊರಾಗ ಎಲ್ಲಾ ಹಬ್ಬಗಳನ್ನ ಭಾಳ ಛಂದಾಗಿ ಮಾಡಿಕೋತ ಬಂದಿದ್ದನ್ನ ನೋಡೀನಿ. ಇವತ್ತಿಗೂ ನಮ್ಮ ಮನ್ಯಾಗ ಎಲ್ಲ ಹಬ್ಬ, ಪೂಜಾ, ಸಂಪ್ರದಾಯ, ಪದ್ಧತಿಗಳನ್ನು ಮೊದಲಿನ ಹಂಗ ಪಾಲಿಸಿಕೊಂಡು ಬಂದದ ಅನ್ನೋ ಮಾತಂತೂ ಖರೇ ಅದ ನೋಡ್ರಿ. ಇದರ ಕ್ರೆಡಿಟ್ ಎಲ್ಲಾ ನಮ್ಮ ಅಜ್ಜಿಗೆ ಹೋಗ್ತದ. ಯಾಕಂದ್ರ ಆಕಿ ತನ್ನ ಸೊಸಿ,ಅಂದ್ರ ನಮ್ಮಮ್ಮಗ ಮತ್ತ ಮೊಮ್ಮಕ್ಕಳು, ಅಂದ್ರ ನನಗ ಮತ್ತು ನನ್ನ ಅಕ್ಕಂದಿರಿಗೆ ಅಂಥಾ ಟ್ರೇನಿಂಗ್ ಕೊಟ್ಟು ಹೋಗ್ಯಾಳ. ಪಂಚಾಂಗದಾಗ ತಿಥಿ-ನಕ್ಷತ್ರಗಳನ್ನ ಹೆಂಗ ನೋಡಬಕು ಅನ್ನೋದರಿಂದ ಹಿಡಿದು ಹಬ್ಬದ ದಿನ ಮಾಡೋ ಪೂಜಾ, ವಿಶೇಷವಾದ ಅಡಿಗಿ ಪದಾರ್ಥಗಳು, ಸಿಹಿ ಭಕ್ಷಗಳು, ಹೀಂಗ ಎಲ್ಲ ಹೇಳಿಕೊಡ್ತಿದ್ದಳು. ಇದನ್ನೆಲ್ಲ ಕಲೀಲಿಕ್ಕೆ ನಮಗೆಲ್ಲ ಎಲ್ಲಿ ಬೋರ್ ಆಗ್ತದೇನೋ ಅಂತ ಎಲ್ಲಾದಕ್ಕೂ ಒಂದೊಂದು ಕಥಿ ಕಟ್ಟಿ, ಭಾಳ ಛಂದಾಗಿ ಹೇಳ್ತಿದ್ದಳು. ಒಂದ್ಸಲ ಸಂಕ್ರಾಂತಿ ಹಬ್ಬ ಬಂದಾಗ ನಾನು, " ಅವ್ವ, ಸಂಕ್ರಮಣದ ದಿನ ಸಂಜೀಮುಂದ ಎಲ್ಲಾರೂ ಒಬ್ಬರಿಗೊಬ್ಬರು ಕುಸುರೆಳ್ಳ(ಎಳ್ಳು ಮತ್ತು ಬೆಲ್ಲ/ ಸಕ್ಕರೆ ಪಾಕ ಬೆರೆಸಿ ಮಾಡಿದ ಪುಟ್ಟ,ಪುಟ್ಟ ಮಿಠಾಯಿ) ಕೊಟ್ಟು, ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣ ಅಂತ ಯಾಕ ಹೇಳ್ತಾರ" ಅಂತ ಕೇಳಿದೆ. ಅದಕ್ಕ ನಮ್ಮಜ್ಜಿ, "ಮನುಷ್ಯರು ಅಂತ ಇರೋ ನಾವೆಲ್ಲ, ಒಂದಲ್ಲ ಒಂದ ಸಲ ಒಬ್ಬರ ಜತಿಗೆ ಒಬ್ಬರು ಝುಗಳ ಆಡಿರ್ತೀವಿ, ಬೈಕೊಂಡಿರ್ತೀವಿ. ಒಬ್ಬರ ಮ್ಯಾಲೆ ಒಬ್ಬರು ಸಿಟ್ಟು ಮಾಡಿಕೊಂಡು ಮಾತಾಡೋದು ಬಿಟ್ಟಿರತೀವಿ. ಹೌದಲ್ಲೋ? ಆದರ ಜೀವನದಾಗ, ಈ ಸಮಾಜದಾಗ ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಬಕು, ಸಂತೋಷದಿಂದ ಇರಬಕು ಅಂತ, ಈ ಹಬ್ಬದ ಸಂಭ್ರಮದಾಗ ಎಲ್ಲಾರೂ ಮನಸ್ಸಿನ್ಯಾಗ ಹಳೇ ಸಿಟ್ಟು ಏನ ಇದ್ದರೂ ಮರತು ಒಳ್ಳೇಯವರಾಗಿರಬೇಕಂತ ಹಿಂದಿನ ಕಾಲದವರು ಈ ಥರದ ಒಂದು ರೂಢಿ ಪಾಲಿಸ್ಕೋತ ಬಂದಾರ, ಒಬ್ಬರ ಮನಿಗೆ ಒಬ್ಬರು ಹೋಗಿ ಕುಸುರೆಳ್ಳು ಕೊಟ್ಟು ಬರತಾರ. ಅವರ ಬಳಗದವರಿಗೆಲ್ಲ ಪೋಸ್ಟಿನ್ಯಾಗ ಎರಡು ಕಾಳು ಕುಸುರೆಳ್ಳೂ ಕಳಸ್ತಾರ, ನೀನೂ ನೋಡಿದಿ" ಅಂತ ಹೇಳಿದಳು. ಇದರ ಜೊತಿಗೆ ಒಂದು ಕಥಿನೂ ಸೇರಿಸಿದಳು. ನಮ್ಮ ಹಳ್ಳ್ಯಾಗ ಬಂಡ್ಯಾ ಮತ್ತು ಗುಂಡ್ಯಾ ಅಂತ ಇಬ್ಬರು ಹುಡುಗರು ಇದ್ದರು. ಅವರದ ಈ ಕಥಿ. ಅವರಿಬ್ಬರೂ ಯಾವಾಗಲೂ ಚಿಣ್ಣಿ-ದಾಂಡು, ಗೋಲಿ-ಗುಂಡ, ಲಗೋರಿ ಅಂತ ಆಡ್ಕೋತ ಇರ್ತಿದ್ರು. ಹೀಂಗ ಒಮ್ಮೆ ಆಟದೊಳಗ ಇಬ್ಬರೂ ಝುಗಳಾ ಆಡಕೊಂಡು, ಸಿಟ್ ಮಾಡಿಕೊಂಡು ತಮ್ಮ,ತಮ್ಮ ಮನೀಗೆ ಹೋದ್ರು. ಬಂಡ್ಯಾ ತನ್ನ ಮನ್ಯಾಗೂ ತಮ್ಮನ ಜೋಡಿ ಝುಗಳಾ ಮುಂದುವರೆಸಿ ಸಿಟ್ ಮಾಡಿಕೊಂಡು, ಊಟಾನೂ ಮಾಡಲಾರದೇ, ಯಾರ ಜೋಡಿನೂ ಮಾತ ಆಡಲಾರದೇ ಒಂದು ಮೂಲ್ಯಾಗ ಸೆಟಗೊಂಡು ಕೂತ. ಅವರ ಅವ್ವ,ಅಪ್ಪ ಎಷ್ಟು ಸಮಾಧಾನ ಮಾಡಿದ್ರೂ ಕೇಳಲಿಲ್ಲ. ಸಂಜಿ ಆಗಿ ಕತ್ಲಾಕೋತ ಬಂದ್ರೂ ಬಂಡ್ಯಾ ಮೂಲಿ ಬಿಟ್ಟು ಏಳಲಿಲ್ಲ. ನಮ್ಮ ಹಳ್ಳಿಗೆ ಆಗಿನ್ನೂ ಕರೆಂಟ್ ಬಂದಿರಲಿಲ್ಲ. ಖಂದೀಲಿನ ಬೆಳಕಿನ್ಯಾಗ ರಾತ್ರಿ ಕಳೀಬೇಕಾಗಿತ್ತು. ಅದ್ರ ಜೊತಿಗೆ ಬಯಲುಸೀಮಿಯ ಒಣ ಪ್ರದೇಶ. ಮುಂಜಾನಿಂದ ಇರತಿದ್ದ ಬಿಸಲಿನ ಝಳ ಸಂಜೀಗೆ ಸ್ವಲ್ಪ ಕಡಿಮೆಯಾಗಿ ತಂಪು ಆಗಲಿಕ್ಕೆ ಸುರುವಾಗತಿತ್ತು. ಆಗ ಅಲ್ಲಿನ ಮಣ್ಣಿನ ಮನಿ ಮಾಳಿಗಿಯಿಂದ ಸಣ್ಣ,ಸಣ್ಣ ಕೆಂಪು ಚೇಳು ಕೆಳಗ ಉದುರಿತಿದ್ದವು. ಖಂದೀಲಿನ ಮಿಣಿ-ಮಿಣಿ ಬೆಳಕಿನ್ಯಾಗ ಕಣ್ಣಿಗೂ ಬೀಳ್ತಿರಲಿಲ್ಲ. ಅವತ್ತ ಊಟಾನೂ ಮಾಡಲಾರದೆ ಮೂಲ್ಯಾಗ ಸೆಟಗೊಂಡ ಕೂತಿದ್ದ ಬಂಡ್ಯಾಗ ಇಂಥದ್ದೇ ಒಂದು ಚೇಳು ನೆಲದ ಮ್ಯಾಲೆ ಹರ್ಕೋತ ಬಂದು ಸಣ್ಣಾಗಿ ಕುಟಿಕಿತ್ತು. "ಅವ್ವಾ" ಅಂತ ಆಗ ಬಂಡ್ಯಾ ಬಾಯಿ ಬಿಟ್ಟಿದ್ದ. ಇಷ್ಟು ಹೇಳಿದ ನಮ್ಮ ಅಜ್ಜಿ,"ಅದಕ ನಾವು ಝುಗಳ ಎಲ್ಲಾ ಮರತು, ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಬೇಕು" ಅಂತ ತನ್ನ ಕಥಿ ಮುಗಿಸಿದಳು. ನಾನು ಅದಷ್ಟೋ ವರ್ಷ ಈ ಕಥಿ ನಂಬಿದ್ದೆ. ಅದನ್ನು ಪಾಲಿಸಿಕೊಂಡೂ ಬಂದಿದ್ದೆ.



ನಾನು ನಾಲ್ಕನೆತ್ತಿ ಕಲೀಬೇಕಾದ್ರ ಸಂಕ್ರಾಂತಿ ಹಬ್ಬ ಬಂತಲ್ರೀ, ಅವತ್ತ ಸಾಲಿಗಂತೂ ಸೂಟಿ ಇತ್ತು. ಎಲ್ಲಾರ ಮನ್ಯಾಗೂ ಹಬ್ಬದ ಅಡಗಿ ಆಗಿ, ಊಟ ಮಾಡೋದು ತಡಾ ಆಗ್ತದಂತ ಗೊತ್ತೇ ಇದ್ದಿದ್ದರಿಂದ ನಾನು, ಮಗ್ಗಲ ಮನಿ ಪದ್ದಿ(ಪದ್ಮ), ಎದರಿನ ಮನಿ ಹೇಮಾ ಮತ್ತ ಆಕಿ ತಂಗಿ ಪಮ್ಮಿ(ಪ್ರೇಮಾ) ಎಲ್ಲರೂ ನಮ್ಮ ಓಣಿಯೊಳಗ ಒಂದು ಬಾಜು(ಪಕ್ಕ) ಎಂಟು ಮನಿ ಕುಂಟಬಿಲ್ಲೆ ಆಡಲಿಕ್ಕಂತ ಮಣ್ಣಿನ್ಯಾಗ ಗೆರಿ ಬರಕೊಂಡು ಆಟ ಸುರು ಮಾಡಿದ್ವಿ. ಪದ್ದಿ ಮೊದಲು ಆಡಲಿಕ್ಕೆ ಸುರುಮಾಡಿ, ಇನ್ನೇನು ಸೀತಿಮನಿಗೆ(ಆರನೇ ಮನಿ) ಕುಂಟಬಿಲ್ಲೆ ಒಗಿಲಿಕ್ಕ ಹೋದಳು. ಅದು ಅಲ್ಲೆಲ್ಲೋ ದೂರ ಉರುಳಿ ಹೋಗಿ ಬಿದ್ದು ಆಟದಿಂದ ಔಟ್ ಆದಳು. ಹೇಮಾ ಮತ್ತ ಪಮ್ಮಿನೂ ಲಗೂನೇ ಔಟ್ ಆಗಿ ನನ್ನ ಪಾಳಿ ಬಂತು. ಒಂದು ಸಲ ಕುಂಟಬಿಲ್ಲಿ ನನ್ನ ಕೈಗೆ ಬಂದರ ಅಷ್ಟು ಸುಲುಭ ಆಗಿ ಅವರ್ಯಾರಿಗೂ ಸಿಗಂಗಿಲ್ಲ ಅಂತ ಗೊತ್ತೇ ಇದ್ದಿದರಿಂದ ಪದ್ದಿ ಒಂದೊಂದ ಕುಂಟ ನೆಪ ತೆಗಿಲಿಕ್ಕೆ ಸುರುಮಾಡಿದ್ಲು. ಆಟದಾಗ ಆಕಿ 'ಝುಗಳಗಂಟಿ' ಅಂತ ನಮಗೆಲ್ಲಾರಿಗೂ ಗೊತ್ತೇ ಇತ್ತು. ನಾನು ಅವತ್ತ ಆಟದಾಗ ಆಗ್ಲೇ ಎರಡು ಮನಿ ಕಟ್ಟಿ, ಮೂರನೇ ಮನಿಗಂತ ಕಣ್ ಮುಚಗೊಂಡು, ತಲಿ ಮ್ಯಾಲಕ್ಕೆತ್ತಿ 'ಯ್ಯಾಮ್ ಐ ರೈಟ್' ಅಂತ ಕೇಳಕೋತ ಹೊಂಟಿದ್ದೇ ತಡ ಪದ್ದಿ, "ಯೇ ನೀ ಔಟ್, ನೀ ಔಟ್. ಗೆರಿ ಮ್ಯಾಲೆ ಕಾಲ ಇಟ್ಟೇದಿ" ಅಂತ ಒದರಿ ನಾನು ಕಟಕೊಂಡಿದ್ದ ಮನಿಯ ಗೆರಿ ಎಲ್ಲ ಕಾಲಿನಿಂದ ಅಳಿಸಿ ಹಾಕಿ ಕುಣಿಲಿಕ್ಕೆ ಸುರುಮಾಡಿದಳು. ನನಗೂ ಸಿಟ್ಟು ಬಂದು ಪದ್ದೀನ ಬಾಯಿಗ ಬಂದಹಂಗ ಬೈದು, ಇನ್ನ ಮ್ಯಾಲೆ ಆಕಿ ಜೋಡಿ ಆಟ ಏನು, ಮಾತೂ ಆಡಂಗಿಲ್ಲಂತ ಹೇಳಿ 'ರೂ' ಬಿಟ್ಟು ಮನಿಗೆ ಬಂದೆ. ಆಗಲೇ ನಮ್ಮ ಅಜ್ಜ ದೇವರ ಪೂಜಾ ಮುಗಿಸಿ,ನೈವೇದ್ಯ ಮಾಡಿ ಮಂಗಳಾರತಿ ಮಾಡ್ಲಿಕ್ಕೆ ತಯಾರಿ ನಡೆಸಿದ್ದ. ನಾನು "ಘೂಂಗಟಿ ಸಪ್ಪಳ ಕೇಳ್ಸಿದ್ರ, ಹೆಂಗಿದ್ರೂ ಆಟ ಬಿಟ್ ಬರಬೇಕಾಗುತಿತ್ತು. ಅಂತೂ ಸರಿಯಾದ ಹೊತ್ತಿಗೆ ಮನಿಗೆ ಬಂದೆ" ಅಂತ ಮನಸ್ಸಿನ್ಯಾಗ ಅನ್ಕೊಂಡ್ರೂ, ಪದ್ದಿ ಮ್ಯಾಲಿನ ಸಿಟ್ಟು ಮಾತ್ರ ಕಮ್ಮಿ ಆಗಲಿಲ್ಲ. ಅವತ್ತ ಸಂಜೀಗೆ ಎಳ್ಳು ಬೀರಲಿಕ್ಕೆ ಹೋಗಬಕಂತ ಹೊಸ ಬಟ್ಟಿ ಹಾಕ್ಕೊಂಡು ಅಕ್ಕಂದಿರ ಜೋಡಿ ತಯಾರಾದ್ರೂ, ಪದ್ದಿ ಮನಿಗೆ ಹೋಗಂಗಿಲ್ಲ ಅಂತ ಮತ್ತೆ ಸಿಟ್ಟಿಗೆದ್ದೆ. ಮುಂಜಾನೆ ಆಟದಾಗ ಆಕಿ ನನಗ ಮೋಸ ಮಾಡ್ಯಾಳ, ಅದಕ ಆಕಿ ಜೋಡಿ 'ರೂ' ಬಿಟ್ಟೇನಿ ಅಂತ ಅಲ್ಲೇ ಚಾಪಿ ಮ್ಯಾಲೆ ಕೂತಿದ್ದೇ ತಡ ನಮ್ಮ ಅಜ್ಜಿ ಅಡಗಿಮನಿಯೊಳಗಿಂದ ಸೀರಿ ಸೆರಗಿಗೆ ಒದ್ದಿ ಕೈ ಒರಸ್ಕೋತ ಬಂದು..

(..ಮುಂದಿನ ಪುಟಕ್ಕೆ)


Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮



## ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣ...

"ಪಾಪು, ಹಬ್ಬದ ದಿವ್ಸ ಹಂಗೆಲ್ಲ ಝಗಳ ಆಡಿ, ಮಾತು ಬಿಟ್ಟು ಹಟಮಾಡಬಾರದು.ನಿನಗ ಗುಂಡ್ಯಾ-ಬಂಡ್ಯಾನ ಕಥಿ ನೆನಪದನೋ ಇಲ್ಲೋ?" ಅಂತ ಭಾರೀ ಸಮಾಧಾನದಿಂದ ಅಂದ್ಲು ನೋಡ್ರೀ, ಪಟಕ್ಕನೆ ಅಲ್ಲಿಂದ ಎದ್ದು ಓಡಿ ಆಗಲೇ ಗೇಟ್ ಧಾಟಿ ಹೋಗಿದ್ದ ಅಕ್ಕಂದಿರ ಜೋಡಿ ಪದ್ದಿ ಮನಿಗೆ ಹೋಗಿ ಎಳ್ಳು ಬೀರಿ, ಪದ್ದಿಗೆ ಕುಸುರೆಳ್ಳು ಕೊಟ್ಟು, "ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣು" ಅಂತ ಹೇಳಿ ಬಂದಿದ್ದೆ.

ನಾವು ಸಣ್ಣವರಿದ್ದಾಗ ಹೀಂಗ ಒಂದು ಏನಾರ ಅಂಜಿಕಿ ಹುಟ್ಟಿಸಿ ಹಿಂದಿನಿಂದ ಪಾಲಿಸಿಕೊಂಡ ಬಂದ ಪೂಜಾ ಪದ್ಧತಿ, ಸಂಪ್ರದಾಯ, ಜೀವನ ಮಾಡ್ಲಿಕ್ಕೆ ಬೇಕಾಗೋ ಒಳ್ಳೇ ಸಂಸ್ಕಾರಗಳನ್ನು ಕಲಿಸಿಕೊಡತಿದ್ರಲ್ಲ ಅದನ್ನು ದೊಡ್ಡವರೂ ಪಾಲಿಸ್ತಾರ ಅಂತ ತಿಳ್ಕೊಂಡಿದ್ದ ನನಗ ಆಶ್ಚರ್ಯ ಆಗೋವಂಥ ಘಟನಿ ಒಂದು ಇದೇ ಸಂಕ್ರಾಂತಿ ಹಬ್ಬದ ಹಿಂದಿನ ದಿನಾನೇ ನಡೀತು. ಸರಕಾರಿ ಕೆಲಸದೊಳಗಿದ್ದು, ಭಾಳ ವರ್ಷದಿಂದ ನಮ್ಮ ಉತ್ತರ ಕರ್ನಾಟಕದ ಜಿಲ್ಲೆಗಳೊಳಗ ಕೆಲಸ ಮಾಡಿದ್ದ ನಮ್ಮ ತಂದಿಯವರಿಗೆ ಇದೇ ಮೊದಲನೆ ಸರ್ತಿ ಹಳೇ ಮೈಸೂರು ಪ್ರಾಂತದ ಊರಿಗೆ ಟ್ರಾನ್ಸಫರ್ ಆಗಿತ್ತು. ನಮಗೆಲ್ಲರಿಗೂ ಅಲ್ಲಿನ ವಾತಾವರಣ ಮತ್ತ ಅಲ್ಲಿನ ಮಂದಿ ಆಡೋ ಕನ್ನಡ ಭಾಷಾ ಶೈಲಿಯಿಂದ ಹಿಡಿದು ಎಲ್ಲಾ ಹೊಸಥರನ ಅನಿಸಿತ್ತು. ನಮ್ಮಪ್ಪನ ಆಫೀಸ್ನ್ಯಾಗ ಕೆಲಸ ಮಾಡ್ತಿದ್ದ ಕಾರಕೂನ ಒಬ್ಬರು ನಮಗೆಲ್ಲ ಆ ಹೊಸ ಊರಿನ ಸಾಲಿಗಳು, ಕಾಲೇಜು, ಅಂಗಡಿಗಳ ಮಾಹಿತಿ ಎಲ್ಲ ಹೇಳಿ ಕೊಟ್ಟು ನಮಗೆ ಸ್ವಲ್ಪ ಜಾಸ್ತಿನೇ ಪರಿಚಯ ಆಗಿದ್ದರು. ನಾವೆಲ್ಲ ಅಲ್ಲಿಗೆ ಹೊಂದಿಕೊಳ್ಳೋದ್ರೊಳಗ ದಸರಾ, ದೀಪಾವಳಿ ಎಲ್ಲ ಮುಗದಿದ್ದವು. ಆಗ ಒಂದ ದಿನ ಸಂಜಿಮುಂದ ಆ ಕಾರಕೂನ, ತವರುಮನಿಯಿಂದ ಬಾಣಂತನ ಮುಗಿಸಿಕೊಂಡು ಹಿಂದಿನ ದಿನನೇ ಊರಿಗೆ ಬಂದಿದ್ದ ತನ್ನ ಹೆಂಡತಿ ಮತ್ತು ಸಣ್ಣ ಕೂಸಿನ್ನ ನಮ್ಮ ಮನಿಗೆ ಕರಕೊಂಡು ಬಂದು ನಮಗೆಲ್ಲ ಪರಿಚಯ ಮಾಡಿಸಿದ್ರು. ಕೂಸಂತೂ ಭಾಳ ಮುದ್ದಾಗಿತ್ತು. ಅವರ ಹೆಂಡತಿನೂ ಭಾರೀ ಲಕ್ಷಣ ಆಗಿದ್ದಳು. ನಿಟ್ಟಿಂಗ್, ಕಸೂತಿ ಎಲ್ಲ ಕಲ್ತಿದ್ದರ ಜೊತಿ, ಸಕ್ಕರಿ ಅಚ್ಚೂ ಭಾಳ ಛೊಲೋ ಮಾಡ್ತೀನಿ ಅಂತ ಆಕಿ ಹೇಳಿದ ಕೂಡ್ಲೆ ನಮ್ಮಮ್ಮ, "ನಾನು ಸಕ್ಕರಿ ಸಾಮಾನು, ಕುಸುರೆಳ್ಳು ಎಲ್ಲ ಮಾಡ್ತೀನಿ. ಆದ್ರ ನಮ್ಮ ಕಡೆ ಸಕ್ಕರಿ ಅಚ್ಚ ಮಾಡಿ ಗೊತ್ತಿಲ್ಲ.ಈ ಸಲ ಸಂಕ್ರಮಣ ಹಬ್ಬಕ್ಕ ನನಗ ಸಕ್ಕರಿಪಾಕ ಮಾಡಿ ಅಚ್ಚ ಮಾಡೋದನ್ನ ಕಲಿಸಕೊಡ್ರಿ" ಅಂತ ಆಕಿಗಿ ಹೇಳಿದ್ರು. ಹೂಂ ಅಂತ ಹೇಳಿ ಹೋದಕಿ ಸಂಕ್ರಾಂತಿ ಹಬ್ಬಕ್ಕ ಎರಡು ದಿನ ಇರಬಕಾದ್ರ ಒಂದು ದಿನ ಮಧ್ಯಾಹ್ನ ಮನ್ಯಾಗ ಕೂಸಿನ್ನ ಮಲಗಿಸಿ ಬಂದು ನಮ್ಮನಿ ಎದುರು ಇದ್ದ ಆಕಿ ಗೆಳತಿ ಮನ್ಯಾಗ ಸಕ್ಕರಿ ಅಚ್ಚ ಮಾಡೋದನ್ನ ಹೇಳಿಕೊಟ್ಟಳು. ತಟ್ಟಿತುಂಬಾ ಅಚ್ಚುಗಳನ್ನ ಜೋಡಿಸಿ ಇಡೋದ್ರಾಗ ಆಕಿ ನಾದಿನಿ ಬಂದು ಆಕಿಗೆ ಮನಿಗೆ ಬರಬಕಂತ ಅಂತ ಹೇಳಿದ್ಲು. ಕೂಸು ಎದ್ದು ಅಳ್ಳಿಕ್ ಹತ್ಯದ, ಮನಿಗೆ ಬರಬಕು ಅಂತ ಅವರತ್ತಿ ಹೇಳಿ ಕಳಿಸಿದ್ದಳು. ಪಾಪ, ಆಕಿ ಅವಸರದಿಂದ ಮನಿಗೆ ಹೋಗಿದ್ದಳು. ನಾವೆಲ್ಲರೂ ಸಂಜಿ ಮುಂದ ಸಾಲಿಯಿಂದ ಬಂದ ಮ್ಯಾಲೆ ಛಂದ, ಛಂದಾಗಿದ್ದ ಸಕ್ಕರಿ ಅಚ್ಚು ನೋಡಿ ಮುಂದಿನ ವರ್ಷದಿಂದ ನಾವೂ ಮನ್ಯಾಗ ಮಾಡಬಹುದು ಅಂತ ಖುಷಿ ಪಟ್ಟವಿ. ಆದ್ರ ಮರುದಿನ ನಡೆದ ಘಟನಾ ಎಲ್ಲಾರಿಗೂ ಎಂಥಾ ಆಘಾತ ತಂದಿತ್ತು! ಅದ ಆ ಕಾರಕೂನನ ತಾಯಿ, ತಂಗಿ ಮತ್ತ ಹೆಂಡತಿ ಮನೀಮುಂದ ಬಂದಿದ್ದ ಗಂಟಿನ ಸೀರಿ ವ್ಯಾಪಾರಿನ ಹಬ್ಬಕ್ಕ ಸೀರಿ ತೊಗೋಬೇಕಂತ ಕರದಿದ್ರು. ಆ ಸೀರಿ ಹಂಗದ, ಈ ಸೀರಿ ಹೀಂಗದ ಅಂತ ಅನಕೋತ ಆ ಅತ್ತಿ, ನಾದಿನಿ ಇಬ್ಬರೂ ಸೇರಿ ಆ ಸೊಸಿ ಮನಸಿಗೆ ತ್ರಾಸ ಆಗೋ ಅದೆಂಥಾ ಮಾತಾಡಿದ್ರೋ ಏನೋ, ಆ ಕಾರಕೂನನ ಹೆಂಡತಿ ಅಲ್ಲಿಂದೆದ್ದು ಹೋಗಿ ಒಳಗಿನ ರೂಂನ್ಯಾಗ ಉರಲು ಹಕ್ಕೊಂಡು ಆತ್ಮಹತ್ಯಾ ಮಾಡಿಕೊಂಡುಬಿಟ್ಟಳು!


ಚಿತ್ರ ಕೃಪೆ :ಶ್ರೀಪರ್ಣಿಕಾ ಕಂಚಿ

ಇನ್ನು ಓಣ್ಯಾಗಿನ ಮಂದಿ, ನಮ್ಮನ್ಯಾಗ ಎಲ್ಲಾರೂ ಎಂಥಾ ಅನ್ಯಾಯ ಆಯಿತು ಅಂತ ಗೋಳಾಡಿದರು. ಆಗಲೇ ಏಳನೆತ್ತಿ ಓದ್ತಿದ್ದ ನಾನು ಇದ್ಯಾಕ ಹೀಂಗಾತು ಅಂತು ಯೋಚನಿ ಮಾಡ್ಲಿಕ್ಕೆ ಸುರುಮಾಡಿದೆ. ಸಂಕ್ರಾಂತಿ ಹಬ್ಬ ಅಂದರ ಮನಸ್ಸಿನ್ಯಾಗ ಹಳೇ ಸಿಟ್ಟು ಏನ ಇದ್ದರೂ ಮರತು ಒಳ್ಳೇಯವರಾಗಿರಬೇಕು, ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗಬಕು ಅಂತಾನೇ ಒಬ್ಬರಿಗೊಬ್ಬರು ಎಳ್ಳು-ಬೆಲ್ಲ ಕೊಟ್ಟು, ಒಳ್ಳೇ ಮಾತಾಡೋಣ ಅಂತ ಹೇಳ್ತಾರ ಅಂತೆಲ್ಲ ಅನಕೊಂಡಿದ್ದ ನನಗ ಆ ಕಾರಕೂನ ತಾಯಿ ಇದನ್ನ ತಿಳ್ಕೊಂಡಿದ್ರ, ಪಾಪ, ಸೂಕ್ಷ್ಮ ಮನಸ್ಸಿನ ಆ ಸೊಸಿ ಸಣ್ಣ ಕೂಸಿನ್ನ ಬಿಟ್ಟು ಜೀವ ಕಳಕೋತಿರಲಿಲ್ಲ ಅನ್ಸಿತ್ತು. ನಮ್ಮಮ್ಮ ನಮಗ ಸಕ್ಕರಿ ಅಚ್ಚು 'ಅಚ್ಚ ಬರಲಿಲ್ಲ(ಸರಿ ಹೊಂದಲಿಲ್ಲ)' ಅಂತ ಅಂದಕೊಂಡು ಇವತ್ತಿನ ತನಕ ಸಂಕ್ರಾಂತಿಗೆ ಸಕ್ಕರಿ ಅಚ್ಚು ಮಾಡಿಲ್ಲ ನೋಡ್ರಿ.

ಪ್ರತಿವರ್ಷ ಸಂಕ್ರಾಂತಿ ಹಬ್ಬದ ಮರುದಿವ್ಸ ನಾವೆಲ್ಲ ಸಣ್ಣ ಹುಡುಗೂರು ಒಂದು ಸಣ್ಣ ಡಬ್ಬಿಯೊಳಗ ಕುಸುರೆಳ್ಳು ಹಾಕ್ಕೊಂಡು ಸಾಲಿ, ಕಾಲೇಜಿಗೆ ತೊಗೊಂಡು ಹೋದ್ರ, ದೊಡ್ಡೋರೆಲ್ಲ ಆಫೀಸಿಗೆ ಒಂದು ಪೇಪರ್ ಕವರಿನ್ಯಾಗ ಕುಸುರೆಳ್ಳು ತೊಗೊಂಡು ಹೋಗ್ತಿದ್ರು. ಸಾಲಿ ಹುಡುಗರೆಲ್ಲ ಮಾಸ್ತರರಿಗೆ, ಟೀಚರರಿಗೆ ಕುಸುರೆಳ್ಳು ಕೊಟ್ಟು ನಮಸ್ಕಾರ ಮಾಡಿದಾಗ ಅವರು ಎಲ್ಲಾರಿಗೂ ಒಳ್ಳೇದಾಗಲಿ ಅಂತ ಆಶೀರ್ವಾದ ಮಾಡ್ತಿದ್ರು. ಸಂಕ್ರಾಂತಿ ಮರದಿನ ಸಾಲಿಯೊಳಗೂ ಒಂದು ಸಂಭ್ರಮ ಇರ್ತಿತ್ತು. ಹುಡಿಗೇರ ಮಾರಿ ಮ್ಯಾಲೆ ಎಳ್ಳು-ಬೆಲ್ಲದ ಖುಷಿಗಿಂತ, ಅವತ್ತಿನ ದಿನ ಸಾಲಿ ಸಮವಸ್ತ್ರ ಬಿಟ್ಟು, ಬಣ್ಣ-ಬಣ್ಣದ ಹೊಸ ಬಟ್ಟೆ ಹಾಕ್ಕೊಂಡು ಬಂದಿದ್ದ ಖುಷೀನೇ ಎದ್ದು ಕಾಣಿಸುತಿತ್ತು. ಇನ್ನು ಹುಡುಗರಿಗೆ ಮಿಡಿ, ಮ್ಯಾಕ್ಸಿ ಅಂತ ಬಣ್ಣದ ಬಟ್ಟಿ ಹಾಕ್ಕೊಂಡು ಸಾಲಿಗೆ ಬಂದಿದ್ದ ಹುಡಿಗೇರನ್ನ ಸೊಟ್ಟ ಕಣ್ಣಿನಿಂದ ನೋಡೋದೇ ಖುಷಿ ಆಗಿರತಿತ್ತು. ಯಾಕಂದ್ರ ಅವುಕ್ಕೆಲ್ಲ ದಿನಾ ಈ ಹೆಣ್ಮಕ್ಕಳು ಸಾಲಿ ಯೂನಿಫಾರಮ್ಮಿನ ಅದೇ ನೀಲಿ ಸ್ಕರ್ಟು, ಬಿಳಿ ಬ್ಲೌಸ್ ಹಾಕ್ಕೊಂಡು, ತಲಿಗೆ ತೆಪ-ತೆಪ ಎಣ್ಣಿ ಹಚ್ಚಿ, ಬಿಗಿಯಾಗಿ ಎರಡು ಹೆರಳು ಹಾಕಿ, ಬಿಳಿ ರಿಬ್ಬನ್ ಕಟ್ಟಿದದ್ದು ನೋಡಿ, ನೋಡಿ ಸಾಕಾಗಿರ್ತಿತ್ತೇನೋ! ಇವೆಲ್ಲ ಹೈಸ್ಕೂಲ್ ಹುಡುಗರ ಲಕ್ಷಣಗಳು ಅಂತ ಗೊತ್ತಾಯ್ತಲ್ಲಾ? ಇಂಥಾ ಹುಡುಗರೊಳಗ ನಮ್ಮ ಕ್ಲಾಸಿನ್ಯಾಗೂ ಒಬ್ಬ ಹುಡುಗ ಇದ್ದ. ಅವ ತನ್ನನ್ನು ತಾನು 'ಆನಂದ' ಸಿನಿಮಾದಾಗಿನ ಶಿವರಾಜಕುಮಾರ್ ಅಂತ ತಿಳ್ಕೊಂಡು ಧಿಮಾಕ ಮಾಡ್ಕೋತ ಓಡಾಡುತಿದ್ದ. ಅಷ್ಟಕ್ಕ ಸುಮ್ಮನ್ಯಾಗಿದ್ರ ಛೊಲೋ ಇರ್ತಿತ್ತು. ಕ್ಲಾಸಿನ ಹುಡುಗೀರನ್ನ ನೋಡಿ ಹಲ್ಲು ಕಿಸಿಯೋದು, ಕಮೆಂಟ್ ಪಾಸ್ ಮಾಡೋದು ಅಲ್ಲದೇ ಹುಡುಗರದೊಂದು ಗುಂಪು ಕಟಗೊಂಡು ಹುಚ್ಚಾಟ ಮಾಡ್ತಿದ್ದ. ನಮ್ಮ ಕ್ಲಾಸಿನ ಹುಡುಗಿಯರೆಲ್ಲ ಸೇರಿ ಅವನಿಗೊಂದು ಗತಿ ಕಾಣಿಸಬೇಕಂತ ಅನ್ಕೊಂಡಾಗನೇ ನೋಡ್ರಿ ಈ ಸಂಕ್ರಾಂತಿ ಹಬ್ಬ ಬಂದಿತ್ತು. ನಾವೆಲ್ಲ ಓದಿದ್ದ 'ಉತ್ತರಭೂಪ' ನಾಟಕದ ಒಂದಿಷ್ಟು ಡೈಲಾಗಗಳನ್ನು ಘಟ್ಟಿಮಾಡಿಕೊಂಡು, ಅದಕ್ಕ ನಮ್ಮ ಮಾತುಗಳನ್ನೂ ಸೇರಿಸಿಕೊಂಡು ತಯಾರಾಗಿ ಹಬ್ಬದ ಮಾರನೇ ದಿನ ಅವನು ಸಾಲಿಗೆ ಬಂದಿದ್ದೇ ತಡ, ಕೈಯಾಗ ಕುಸುರೆಳ್ಳು ಹಿಡಕೊಂಡು ನಾವು ಇಪ್ಪತ್ತು ಹುಡುಗಿಯರು ಅವನ ಮ್ಯಾಲೆ ಮಾತಿನ ಅಟ್ಯಾಕ್ ಸುರು ಮಾಡಿದ್ವಿ. "ಎಲವೋ ಉತ್ತರಕುಮಾರ, ಕರಿಎಳ್ಳಿನಂತಿರುವ ನಿನ್ನ ಮುಖವನ್ನೊಮ್ಮೆ ಕನ್ನಡಿಯಲ್ಲಿ ನೋಡಿಕೊಂಡು ನಮ್ಮಿಂದ ಈ ಎಳ್ಳು-ಬೆಲ್ಲವನ್ನು ಸ್ವೀಕರಿಸು. . 'ಉತ್ತರನ ಪೌರುಷವೆಲ್ಲ ಒಲೆಯ ಮುಂದೆ' ಎನ್ನುವಂತೆ ನಿನ್ನ ಈ ಹುಚ್ಚಾಟವನ್ನು ಮನೆಯಲ್ಲಿ ತೋರಿಸು.ಕೆನ್ನೆಗೆರಡು ಬಿಗಿದು ಬುದ್ಧಿ ಹೇಳುತ್ತಾರೆ. ಇಲ್ಲದಿದ್ದಲ್ಲಿ ನಿನಗೆ ಬುದ್ಧಿ ಕಲಿಸುವ ವಿದ್ಯೆ ನಮಗೆ ಗೊತ್ತಿದೆ." ಅಂತ ನಾಗರತ್ನ ಹೇಳಿದ್ರ, ರೇಣುಕಾ,

(...ಮುಂದಿನ ಪುಟಕ್ಕೆ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ಎಳ್ಳು-ಬೆಲ್ಲ ತೊಗೊಂಡು ಒಳ್ಳೇ ಮಾತಾಡೋಣ್ರಿ...

"ಸಹೋದರ, ನೀನು ಉತ್ತರಕುಮಾರನಾದರೆ ನಾನು ನಿನ್ನ ಸಹೋದರಿ ಉತ್ತರೆ. ವೀರ ಅಭಿಮನ್ಯುವನ್ನು ಮದುವೆಯಾಗಲು ನನ್ನ ಒಪ್ಪಿಗೆಯಿದೆ. ಇದೇ ಸಂತೋಷದಲ್ಲಿ ಈ ಎಳ್ಳು-ಬೆಲ್ಲವನ್ನು ತೆಗೆದುಕೊಂಡು, ಒಳ್ಳೆಯ ಮಾತುಗಳನ್ನಾಡಲು ಕಲಿ" ಅಂದಳು. ಅಂತೂ ಅವತ್ತು ಎಳ್ಳು-ಬೆಲ್ಲ ಕೊಟ್ಟು ಅವನ ಮಾರಿ ಮ್ಯಾಲೆ ನೀರಿಳಿಸಿಬಿಟ್ಟವಿ

ಇನ್ನು ಕಾಲೇಜಿನ್ಯಾಗ ಈ ಉತ್ತರಕುಮಾರನನ್ನೂ ಮೀರ್ಸಿದ್ದ ಒಂದು 'ಹುಚ್ಚಪ್ಯಾಲಿ' ಇತ್ತು. ಹೀಂಗ ಸಂಕ್ರಾಂತಿ ಹಬ್ಬದ ಮರುದಿವ್ಸ ನಾವೆಲ್ಲ ಗೆಳತೇರು ಕಾಲೇಜಿಗೆ ಸೀರಿ ಉಟಗೊಂಡು ಹೋಗೋದು ಅಂತ ಪ್ಲ್ಯಾನ್ ಮಾಡಿದ್ವಿ. ನಮಗೆಲ್ಲ ಅವತ್ತ Zoology Practical ಇತ್ತು. Dissection Box ಜೋಡಿ ಕುಸುರೆಳ್ಳು ಡಬ್ಬೀನೂ ತೊಗೊಂಡು ಲ್ಯಾಬೊರೇಟರಿಗೆ ಹೋದ್ವಿ. ಅಷ್ಟೊತ್ತಿಗಾಗ್ಲೇ ಸುನ್ಯಾ (ಸುನಿಲ್), ಸಂಜ್ಯಾ( ಸಂಜಯ)ಗಿರೀಶ, ಸಮೀರ ಎಲ್ಲಾರೂ ಬಂದು ಲ್ಯಾಬಿನ್ಯಾಗ ಕೂತಿದ್ರು. ಕೃಷ್ಣಮೂರ್ತಿ ಸರ್ ಬಂದು ಕಪ್ಪೆ ಡಿಸೆಕ್ಷನ್ ಮಾಡಿ ತೋರಿಸೋರಿದ್ರು. ನಾವು ಎಂಟು ಮಂದಿ ಹುಡುಗೀರು ಸೀರಿ ಉಟಗೊಂಡು ಹೋಗಿದ್ದು ನೋಡಿ ಸುನ್ಯಾ ತನ್ನ ಚಾಷ್ಟಿ ಸುರುಮಾಡಿದ. ತಾನು ತಂದಿದ್ದ ಕುಸುರೆಳ್ಳಿನ ಪ್ಯಾಕೇಟಿನಿಂದ ಒಂದು ಮುಷ್ಠಿ ತುಂಬ ತೊಗೊಂಡು, ಒಂದೊಂದೇ ಕಾಳನ್ನ ಮ್ಯಾಲೆ ಒಗದು ಸೀದಾ ಬಾಯಾಗ ಕ್ಯಾಚ್ ಹಿಡಿದು ತನ್ನ ಬಹದ್ದೂರಗಿರಿನ ನಾವೆಲ್ಲ ನೋಡಬಕು ಅಂತ ಬಯಸಿದ್ದ. ಒಂದು ನಾಲ್ಕೈದು ಕಾಳು ಬಾಯಿಗೆ ಹಾಕಿಕೊಂಡು ಏನೋ ಸಾಧಿಸಿದೆ ಅಂತ ಅನಕೊಂಡು ಆರನೇ ಕಾಳು ಮ್ಯಾಲೆ ಒಗದು ಬಾಯಾಗ ಹಿಡಿಬೇಕನ್ನೊಷ್ಟರೊಳಗ ಅದು ಸೀದಾ ಗಂಟಲದೊಳಗ ಸಿಗಿಬಿತ್ತು! ಜೋರಾಗಿ ಖೆಮ್ಮು ಹತ್ತಿತು. ಉಸುರುಗಟ್ಟಿಸಿಕೊಂಡ ಸುನ್ಯಾ ಕಣ್ಣಗುಡ್ಡಿ ತಿರಗಿಸಲಿಕ್ಕೆ ಸುರುಮಾಡಿದ ಕೂಡಲೇ ಎಲ್ಲಾರಿಗೂ ಘಾಬರಿ ಆತು. ಹುಡುಗೇರಿಗೆ ಕಾಳು ಹಾಕಲಿಕ್ಕೆ ಹೋಗಿ ತನ್ನ ಬಾಯಾಗೇ ಅಕ್ಕಿಕಾಳು ಹಾಕಿಸಿಕೊಳ್ಳೋಷ್ಟು ಅವಸ್ಥಿ ಪಡತಿದ್ದ ಸುನ್ಯಾನ್ನ ನೋಡಿದ ಸಂಜ್ಯಾ, ಭಡಕ್ಕನ ಅವನ್ನ ಎಳಕೊಂಡು ಹೋಗಿ ಲ್ಯಾಬಿನ ಸಿಂಕಿನ್ಯಾಗ ಬಗ್ಗಿಸಿ ಅವನ ಬೆನ್ನಿನ ಮ್ಯಾಲೆ ದಬ-ದಬ ಅಂತ ಗುದ್ದಿದ ಕೂಡ್ಲೆ ಸುನ್ಯಾ ಬಕ-ಬಕ ಅಂತ ಎಲ್ಲಾ ವಾಂತಿ ಮಾಡಿದ. ಆಮ್ಯಾಲೆ ಉಸುರು ತಿರಗುತು ನೋಡ್ರಿ. ಸುಸ್ತಾಗಿ ಲ್ಯಾಬಿನ ಸ್ಟೂಲ್ ಮ್ಯಾಲೆ ಕೂತಿದ್ದ ಸುನ್ಯಾನ ಹತ್ರ ಈ ಸೀರಿ ಉಟಗೊಂಡು ಬಂದಿದ್ದ ನಾರಿಮಣಿಗಳೆಲ್ಲ ಹೋಗಿ ಅವನ ಕೈಯಾಗ ಕುಸುರೆಳ್ಳು ಕೊಟ್ಟು, "Take Sweet, Talk Sweet" ಅಂತ ಹೇಳಿದಕೂಡ್ಲೆ, ಮೊದಲೇ ಖೆಮ್ಮಿ-ಖೆಮ್ಮಿ ವಾಂತಿ ಮಾಡಕೊಂಡು ಕೆಂಪಗಾಗಿದ್ದ ಮಾರಿ ಇನ್ನೂ ಕೆಂಪಾಗಿ ಥೇಟ್ ಮಂಗ್ಯಾನ ಹಂಗ ಕಂಡಿದ್ದ.



ಈ ಎಳ್ಳು-ಬೆಲ್ಲ ತಿಂದು ಒಳ್ಳೇ ಮಾತಾಡಿಕೋತ ನಾವು ಯೂನಿವರ್ಸಿಟಿ ಮೆಟ್ಟಿಲು ಹತ್ತಿದ್ವಿ. ಎಲ್ಲಾರಿಗೂ ಓದಿನ ಬಗ್ಗೆ, ತಮ್ಮ-ತಮ್ಮ ಭವಿಷ್ಯದ ಬಗ್ಗೆ ಸ್ವಲ್ಪ ಸೀರಿಯೆಸನೆಸ್ ಬಂದಿತ್ತು. ಯಾವಾಗಲೂ ಲೈಬ್ರೆರಿ, ಲ್ಯಾಬ್, ನೋಟ್ಸ್ ಮಾಡ್ಕೊಳ್ಳೋದು ಅಂತ ಓಡ್ಯಾಡತಿದ್ವಿ.ಡಿಗ್ರಿ ಕಾಲೇಜಿನ್ಯಾಗ ಒಟ್ಟಿಗೆ ಓದಿದ್ದ ನಾವು ನಾಲ್ಕು ಮಂದಿ ಗೆಳತೇರು ಈಗ ಲೇಡಿಸ್ ಹಾಸ್ಟೆಲನ್ಯಾಗೂ ಒಟ್ಟಿಗೆ ಇದ್ವಿ. ಓದಿನ ಜೊತಿಗೆ ನಮಗ ತಿಳದ್ಹಂಗ ಯೂನಿವರ್ಸಿಟಿನ್ಯಾಗಿನ ಮಂದಿಗೆಲ್ಲ ಭಾರಿ, ಭಾರಿ 'ನಾಮಕರಣ'ನೂ ಮಾಡಿದ್ವಿ! ಚಿರಕುಟ್, ಪಾರ್ಥೇನಿಯಂ, ಜವಾನಿ, ಉಶ್ -ಕುಮಾರಿ, ಬಾಡಿಹೋಗಿದ್ದ ಬಳ್ಳಿ...ಹೀಂಗ.ಆದ್ರ ಈ ಹೆಸರುಗಳನ್ನೆಲ್ಲ ಅವರ ಲುಕ್ಸ್ ನೋಡಿ ಅಲ್ಲರಿ, ಅವರ ಸ್ವಭಾವ ನೋಡಿ ಇಟ್ಟಿದ್ವಿರಿ. ಎಷ್ಟೋ ಮಂದಿಗೆ ನಾವಿಟ್ಟ ಹೆಸರುಗಳ ತಲೀ-ಬುಡನೂ ಗೊತ್ತಿರಲಿಲ್ಲ.ಇಂಥದ್ರೊಳಗ ನಾವಿಟ್ಟಿದ್ದ ಒಂದು ಹೆಸರಿಗೆ ಇದೇ ಸಂಕ್ರಾಂತಿ ಹಬ್ಬದ ಎಳ್ಳು-ಬೆಲ್ಲನೇ ಕಾರಣ ಆಗಿತ್ತು ಅಂದ್ರ ನೀವು ನಂಬಬೇಕ್ರಿ.

ಅದೇನಾಯ್ತಂದ್ರ, ಪ್ರತಿವರ್ಷದ ಹಂಗ ನಾವು ಕ್ಲಾಸಿಗೆ ಕುಸುರೆಳ್ಳು ತೊಗೊಂಡು ಹೋಗಿ ಫ್ರೆಂಡ್ಸಿಗೆಲ್ಲ ಕೊಡೋವಾಗ, ನಮ್ಮ ಸೀನಿಯರ್ ಒಬ್ಬ ಅಲ್ಲಿಗೆ ಬಂದ. ಅವ ಆಗಲೇ ಜೆನಿಟಿಕ್ಸ ಸಬ್ಜೆಕ್ಟಿನ್ಯಾಗ ಪಿ.ಎಚ್.ಡಿ. ಮಾಡ್ತಾ ಇದ್ದ. ಭಾಳ ಒಳ್ಳೇ ಹುಡುಗ, ಭಾರೀ ಶ್ಯಾಣೇ ಇದ್ದಾನ ಅಂತ ಡಿಪಾರ್ಟಮೆಂಟಿನ್ಯಾಗ ಎಲ್ಲಾರೂ ಹೇಳ್ತಿದ್ದರು. ನಾವೆಲ್ಲರೂ ಕುಸುರೆಳ್ಳು ಕೊಟ್ಟು ಸಂಕ್ರಾಂತಿ ಶುಭಾಶಯ ಹೇಳಿದ್ವಿ. ಅವ, ತನ್ನ ಬಲಗೈನ ಮೂರು ಬೆರಳಿನ್ಯಾಗ ಎರಡು ಕಾಳು ಕುಸುರೆಳ್ಳು ಹಿಡಕೊಂಡು ಎಲ್ಲಾರ ಕೈಮ್ಯಾಲೆ ಕುಟುಕಿ, ಕುಟಕಿ "Take Sweet, Talk Sweet" ಅಂತ ಹೇಳಿ ತನ್ನ ರಿಸರ್ಚ ಲ್ಯಾಬಿಗೆ ಓಡಿಹೋದಕೂಡ್ಲೇ ನಾವೆಲ್ಲ ಸೇರಿ ಅವನಿಗೆ 'ನಾಮಕರಣ' ಮಾಡಿದ್ವಿ. "ಕಾಗಿ"! ಅವನು ಕುಸುರೆಳ್ಳನ್ನ ನಮ್ಮ ಕೈಯಾಗ ಹಾಕಿದ್ದು ಥೇಟ್ ಆ ಕಾಗಿಗೊಳು ತಮ್ಮ ತಲಿ ಸೊಟ್ಟ ಮಾಡಿ ನೆಲಕ್ಕ ಕೊಕ್ಕನ್ನು ಕುಟಕಿ, ಕುಟುಕಿ ಕಾಳು ತಿಂದ ಪರಕ್ಕನೇ ಹಾರಿ ಹೋಗ್ತಾವಲ್ಲ, ಹಂಗೇ ಇತ್ರೀ! ಯಾವಗ್ಲೂ ಲ್ಯಾಬಿನ್ಯಾಗ, ಲೈಬ್ರರಿನ್ಯಾಗ ಕಾಣಿಸಿಕೊಳ್ಳತ್ತಿದ್ದ ಈ 'ಕಾಗಿ' ಮುಂದೊಂದಿನ ಪಿ.ಎಚ್.ಡಿ. ಮುಗಿಸಿ "ಡಾ. ಕಾಗಿ" ಆಗಿತ್ತು.

ನಾನು ಯುನಿವರ್ಸಿಟಿ ಓದು ಮುಗಿಸಿ ಕಂಪ್ಯೂಟರ್ ಕೋರ್ಸಗಳನ್ನು ಮಾಡ್ಕೊಂಡು ಬೆಂಗಳೂರಿನ್ಯಾಗ ಒಂದು ಕಡೆ ಕೆಲಸಕ್ಕೆ ಸೇರಿದೆ. ಅಲ್ಲೇ ನನಗ ಶ್ರೀವಾಣಿಯ ಪರಿಚಯ ಆಗಿತ್ತು. ಶ್ರೀವಾಣಿಗೆ ಆಗಲೆ ಮದುವಿ ಆಗಿ ಒಂದು ಮಗಳಿದ್ದಳು. ಮನ್ಯಾಗ ಸಣ್ಣ ಮಕ್ಕಳಿದ್ದಾರಂದ್ರ ಈ ಸಂಕ್ರಾಂತಿ ಹಬ್ಬದ ದಿನ ಅವುಕ್ಕ ದೃಷ್ಟಿ ಪರಿಹಾರಂತ ಹೇಳಿ ಹಣ್ಣು ಎರಿಯೋದು ಒಂದು ಸಂಪ್ರದಾಯ. ಆದ್ರ ಆ ವರ್ಷ ಶ್ರೀವಾಣಿ ಮನಿಯೊಳಗ ಹಬ್ಬದ ದಿನ ಹಣ್ಣು ಎರೀಲಿಕ್ಕೆ ಕೂಸಿಗೆ ಯಾವ ಬಣ್ಣದ ಅಂಗಿ ಹಾಕಬಕು ಅನ್ನೋದು, ಕೂಸಿನ ದೃಷ್ಟಿಪರಿಹಾರಕ್ಕಿಂತ ಹೆಚ್ಚು ಆದಂಗಿತ್ತು ಅಂತ ಆಕಿ ಹೇಳಿದ ಮಾತಿನಿಂದ ಗೊತ್ತಾಯ್ತು. ಶ್ರೀವಾಣಿಯವರ ಅಮ್ಮ ಹೈದ್ರಾಬಾದಿನಕಿ. ಅಲ್ಲೆಲ್ಲ ಹಳದಿ ಬಣ್ಣದ ಅಂಗಿ ಹಾಕ್ತಾರಂತ ಆಕಿ ತನ್ನ ಮಗಳಿಗೆ ಹೇಳಿದ್ಲು. ಇನ್ನು ಅತ್ತಿ ಮುಂಬಯಿನಕಿ. ಅಲ್ಲೆಲ್ಲ ಕರಿ-ಬಿಳಿ ಬಣ್ಣದ ಅಂಗಿ ಹಾಕ್ತಾರ ಅಂತ ತನ್ನ ಮಗ, ಅದೇ ಶ್ರೀವಾಣಿ ಗಂಡಗ ಹೇಳಿದ್ಲು. ಸಾಕಷ್ಟು ಓದಿ, ಒಳ್ಳೇ ಕೆಲಸ ಮಾಡ್ತಿದ್ದ ಇವರಿಬ್ರೂ ಒಂದೊಂದು ಅಂಗಿ ತಂದು, ತಮ್ಮ ಕೂಸಿನ್ನ ಬಿಟ್ಟು ಅಂಗಿ ಬಣ್ಣದ ಸಲುವಾಗಿ ಹಬ್ಬದ ದಿನ ಎಲ್ಲ ಲಟಾಪಟಿ ನಡಿಸಿದ್ರಂತ. ಇಕಿ ಮರದಿನ ಬ್ಯಾಸರ ಮಾಡ್ಕೊಂಡು ಆಫೀಸಿಗೆ ಬಂದಿದ್ಲು. ಇದನ್ನೆಲ್ಲ ನೋಡಿದ ನನಗ, ನಾ ಸಣ್ಣಕಿದ್ದಾಗಿಂದ ಸಂಕ್ರಾಂತಿ ಹಬ್ಬದ ಹಿಂದಿನ ಮಹತ್ವ ಏನಂತ ಕಲ್ತಿದ್ದೆ, ಅದನ್ನಿವರು ಮರೆತು ಹೋಗ್ಯಾರಲ್ಲ ಅನ್ನೋ ಯೋಚನಿ ಬಂದಿತ್ತು.

ನನಗೂ ಮದುವಿ-ಮಕ್ಕಳು, ಸಂಸಾರ ಅಂತ ಆಗಿ ಇಷ್ಟ ವರ್ಷ ಆದಮ್ಯಾಲೆ ಈ ಹಬ್ಬ-ಹುಣ್ಣವಿ, ಪೂಜಾ-ಪದ್ಧತಿ ಅಂತ ಯೋಚನಿ ಮಾಡಿದಾಗ, ಜೀವನದಾಗ ಹಬ್ಬದ ಸಂಪ್ರದಾಯ ಮತ್ತ ಅದರ ಹಿಂದಿನ ಉದ್ದೇಶನ ಬಿಟ್ಟುಕೊಟ್ಟು ಬರೀ ತೋರಿಕಿಗೆ ಎರಡು ಒಳ್ಳೇ ಮಾತಾಡಿದಹಾಂಗ ಮಾಡಿ, ಏನೋ ಮಾಡಬಕಲ್ಲ ಅಂತ ಕಾಟಾಚಾರಕ್ಕ ಹಬ್ಬ ಮಾಡಿದ್ರ, ಮನುಷ್ಯನ ಮನಸಿನ ಬೆಳವಣಿಗಿ ಹೆಂಗ ಆಗಬಕು, ಇದರಿಂದ ಮುಂದೊಂದಿನ ಲುಕ್ಸಾನ ಆಗೋದು ನಮಗ ಅಂತ ಅನ್ಸಿತ್ತು. ಹಂಗೇನೇ ಈ ಜೀವನದಾಗ ನಮಗ ಆಗೋ ಅನುಭವಗಳಿಂದ ನಾವು ಭಾಳ ತಿಳ್ಕೊಳ್ಳೋದು ಇರ್ತದ ಅಂತ ನನ್ನ ಮನಸ್ಸು ಒಪ್ಪತದ ನೋಡ್ರಿ. ಮಾರಿ ಮುಂದು ಒಂದು ಮಾತಾಡೋದು, ಮನಸಿನ್ಯಾಗ ಇನ್ನೊಂದು ಯೋಚನಿ ಮಾಡೋದನ್ನ ಬಿಟ್ಟು, 'ಬಣ್ಣ-ಬಣ್ಣದ ಮಾತಿನ ಛಂದಕ್ಕಿಂತ ಮನುಷ್ಯಾನ ಮನಸ್ಸಿನ ಛಂದನೇ ಮುಖ್ಯ' ಅನ್ನೋದನ್ನು ಅರ್ಥಮಾಡಿಕೊಂಡು ಈ ಸಂಕ್ರಾಂತಿ ಹಬ್ಬದಾಗ ಒಬ್ಬರಿಗೊಬ್ಬರು ಎಳ್ಳು-ಬೆಲ್ಲ ಕೊಟ್ಟು-ತೊಗೊಂಡು ಒಳ್ಳೇ ಮಾತಾಡೋಣ್ರಿ.


Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮



## ಶ್ರೀ ಶಂಕರಾಚಾರ್ಯರು, ಜೀವನ ಮತ್ತು ಸಂದೇಶ.



ಪದ್ಮ ಚಿಕ್ಕೇರೂರ್

**"ಶೃತಿಸ್ಮೃತಿ ಪುರಾಣಾನಾಂ | ಆಲಯಂ ಕರುಣಾಲಯಂ|**
**ನಮಾಮಿ ಭಗವತ್ಪಾದಂ | ಶಂಕರಂ ಲೋಕ ಶಂಕರಂ ||"**

ನಮ್ಮ ಪುಣ್ಯಭೂಮಿಯಾದ ಭಾರತದ ಇತಿಹಾಸದಲ್ಲಿ ಜನ್ಮವೆತ್ತ ಅಸಾಧಾರಣ ತತ್ವಜ್ಞಾನಿಗಳಲ್ಲಿ ಶ್ರೀ ಶಂಕರರು ಪ್ರಮುಖರು. ತಮ್ಮ ಜೀವನ - ಸಾಧನೆಗಳ ಮೂಲಕ ಸನಾತನ ಧರ್ಮಕ್ಕೆ ನೆಲೆ ಬೆಲೆಗಳನ್ನು ದೊರಕಿಸಿ ಕೊಟ್ಟ ಅದ್ಭುತ ವ್ಯಕ್ತಿ ಅವರು. ಹಿಂದು ಧರ್ಮವು ಬಲಹೀನವಾಗಿದ್ದಾಗ ಎಂಟನೇ ಶತಮಾನದಲ್ಲಿ ಶಾಸ್ತ್ರ ಸಮ್ಮತವಾಗಿ ಧರ್ಮ ಪ್ರಚಾರಮಾಡಿದ ಮಹಾನ್ ಶಕ್ತಿ ಶಂಕರರು. ಹಿಂದೂ ಮತದ ನಿಜವಾದ ಅರ್ಥವನ್ನು ಸಾಮಾನ್ಯ ಜನರಿಗೂ ಮನದಟ್ಟಾಗುವಂತೆ ತಿಳಿಸಿ, ಅದರ ಪುನರುದ್ಧಾರ ಮಾಡಲು ಶ್ರಮಿಸಿದ ಧೀಮಂತ ವ್ಯಕ್ತಿ ಅವರು. ಹಿಂದೂ ಧರ್ಮದ "ಅದ್ವೈತ" ಸಿದ್ಧಾಂತವನ್ನು ಭಾರತದ ನಾಲ್ಕು ದಿಕ್ಕಿನಲ್ಲಿ ಪ್ರಚಾರ ಮಾಡಿ, ಮಠಗಳನ್ನು ಸ್ಥಾಪಿಸಿ, ತಮ್ಮ ಶಿಷ್ಯರನ್ನು ಮಠಾಧಿಪತಿಗಳನ್ನಾಗಿ ನೇಮಕ ಮಾಡಿರುವ ಪರಂಪರೆಯು ಇಂದಿಗೂ ಹಿಂದೂ ಧರ್ಮದ ಸಂಸ್ಕೃತಿಯ ಸೇವೆ ಮಾಡುತ್ತಾ ಭದ್ರಕೋಟೆಯಂತೆ ಭಾರತದ ನಾಲ್ಕು ದಿಕ್ಕಿನಲ್ಲಿ ತಕೆಯೆತ್ತಿನಿಂತಿದೆ.



ಭಾರತದ ಇತಿಹಾಸದಲ್ಲೇ ವೈಶಾಖ ಶುದ್ಧ ಸಪ್ತಮಿಯು ಒಂದು ಪರ್ವದಿನ. ಏಕೆಂದರೆ ಸಾಕ್ಷತ್ ಪರಮೇಶ್ವರನೇ ಮಾನವ ಕೋಟಿಯನ್ನು ಉದ್ಧರಿಸಲು "ಶಂಕರನಾಗಿ ಅವತರಿಸಿದ ಶುಭದಿನ. ವೇದಾಧ್ಯಯನ ಸಂಪನ್ನರಾದ, ಕಾಲಟಿಯ ಶಿವಗುರು ಆರ್ಯಂಬೆ ದಂಪತಿಗಳ ತಪಸ್ಸಿಗೆ ಮೆಚ್ಚಿ ಸಾಕ್ಷತ್ ಪರಶಿವನೇ ಅವರ ಪುತ್ರನಾಗಿ ಜನಿಸಿದ್ದು, ಐದನೆಯ ವಯಸ್ಸಿನಲ್ಲಿ ಉಪನಯನ ಸಂಸ್ಕಾರ ಪಡೆದು ಗುರುಕುಲವಾಸ ನಡೆಸಿ, ಎಂಟನೆಯ ವಯಸ್ಸಿನಲ್ಲಿ ಮಾತೃವಿನ ಆಜ್ಞೆಯನ್ನು ಪಡೆದು ಸನ್ಯಾಸ ಗ್ರಹಣ ಮಾಡಿರುವ ವಿಚಾರಗಳು ಸರ್ವವಿಧಿತವಾದ್ದದು. ನಂತರದಲ್ಲಿ ಗೋವಿಂದ ಭಗವತ್ಪಾದ ಗುರುಗಳನ್ನು ಹುಡುಕುತ್ತಾ ಕೇರಳದ ಕಾಲಟಿಯಿಂದ ಮಂದಾತ ಪರ್ವತದವರೆಗೆ ಕಾಲ್ನಡಿಗೆಯಲ್ಲಿ ಬಂದು ಅಲ್ಲಿ ಕ್ರಮವಾದ ಸನ್ಯಾಸ ದೀಕ್ಷೆಯನ್ನು ಗುರುಗಳಿಂದ ಪಡೆದು, ಪರಂಪರಾಗತವಾಗಿ ಬಂದಿದ್ದ ಶ್ರೀ ಚಂದ್ರಮೌಳೇಶ್ವರ ಹಾಗೂ ರತ್ನಗರ್ಭ ಗಣಪತಿಯನ್ನು ಪಡೆಯುತ್ತಾರೆ. ಭಗವತ್ಪಾದರು ಶ್ರೀ ಶಂಕರರ ಅವತಾರದ ಮುಖ್ಯ ಉದ್ದೇಶವನ್ನು ತಿಳಿಸಿ ವ್ಯಾಸರ ಆಜ್ಞೆಯಂತೆ ಕಾಶಿಕ್ಷೇತ್ರಕ್ಕೆ ಹೋಗಬೇಕೆಂತಲೂ, ಅಲ್ಲಿಂದ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಸತ್ಯಾದ್ವೈತ ಪ್ರತಿಪಾದಿತವಾದ ಭಾಷ್ಯವನ್ನು ಮತ್ತು ಬ್ರಹ್ಮಸೂತ್ರಗಳಿಗೆ ತತ್ವಾರ್ಥ ಬರೆಯಬೇಕೆಂತಲೂ ತಿಳಿಸುತ್ತಾರೆ. ಶಂಕರರಿಗೆ ಆಗ ಕೇವಲ ಹನ್ನೆರಡು ವರ್ಷಗಳು ಮಾತ್ರ ಅಂದರೆ, ಎಂಟನೆಯ ಶತಮಾನದಲ್ಲೇ ಮತಭೇದವಿರಬಾರದು, "ಮತ ಒಂದೇ" ಎಂದು ಸಾರಿದವರು ಶಂಕರರು ಒಬ್ಬರೇ. ಹೀಗೆ ಶಂಕರರು ಸಮಾನತೆಗಾಗಿ ಚತುರಾಮ್ನಾಯವನ್ನು, ಅನೇಕ ಪಂಥಗಳ ಒಗ್ಗೂಡಿಕೆಗೆ ಪಂಚಾಯತನವನ್ನೂ, ಯಾರೂ ರಚಿಸಲಾಗದ ಪ್ರಸ್ಥಾನ ತ್ರಯಗಳನ್ನು ಆತ್ಮೋನ್ನತಿಗಾಗಿ ಗ್ರಂಥಗಳ ರಚನೆಯನ್ನು ಮಾಡಿ ತತ್ವ ಸಿದ್ಧಾಂತವನ್ನು ಲೋಕಕ್ಕೆ ಸಾರಿದ್ದಾರೆ. ಅವರು ಅಸಮಾನ್ಯ ವಿಶ್ವಮಾನವರು.

ಶ್ರೀ ಶಂಕರರು, ಧರ್ಮಶಾಸ್ತ್ರಪ್ರವೀಣರಾದ ಮತ್ತು ಪರಮ ಪ್ರಾಮಾಣಿಕರಾದ "ಕುಮಾರಿಲ ಭಟ್ಟರ" ರ ಪ್ರಾರ್ಥನೆಯಂತೆ, "ಕರ್ಮಮಾರ್ಗ"ದಲ್ಲಿ ಅಚಲವಾದ ನಿಷ್ಠೆಯುಳ್ಳ ಹಾಗೂ ಮಹಾಮೇಧಾವಿಗಳಾದ ಮಂಡನಮಿಶ್ರ ಪಂಡಿತರನ್ನು ವಾದದಲ್ಲಿ ಜಯಿಸಿ ಅವರಿಗೆ "ಜ್ಞಾನಮಾರ್ಗ" ವನ್ನು ಉಪದೇಶಿಸುವ ಸಲುವಾಗಿ ಮಾಹಿಷ್ಮತೀ ನಗರದತ್ತ ಬಂದು, ದಾರಿಯಲ್ಲಿ ಸಿಕ್ಕ ಸಾಮಾನ್ಯ ಸ್ತ್ರೀಯರನ್ನು ಕಂಡು ಮಂಡನ ಮಿಶ್ರರ ಮನೆ ಎಲ್ಲಿದೆ? ಎಂದು ಪ್ರಶ್ನಿಸುತ್ತಾರೆ. ಆ ಸ್ತ್ರೀಯರು ಬೇರೆ ಯಾವ ಗುರುತನ್ನು ತಿಳಿಸದೆ "ಯಾರ ಮನೆಯ ಜಗುಲಿಯಲ್ಲಿ ಗಿಳಿಗಳು ಶಾಸ್ತ್ರ ಹೇಳುತ್ತಾ ಇರುತ್ತವೆಯೊ, ಅದೇ ಮಂಡನ ಮಿಶ್ರರ ಮನೆ ಎಂದು ತಿಳಿಸುತ್ತಾರೆ". ಶಾಸ್ತ್ರ ಸಂಬಂಧವಾದ ಚರ್ಚೆಗಳನ್ನು ಗಿಳಿಗಳೇ ಕೇಳಿ ಕೇಳಿ ಸಾಮತ್ಯವನ್ನು ಪಡೆರುತ್ತವೆ. ಶ್ರೀ ಶಂಕರರು, ಮಿಶ್ರರ ಮನೆ ತಲುಪಿದಾಗ ಮನೆಯ ಮುಂಬಾಗಿಲು ಹಾಕಿರುವದನ್ನು ಕಂಡು ಗವಾಕ್ಷಿಯ ಮೂಲಕ ಮನೆಯನ್ನು ಪ್ರವೇಶಿಸುತ್ತಾರೆ. ಆ ದಿನ ಮಿಶ್ರರ ತಂದೆಯ ಶ್ರಾದ್ಧವಿರುತ್ತದೆ. ಶಂಕರರು ಪ್ರವೇಶಿಸಿದ್ದನ್ನು ಕಂಡು ಈ ದಿನ 'ತಿಥಿ' ಇದೆ. ಅಂದರೆ ಆ ದಿನದಂದು ಸ್ವರ್ಗಸ್ಥರಾದ ಮನೆಯ ಹಿರಿಯರನ್ನು ಆಹ್ವಾನಿಸುವ ದಿನ. ದೇವರ ಸ್ಥಾನಕ್ಕೂ ಮಿಗಿಲಾದ ತಂದೆ-ತಾಯಿಯರು ಪರಮಪೂಜ್ಯರು. ಅವರ ಸಮ್ಮುಖದಲ್ಲಿ ಬೇರೆಯವರಿಗೆ ಸತ್ಕಾರವಿಲ್ಲ. ಇಂತಹ ಸಂದರ್ಭದಲ್ಲಿ ಶಂಕರರ ಪ್ರವೇಶ ಕಂಡು ಮಿಶ್ರರು ಪೇಚಾಡಿಕೊಳ್ಳುತ್ತಾರೆ. ನಂತರದಲ್ಲಿ ವ್ಯಾಸ ಮಹರ್ಷಿಗಳ ಆದೇಶದಂತೆ ಶ್ರಾದ್ಧದ ನಂತರ ಭಿಕ್ಷೆಯಾಗುತ್ತದೆ. ಶ್ರೀ ಶಂಕರರು ಪ್ರಯಾಗದಲ್ಲಿ ಕುಮಾರಿಲ ಭಟ್ಟರ ಬೇಡಿಯ ವಿಚಾರವನ್ನು ತಿಳಿಸಿ ಮಂಡನಮಿಶ್ರರನ್ನು ವಾದಕ್ಕೆ ಆಹ್ವಾನಿಸುತ್ತಾರೆ.

ಮಾರನೆಯ ದಿನ, ಪ್ರಖಂಡ ಪಂಡಿತರಾದ ಮಂಡನಮಿಶ್ರರೊಡನೆ, ಬಾಲಸೂರ್ಯನಂತೆ ಪ್ರಜ್ವಲಿಸುತ್ತಿದ್ದ ಶಂಕರರು ವಾದಕ್ಕೆ ಸಿದ್ಧರಾಗುತ್ತಾರೆ. ವ್ಯಾಸರ ಸೂಚನೆಯಂತೆ ವಿದ್ಯಾಪಾರಂಗತೆಯಾದ, ಮಂಡನಮಿಶ್ರರ ಧರ್ಮಪತ್ನಿ ಉಭಯಭಾರತಿಯನ್ನು ಇಬ್ಬರ ವಾದಕ್ಕೂ ಮಧ್ಯಸ್ಥಿಕೆ ವಹಿಸುವಂತೆ ತೀರ್ಮಾನಿಸುತ್ತಾರೆ. ನಿರ್ಣಾಯಕ ಸ್ಥಾನವನ್ನು ಅಲಂಕರಿಸಿದ ಉಭಯಭಾರತಿಯು ಇಬ್ಬರಿಗೂ ಒಂದೊಂದು ಹೂ ಮಾಲೆಯನ್ನು ಕೊಟ್ಟು ಅದನ್ನು ಕೊರಳಲ್ಲಿ ಧರಿಸುವಂತೆ ತಿಳಿಸುತ್ತಾಳೆ. ಯಾರ ಕೊರಳಿನ ಹೂ ಮಾಲೆಯು ಮೊದಲು ಬಾಡಿ ಹೋಗುವುದೋ ಅವರು ಸೋತಂತೆ ಎಂದು ಹೇಳುತ್ತಾಳೆ. ಈ ವಿಶಿಷ್ಠ ವಾದವನ್ನು ಕೇಳಲು ದೊಡ್ಡ ಪಂಡಿತರ ಮಂಡಳಿಯೇ ಅಲ್ಲಿ ಸೇರಿರುತ್ತದೆ. ಆತ್ಮ-ಬ್ರಹ್ಮ-ಕರ್ಮ ಮುಂತಾದ ತತ್ವಗಳನ್ನು ಕುರಿತು ಅವ್ಯಾಹತವಾಗಿ ವಾದವು ಅನೇಕ ದಿನಗಳವರೆಗೆ ನಡೆಯುತ್ತದೆ. ಕೊನೆಗೆ ಮಿಶ್ರರು ತಮ್ಮ ಸಿದ್ಧಾಂತವಾದ ಕರ್ಮಮಾರ್ಗ ಪ್ರತಿಪಾದನೆಯಲ್ಲಿ ಸೋಲುತ್ತಾರೆ. ವಾದದಲ್ಲಿ ಸೋತರೆ ಸನ್ಯಾಸಿಯಾಗುವುದಾಗಿ ಮೊದಲೇ ತಿಳಿಸಿದ್ದಂತೆ, ಮಂಡನಮಿಶ್ರರು ಸನ್ಯಾಸಾಶ್ರಮವನ್ನು ಸ್ವೀಕರಿಸಿ "ಸುರೇಶ್ವರಾಚಾರ್ಯ" ಎಂಬ ಹೆಸರನ್ನು ಪಡೆಯುತ್ತಾರೆ.

(ಮುಂದಿನ ಪುಟಕ್ಕೆ.....)

ಸಂಚಿಕೆ
೧೪
ಜನವರಿ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## *ಶ್ರೀ ಶಂಕರಾಚಾರ್ಯರು, ಜೀವನ ಮತ್ತು ಸಂದೇಶ.*

ನಂತರ ಶ್ರೀ ಶಂಕರರು ಬಾಣ, ದಂಡಿ, ಮಯೂರ, ಭಟ್ಟಭಾಸ್ಕರ ಮೊದಲಾದ ಪಂಡಿತರನ್ನು ವಾದದಲ್ಲಿ ಸೋಲಿಸಿ, "ಅದ್ವೈತ-ತತ್ವ" ವನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಹೀಗೆ ಅನೇಕ ಧರ್ಮಪ್ರಚಾರಕರು ವಾದಿಸಿ ತಮ್ಮ ಸೋಲನ್ನು ಒಪ್ಪಿಕೊಂಡಿದ್ದಾರೆ.

ಪ್ರಾಚೀನಕಾಲದಿಂದಲೂ ಕಾಶ್ಮೀರವು ಪ್ರಕೃತಿ ಸೌಂದರ್ಯಕ್ಕೆ ಎಷ್ಟು ಪ್ರಸಿದ್ಧವಾಗಿದೆಯೋ, ಅಷ್ಟೇ ವಿದ್ಯಾ ವೈಭವಕ್ಕೂ ಪ್ರಸಿದ್ಧವಾಗಿತ್ತು. ಇಲ್ಲಿನ ವಿದ್ವಾಂಸರು, ಸಂಸ್ಕೃತ-ಸಾಹಿತ್ಯದ ನಾನಾ ಶಾಖೆಗಳನ್ನು ತಮ್ಮ ಅಮೂಲ್ಯ ಕೃತಿಗಳಿಂದ ಸಮೃದ್ಧಗೊಳಿಸಿದ್ದಾರೆ. ಭಗವತಿ ಶಾರದಾದೇವಿಯು ಈ ದೇಶದ ಅಧಿಷ್ಠಾತ್ರಿ ದೇವತೆ. ಆದ್ದರಿಂದ. ಈ ದೇಶವು 'ಶಾರದಾಪೀಠ' ಎಂದೇ ಪ್ರಸಿದ್ಧವಾಗಿದೆ. ದೇವಿ ಶಾರದೇಯ ಪ್ರಾಚೀನದೇವಾಲಯವು ಈಗಲೂ ಇಲ್ಲಿ ಇದೆ. ಅದಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ಮಾಹಾದ್ವಾರಗಳಿದ್ದು, ಯಾವ ಪಂಡಿತೋತ್ತಮನು ವಾದಗಳಲ್ಲಿ ಜಯಿಸಿ ಬಂದು, ಆ ಪೀಠದಲ್ಲಿ ಆಸೀನನಾಗುವನೋ ಅವನೇ "ಸರ್ವಜ್ಞ" ಎಂದು ಸಂಮಾನಿತನಾಗುತ್ತಾನೆ ಎಂದು, ಮಂದಿರದ ಮೂರು ದಿಕ್ಕಿನ ಬಾಗಿಲುಗಳು ತೆರೆದಿವೆಯಂದೂ, ದಕ್ಷಿಣದ್ವಾರ ಮಾತ್ರ ತೆರೆದಿಲ್ಲ ಎಂಬ ಸುದ್ದಿಯು ಆಚಾರ್ಯರಿಗೆ ತಿಳಿದ ಕೂಡಲೇ ಕಾಶ್ಮೀರದತ್ತ ಹೋರಟು ದಕ್ಷಿಣ ಭಾರತದಲ್ಲಿ ಸರ್ವಜ್ಞಪೀಠ ಏರುವ ಪಂಡಿತೋತ್ತಮರು ಇಲ್ಲ ಎಂಬ ಕಳಂಕವನ್ನು ನಿವಾರಿಸುತ್ತಾರೆ. ಆಚಾರ್ಯರು ಅಲ್ಲಿನ ಜೈನರು, ಬೌದ್ಧರು, ಸಾಂಖ್ಯರು, ಪೂರ್ವಮೀಮಾಂಸಕರು ಮುಂತಾದ ಅನೇಕ ಶಾಸ್ತ್ರಜ್ಞರ ಪ್ರಶ್ನೆಗಳಿಗೆ ಉತ್ತರವಿತ್ತು "ಸರ್ವಜ್ಞ" ರೆಂಬುದನ್ನು ಖಚಿತಪಡಿಸುತ್ತಾರೆ. ಅವರೆಲ್ಲರಿಗೂ "ಅದ್ವೈತ" ಸಿದ್ಧಾಂತವನ್ನು ಬೋಧಿಸುತ್ತಾರೆ. ದಕ್ಷಿಣ ದ್ವಾರದ ಮೂಲಕ ಶಾರದಾ ಮಂದಿರವನ್ನು ಪ್ರವೇಶಿಸಿ "ಸರ್ವಜ್ಞ ಪೀಠಾರೋಹಣ" ಮಾಡುತ್ತಾರೆ. ವೈದಿಕ ಧರ್ಮವು ನಮ್ಮ ಭರತಖಂಡದಲ್ಲಿ ಎಂದೆಂದೂ ಸ್ಥಿರವಾಗಿ ನಿಲ್ಲಬೇಕೆಂಬ ತಮ್ಮ ಸಂಕಲ್ಪವನ್ನು ಶಿಷ್ಯರಿಗೆ ತಿಳಿಸುತ್ತಾರೆ. ನಂತರದಲ್ಲಿ ಶಂಕರರು ಒಬ್ಬಂಟಿಗರಾಗಿ ಬದರಿಕಾಶ್ರಮಕ್ಕೆ ತೆರಳಿ, ಅಲ್ಲಿ ಪಾತಂಜಲಿ ಯೋಗ ಶಾಸ್ತ್ರಾಭ್ಯಾಸದಲ್ಲಿ ನಿರತರಾದವರಿಗೆ, ತಮ್ಮ ಸೂತ್ರ ಭಾಷ್ಯದಿಗಳನ್ನು ಬೋಧಿಸಿದರು. ಅಲ್ಲಿಂದ ಕೇದಾರದ ಕಡೆ ನಡೆದ ಶಂಕರರು ತಮ್ಮ ಸ್ಥೂಲ ಶರೀರವನ್ನು ತ್ಯಜಿಸಿ, ಬ್ರಹ್ಮೈಕ್ಯರಾದರು. ಹೀಗೆ ಜ್ಞಾನದ ಶ್ರೇಷ್ಠತೆಯನ್ನು ಎತ್ತಿಹಿಡಿದ ಪರಮಜ್ಞಾನಿ, ಯೋಗಿ, ಆಚಾರ್ಯ,ಭಕ್ತ, ಕವಿ, ಅದ್ವೈತ ಪ್ರವರ್ತಕರೆನಿಸಿದರು. ಅವರು ಅಸಮಾನ್ಯ ವಿಶ್ವವಂದಿತರು.

**ನಮಸ್ತಸ್ಮೈ ಭಗವತೇ| ಶಂಕರಾಚಾರ್ಯರೂಪಿಣೇ,**

**ಏನ ವೇದಾಂತ ವಿದ್ಯೇಯಂ| ಉದ್ಧೃತಾ ವೇದ ಸಾಗರಾತ್"**

ಆದಿ ಶಂಕರರು, "ಅಹಂ ಬ್ರಹ್ಮಾಸ್ಮಿ" ತತ್ವವನ್ನು ಅರ್ಥವಾಗುವಂತೆ ತಿಳಿಸಿ ಅನುಭವಾಮೃತವಾದ ಜ್ಞಾನಮಾರ್ಗವನ್ನು ಪರಿಚಯಿಸಿದರು."ಬ್ರಹ್ಮಸತ್ಯ-ಜಗನ್ ಮಿತ್ಯ" ಎಂದು ಸಾರಿದರು. ಜಾಗ್ರತ, ಸ್ವಪ್ನ, ಸುಷಪ್ತಿ ಅವಸ್ಥೆಗಳ ಬಗ್ಗೆ ಜನರಲ್ಲಿ ತಿಳಿವಳಿಕೆ ಮೂಡಿಸಿದರು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ, ದ್ವಾರಕದಿಂದ ಪುರಿ ಜಗನ್ನಾಥದವರಗೂ, ಅನೇಕ ಬಾರಿ ಸಂಚರಿಸಿ, ಎಲ್ಲಾ ಕ್ಷೇತ್ರಗಳಲ್ಲೂ ದೇವಾಲಯಗಳ ಜೀರ್ಣೋದ್ಧಾರ, ವೈದಿಕ ಧರ್ಮದ ಪ್ರತಿಪಾದನೆ, ಅದ್ವೈತ ಮತದ ಸಿದ್ಧಾಂತ ಬೋಧನೆ, ಶಿಷ್ಯರ ಸಂಗ್ರಹ ಮುಂತಾದ ಲೋಕೋದ್ಧಾರಕ- ಧರ್ಮೋದ್ಧಾರಕ ಕಾರ್ಯಗಳನ್ನು ಮಾಡಿದ್ದಾರೆ.

ಶ್ರೀ ಶಂಕರಾಚಾರ್ಯರು ಮುಮುಕ್ಷುಗಳಿಗೆ ಅನುಕೂಲವಾಗುವಂತೆ ಪ್ರಸ್ಥಾನತ್ರಯ ಭಾಷ್ಯಗಳು, ಪ್ರಕರಣ ಗ್ರಂಥಗಳು ಹಾಗೂ ಸ್ತೋತ್ತಗಳನ್ನು ರಚಿಸಿದ್ದಾರೆ. ಎಲ್ಲಾ ವರ್ಣಾಶ್ರಮಿಗಳಿಗೂ, ಅನುಕೂಲವಾಗುವಂತೆ ಸುಗುಣರೂಪದ ಆರಾಧನೆಯೇ, ನಿರ್ಗುಣಬ್ರಹ್ಮನನ್ನು ಪಡೆಯಲು ಆಧಾರವೆಂದು ಸುಂದರ ಲಯಬದ್ಧ, ಕರ್ಣಾಮೃತ ಶ್ಲೋಕಗಳನ್ನು ಶಿವ ವಿಷ್ಣುವಿನ ಬೇಧವಿಲ್ಲದೆ ರಚಿಸಿದ್ದಾರೆ. "ವೇದಾಂತ ತತ್ವ" ದ ಡಿಂಡಿಮವನ್ನು ಬಾರಿಸಿದ ಅದ್ವೈತ ಚಕ್ರವರ್ತಿ ಶ್ರೀ ಶಂಕರರು. ಸಾಮಾನ್ಯರನ್ನು ಪರಮಾರ್ಥದಕಡೆಗೆ ಕೊಂಡೊಯ್ಯುವ ಕಳಕಳಿಯೇ ಈ ಸ್ತೋತ್ರಗಳ ಭಂಡಾರ. ಕ್ಷೇತ್ರ ಸಂದರ್ಶನ ಕಾಲದಲ್ಲಿ ದೇವತೆಗಳನ್ನು ಸ್ತುತಿಸಿರುವ ಈ ರಚನೆಗಳಲ್ಲಿ ಕ್ಷೇತ್ರದವರ್ಣನೆ, ದೇವತಾಶಕ್ತಿ, ಕರುಣೆ, ಭಕ್ತನ ಹಂಬಲ, ಅನುಕಂಪ, ಸಮರ್ಪಣಾ ಭಾವನೆ, ಸಂಸ್ಕೃತ ಭಾಷೆಯಲ್ಲಿನ ಚಮತ್ಕಾರ, ತಾಯಿಯ ಪ್ರೀತಿ-ಮಮತೆಯ ಪ್ರಯೋಗಗಳನ್ನು ಕಾಣಬಹುದು. ನಿಜವಾದ ಭಕ್ತಿ ಭಾವದಲ್ಲಿ ಸ್ತೋತ್ರಹೇಳುವ ಭಕ್ತನಿಗೆ ಆ ದೇವತೆಯನ್ನು ಕಂಡ ಅನುಭವ ಆಗುವುದರಲ್ಲಿ ಸಂಶಯವೇಇಲ್ಲ.

●

## ಕವನ



ಲಕ್ಷ್ಮಿ ಕೊಲಾಲ್

### ....೨೦೧೭...

ಹೂವಿನಂತೆ ನೀ ಅರಳಿ ಬಂದೆ
ಮುನ್ನೂರ ಅರವತ್ತು ದಿನಗಳ ಹಿಂದೆ

ನೆನಪುಗಳ ಮಾಲೆಯನು ನಾ ಹೆಣೆದೆ
ದಿನಗಳೆಂಬ ಪಕಳೆಗಳ ಪೋಣಿಸುತ್ತಾ ಸವಿದೆ

ಸಿಹಿನೆನಪುಗಳು ಹಸಿರಾಗಿ ಉಳಿದಿಹವು
ಕಹಿಯಾದ ನೆನಪುಗಳು ಮುದುಡಿ ಮರೆಯಾಗಿಹವು

ಬಾರದೂರಿಗೆ ಹೋಗುತ್ತಿರುವ ಹಳೆಯ ವರ್ಷವಾದೆ ನೀ
ಎರಡು ಸಾವಿರದಹದಿನೆಂಟನು ಹಿಗ್ಗಿ ಸ್ವಾಗತಿಸುವೆ ನಾ...

### ........ಪ್ರಶ್ನೆ.......

ಓ ನನ್ನ ಅಪರಿಚಿತನೇ
ಹೇಗೆಂದು ನಾ ಕರೆಯಲಿ ನಿನ್ನನು...
ನನ್ನ ನಲ್ಲ ನಲ್ಲವಾದೆಯೇ ಇಂದು ಎನಗೆ ?
ಈ ಮಾತೆಲ್ಲ ಬೆಲ್ಲವಲ್ಲವೇ ನಿನಗೆ ?

ನಿನ್ನಟ್ಟಿಸಿ ನಾ ಹಿಂದೆ ಬಂದೆನೇ..
ನೀನಟ್ಟಿಸಿದಾ ಆ ಕ್ಷಣಗಳ ನಾ ಮರೆವೆನೇ ..?
ಕಟ್ಟುಪಾಡುಗಳು ಮುಂದೆ ಬಂದವೇ?
ತೊಟ್ಟು ತೊಟ್ಟಾಗಿ ಹನಿಗಳುದುರಿದವೇ ..?

ಪ್ರಶ್ನೆಗಳು ಹಾಗಾಗಿಯೇ ಉಳಿದಿಹವು
ಉತ್ತರಕೆ ಆಶಿಸದೆ ನಲುಗಿಹವು...
ಉಪ್ಪಾಗಿ ಒಣಗಿದ ಕಣ್ಣ ಹನಿಗಳಾ
ಒಪ್ಪಿ ಮೈ ಮನವು ಮರುಗಿಹವು ...!


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

ಲಘು ಹಾಸ್ಯ


## ಕಾಫಿನ ಇಷ್ಟ ಪಟ್ಕೊಂಡು ಕುಡಿಬೇಕ್ರಿ, ಕಷ್ಟ ಪಟ್ಕೊಂಡಲ್ಲ ...



ಅಹೀಶ್ ಭಾರದ್ವಾಜ

ಕಾಫಿ ಅನ್ನೋ ಶಬ್ದ ಕಿವಿಗೆ ಬಿದ್ರೆ ಸಾಕು ಕಾಫಿಪ್ರಿಯನಾದ ನನಗೆ ಮೈಮನಗಳು ಗರಿಗೆದರಿ ನಿಲ್ಲತ್ತೆ. ಕಾಫಿ ಕುಡಿಯುವವನಿಗೇ ಗೊತ್ತು ಕಾಫಿಯ ಗಮ್ಮತ್ತು. ಕಾಫಿ ಕುಡಿಯುವ ಅಭ್ಯಾಸ ನನಗೆ ಎಷ್ಟನೇ ವಯಸ್ಸಿನಿಂದ ಶುರುವಾಯ್ತೋ ನಾ ಕಾಣೆ. ನಮ್ಮಮ್ಮ ಬಹುಶಃ ನನಗೆ ಎಂಟೋ ಅಥವಾ ಹತ್ತನೇ ವಯಸ್ಸಿನಲ್ಲಿ ಕಾಫಿ ಕೊಡೋಕ್ಕೆ ಶುರು ಮಾಡಿದರು ಅನ್ಸತ್ತೆ. ಆಗ ಶುರುವಾದ ನನ್ನ ಕಾಫಿ ಚಟ, ಈಗ ಕಾಫಿ ಇಲ್ಲದೆ ನನ್ನ ದಿನ ಶುರುವಾಗಲ್ಲ ಜೊತೆಗೆ ಮುಗಿಯೋದೂ ಇಲ್ಲ ನೋಡಿ. ಈ ಕಾಫಿ ಅನ್ನೋ ಪೇಯದಲ್ಲಿ ಅದೇನು ಮಾಯೆಯಿದೆಯೋ ಕುಡಿದವನೇ ಬಲ್ಲ. ನಿಮಗೇ ಅನುಭವವಾಗಿರಬಹುದು ಅಥವ ನೋಡಿರಬಹುದು, ಯಾವಾಗಾದರು ನೆಂಟರಿಷ್ಟರ, ಸ್ನೇಹಿತರ ಮನೆಗೆ ಹೋದಾಗ ಊಟನೋ ತಿಂಡಿನೋ ತಿನ್ಕೊಂಡು ಹೋಗಿ ಅಂದಾಗ ಇಲ್ಲ ಅಂತೀರ, ಹೋಗಲಿ ಸ್ವಲ್ಪ ಕಾಫಿನಾದ್ರೂ ಕುಡಿದುಕೊಂಡು ಹೋಗಿ ಅಂದ್ರೆ ಸಾಕು ಹಿಪ್ನೊಟೈಸ್ ಮಾಡಿದ್ರೇನೋ ಅನ್ಕೊಬೇಕು ಹಾಗೇ ತಟಕ್ಕಂತ ಎದ್ದಿದ್ದ ಕುರ್ಚಿ ಮೇಲೆ ಮತ್ತೆ ಕೂತ್ಕೊತಿರ. ಏನೇ ಬಿಟ್ಟರೂ ಕಾಫಿ ಬಿಡಕ್ಕಾಗಲ್ಲ ನೋಡಿ, ಅದೇ ಕಾಫಿ ಮಹಾತ್ಮೆ!

ನಾನು ಚಿಕ್ಕವಯಸ್ಸಿನಲ್ಲಿ ಕಾಫಿಯನ್ನು ನಮ್ಮ ಮನೆಯಲ್ಲಿ ಬಿಟ್ಟರೆ ಹೆಚ್ಚಾಗಿ ನೆಂಟರಿಷ್ಟರ ಮನೆಯಲ್ಲಿ ಕುಡಿಯುತ್ತಿದ್ದೆ, ಹೋಟೆಲು ಕಾಫಿ ಕುಡಿಯುತ್ತಿದ್ದಿದ್ದು ಬಹಳ ಅಪರೂಪ. ನಮ್ಮಪ್ಪನ ಜೊತೆ ಹೊರಗ್ಹೋದಾಗ ಆಗೊಮ್ಮ ಈಗೊಮ್ಮೆ ಗಾಂಧಿ ಬಜಾರ್ ವಿಧ್ಯಾರ್ಥಿ ಭವನದಲ್ಲೋ, ಬಳೆಪೇಟೆ ಕೃಷ್ಣ ಭವನದಲ್ಲೋ ಕಾಫಿ ಕುಡಿಯುತ್ತಿದ್ದಿದ್ದು. ಆಗೆಲ್ಲಾ ನಮ್ಮನೆಯಲ್ಲಿ ಕಾಫಿ ಫಿಲ್ಟರ್ ಅನ್ನೋದು ಇರಲಿಲ್ಲ. ದಪ್ಪನಾದ ಒಂದು ಬಟ್ಟೆಯೇ ಕಾಫಿ ಫಿಲ್ಟರ್. ಆ ಬಟ್ಟೆಯನ್ನು ಒಂದು ಚಿಕ್ಕ ತಂಬಿಗೆಯ ಅಥವಾ ಡಬರಿಯ ಅಂಚಿಗೆ ಕಟ್ಟಿ ಸ್ವಲ್ಪ ಹಳ್ಳ ಮಾಡಿ ಕಾಫಿಪುಡಿ ಹಾಕಿ, ಮೇಲೆ ಬಿಸಿ ನೀರು ಸುರಿದರೆ ಕೆಳಗಿನ ಪಾತ್ರೆಯಲ್ಲಿ ಕಾಫಿ ಡಿಕಾಕ್ಷನ್ ಇಳಿಯುತ್ತಿತ್ತು. ಈ ತರಹ ಕಾಫಿ ಮಾಡುವುದು ನಮ್ಮ ಮನೆಯಲ್ಲಿ ಬಹಳ ವರ್ಷಗಳವರೆಗೂ ಇತ್ತು. ಕಾಫಿಗೆ ಸಕ್ಕರೆಗಿಂತ ಯಾರೋ ಹಳ್ಳಿಯಿಂದ ತಂದುಕೊಡುತ್ತಿದ್ದ ಉಂಡೆಬೆಲ್ಲವನ್ನು ಬಳಸುತ್ತಿದ್ದುದೇ ಜಾಸ್ತಿ. ನಮ್ಮನೆಯಲ್ಲೇ ಐದಾರು ಹಸು ಸಾಕಿದ್ದರಿಂದ ಕಾಫಿಯಿಂದ ಹಿಡಿದು ಎಲ್ಲದಕ್ಕೂ ಮನೆಯ ಹಾಲು. ನಮ್ಮಜ್ಜಿ ತಾತ ಮಡಿ ಮಾಡುತ್ತಿದ್ದರಿಂದ ಅಗ್ಗಿಷ್ಟಿಕೆ ಮೇಲೆ ಕಾಫಿ ಬಿಸಿಯಾಗುತ್ತಿತ್ತು. ಈಗಿನ ಕಾಲದವರಂತೆ ಹೇಳಿದರೆ ಇದು conventional way of making coffee ಅಂತ ಹೇಳಬಹುದು. ಆ ವಯಸ್ಸಿನಲ್ಲಿ ನನಗೆ ಕಾಫಿ ಯಾಕೆ ರುಚಿಸಿತ್ತಿತ್ತೋ ಗೊತ್ತಿಲ್ಲ. ಬಹುಶಃ ಸಾರವಿಲ್ಲದ ಹಸುಕು ವಾಸನೆಯ ಹಾಲು ಕುಡಿಯುವುದಕ್ಕಿಂತ ಘಮ್ಮೆನಿಸುವ ಸಿಹಿ ಸಿಹಿಯಾದ ಕಾಫಿಗೆ ಆಕರ್ಷಣೆಯಾಗಿತ್ತೋ ಏನೋ.



ಗವಿಪುರಂನಲ್ಲಿದ್ದ ನಮ್ಮ ಮನೆಯಿಂದ ಹತ್ತಿರದ ಹನುಮಂತನಗರ, ಶ್ರೀನಗರದಲ್ಲಿ ನನ್ನ ಅತ್ತೆಯರ ಮನೆಗಳಿದ್ದವು. ನನ್ನ ಅತ್ತೆ ಮಕ್ಕಳೆಲ್ಲಾ ಸುಮಾರು ನನ್ನ ವಯಸ್ಸಿನ ಆಸುಪಾಸಿನವರಾದ್ದರಿಂದ ಅವರ ಮನೆಗಳಿಗೆ ನನ್ನ ಓಡಾಟ ಜಾಸ್ತಿ. ಹಾಗಾಗಿ ಶಾಲಾದಿನಗಳಲ್ಲಿ ಮನೆಯಲ್ಲಿ ಬಿಟ್ಟರೆ ಹೆಚ್ಚಾಗಿ ಕಾಫಿ ಕುಡಿಯುತ್ತಿದ್ದಿದ್ದು ನಮ್ಮ ಅತ್ತೆಯರ ಮನೆಗಳಲ್ಲಿ.ನಮ್ಮ ಮನೆಯ ಕಾಫಿಯ ಜೊತೆಗೆ ಬೇರೆ ಬೇರೆ ಕಾಫಿ ರುಚಿಯ ಅನುಭವ ನನಗಾಗಿದ್ದೇ ಅಲ್ಲಿಂದ.

ಘಮಘಮಿಸುವ ಕಾಫಿ, ವಾಸನೆಯೇ ಇಲ್ಲದ ಕಾಫಿ, ಪಾನಕದಂತ ಕಾಫಿ, ಸರಿಯಾಗಿ ಹಾಲೇ ಇಲ್ಲದ ಕರಿ ಕಾಫಿ ಹೀಗೆ ಹಲವಾರು ಬಗೆಯ ಕಾಫಿ. ಅದರಲ್ಲೂ ಸರಸ ಅತ್ತೆಯ ಮನೆ ಕಾಫಿಯೆಂದರೆ ನನಗೆ ಪಂಚಪ್ರಾಣ. ನಮ್ಮ ಮಾವ ಶ್ಯಾಮರಾಯರು ಮಲೆನಾಡಿನ ಪ್ರದೇಶದಲ್ಲಿ ಕೆಲಸ ಮಾಡಿದ್ದು ಒಳ್ಳೆಯ ತಾಜ ಕಾಫಿಯನ್ನು ಕುಡಿಯುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದರು. ಮಹಾ ಶಿಸ್ತು, ಜೊತೆಗೆ ಮೂಗಿನ ತುದಿಯಲ್ಲೇ ಕೋಪ. ಅದಕ್ಕೇ ಏನೋ, ಹಳೇ ಕಾಲದ, ಕೈಯಲ್ಲಿ ತಿರುಗಿಸಿ ಪುಡಿ ಮಾಡುವ ಕಾಫಿ ಗ್ರೈಂಡರ್ನಿಂದ ಮನೆಯಲ್ಲೇ ಕಾಫಿ ಬೀಜವನ್ನು ಪುಡಿ ಮಾಡಿ, ಜಾಗೂರತೆಯಿಂದ ಲೈಟಾಗೂ ಇಲ್ಲದ, ಸ್ಟ್ರಾಂಗೂ ಇಲ್ಲದ ಡಿಕಾಕ್ಷನ್ನಿಗೆ ತಕ್ಕಷ್ಟು ಸಕ್ಕರೆ, ಹಾಲು ಬೆರೆಸಿ ತಾಜ ಕಾಫಿ ಮಾಡುವುದರಲ್ಲಿ ನಮ್ಮತ್ತೆ ನಿಪುಣರಾಗಿದ್ದರು. ಅವರ ಮನೆಗೆ ಹೋದಾಗ ಕಾಫಿ ಕುಡಿಯುವ ಮಜವೇ ಬೇರೆ. ಅಂತಹ ಕಾಫಿಗೆ ರುಚಿ ಹತ್ತಿದ್ದ ನನ್ನ ನಾಲಿಗೆಗೆ ಬೇರೆ ಕಡೆ ಕುಡಿಯುತ್ತಿದ್ದ ಕಾಫಿಗಳು ಸಕ್ಕರೆ ಪಾನಕದಂತೆಯೋ, ಕಹಿ ಕಷಾಯದಂತೆಯೋ, ಬಿಸಿನೀರಿಗೆ ಬೆಲ್ಲ ಹಾಕಿದ ಪಾನೀಯದಂತೆ ಭಾಸವಾಗುತ್ತಿತ್ತು. ಕಾಫಿ ಅಂದ್ರೆ ಸರಸ ಅತ್ತೆ ಮನೆ ತರಹ ಇರಬೇಕು ಎನ್ನುವುದು ನನಗೆ ನಾನೇ ಮಾಡಿಕೊಂಡ ಒಂದು benchmark. ಮೂವತ್ತೈದು ವರ್ಷಗಳ ಹಿಂದೆ ಅವರ ಮನೆಯಲ್ಲಿ ಕುಡಿಯಲು ಶುರುಮಾಡಿದಾಗ ಇದ್ದ ರುಚಿ, ಅವರ ಮನೆಗೆ ಹೋದರೆ ನಮ್ಮತ್ತೆ ಮಾಡುವ ಕಾಫಿಗೆ ಈಗಲೂ ಅದೇ ರುಚಿ! ಅರಿವೋ, ಅರಿವಿಲ್ಲದೆಯೋ ಕಾಫಿಯ ಹೊತ್ತಿಗೆ ಸರಿಯಾಗಿ ಸರಸ ಅತ್ತೆ ಮನೆಗೆ ಹೋಗುವ ಅಭ್ಯಾಸ, ಜೊತೆಗೆ ಅವರ ಮನೆಯಲ್ಲಿ ತರಿಸುತ್ತಿದ್ದ ಸುಧಾ, ಮಯೂರ, ತುಷಾರ, ರಾಗಸಂಗಮ, ಹಾಗೆಯೇ ಅಲ್ಲೇ ಇರುತ್ತಿದ್ದ ಸಾಯಿಸುತೆ, ಉಷಾ ನವರತ್ನರಾಂ ಕಾದಂಬರಿಗಳು ಬಿಸಿ ಬಿಸಿ ಕಾಫಿಗೆ ಒಳ್ಳೆಯ ಜೋಡಿಯಾಗಿತ್ತು. ನನ್ನನ್ನು ಕನ್ನಡ ಕತೆ, ಕಾದಂಬರಿಗಳ ಓದಿನ ಲೋಕಕ್ಕೆ ತಳ್ಳಿದ್ದೇ ಅಲ್ಲಿ. ತಾಜ ಕಾಫಿಯ ಜೊತೆ ಪುಸ್ತಕದ ಓದಿನ ಸಂಬಂಧದ ಆರಂಭ!

ಕಾಲೇಜು ಹೋಗಲು ಶುರುಮಾಡಿದ ಮೇಲಂತೂ ಹೋಟಲಿನಲ್ಲಿ ತಿನ್ನುವ ಅಭ್ಯಾಸ ಹೆಚ್ಚಾಗಿ ಬೇರೆ ಬೇರೆ ರುಚಿಯ ಕಾಫಿಯ ಅನುಭವವಾಗುತ್ತಾ ಬಂತು. ನನ್ನ ಓಡಾಟವೆಲ್ಲಾ ಗಾಂಧಿಬಜಾರು, ಅದರ ಆಸುಪಾಸಲ್ಲೇ. ಅಲ್ಲೇನು ಬರ ಒಳ್ಳೆಯ ಹೋಟೆಲುಗಳಿಗೆ ಬ್ರಾಹ್ಮಿನ್ಸ್ ಕಾಫಿ ಬಾರ್, ವಿಧ್ಯಾರ್ಥಿ ಭವನ, ಎಸ್ ಎಲ್ ವಿ, ಗಣೇಶ್ ಭವನ, ಸನ್ಮಾನ್, ದ್ವಾರಕ, ಮಾರ್ಡನ್, ಮಹಾಲಕ್ಷ್ಮಿ ಹೀಗೆ ದೊಡ್ಡ ಪಟ್ಟೀನೇ ಮಾಡಬಹುದು, ಕೈಗೊಂದು ಕಾಲ್ಗೊಂದು ಸಿಗುತ್ತೆ. ಒಂದಕ್ಕಿಂತ ಒಂದು ರುಚಿಯಲ್ಲಿ ಎತ್ತಿದ ಕೈ, ಜೊತೆಗೆ ಒಳ್ಳೆಯ ಕಾಫಿ ಮಾಡೋದ್ರಲ್ಲೂ ಕೂಡ.ಈ ಹೋಟೆಲುಗಳು ತಿಂಡಿಗಳಿಗೆ ತಮ್ಮದೇ ವಿಶಿಷ್ಟವಾದ ರುಚಿಯಿಂದ ಪ್ರಸಿದ್ಧಿಯಾಗಿದ್ದರೂ, ಕಾಫಿ ಮಾತ್ರ ಸರಿ ಸುಮಾರು ಎಲ್ಲರದ್ದೂ ಒಂದೇ ತರಹದ ರುಚಿ. ಆದರೆ ಕೆಲವರಿಗೆ ಕಾಫಿ ಮಾತ್ರ ತಮ್ಮ ಅಚ್ಚುಮೆಚ್ಚಿನ ಹೋಟಲಿನಲ್ಲಿ ಕುಡಿಯುವ ಅಭ್ಯಾಸ. ಅಂತಹ ಗುಂಪಿಗೆ ಸೇರಿದವನು ನಾನು. ನನಗೆ ಸನ್ಮಾನ್ ಕಾಫಿ ಬಹಳ ರುಚಿಸುತ್ತಿತ್ತು,ಹಾಗಾಗಿ ತಿಂಡಿ ಎಲ್ಲೇ ತಿಂದರೂ ಕಾಫಿ ಕುಡಿಯಲು ಸನ್ಮಾನ್ ಹೋಟೆಲ್ಲೇ ಆಗ್ಬೇಕು.ಇಂತಹ ಅಭ್ಯಾಸ ಈ ಹೋಟೆಲುಗಳಿಗೆ ಹೋಗುವವರಲ್ಲಿ ಸಾಕಷ್ಟಿದೆ.ತಿನ್ನುವುದು ಒಂದು ಕಡೆಯಾದರೆ ಕಾಫಿ ಕುಡಿಯುವುದು ಇನ್ನೊಂದು ಕಡೆ.

(... ಮುಂದಿನ ಪುಟಕ್ಕೆ)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಾಫಿನ ಇಷ್ಟ ಪಟ್ಕೊಂಡು ಕುಡಿಬೇಕ್ರಿ, ಕಷ್ಟ ಪಟ್ಕೊಂಡಲ್ಲ ...

ಕೂತ್ಕೊಂಡು ಕಾಫಿ ಜೊತೆ ಸಿಗರೇಟು ಸೇದುವ ಅಭ್ಯಾಸ ಇರುವವರು ಸನ್ಮಾನೊ, ಗಣೇಶ್ ಭವನ್ಗೋ, ಶಾನ್ಭಾಗ್ಗೊ ಹೋಗುತ್ತಿದ್ದುದುಂಟು. ಹೀಗೆ ಹೊರಗಿನ ಕಾಫಿಗೆ ಒಗ್ಗಿಹೋಗಿದ್ದ ನನ್ನ ನಾಲಿಗೆಗೆ ನಮ್ಮಮ್ಮ ಮನೆಯಲ್ಲಿ ಮಾಡುತ್ತಿದ್ದ ಕಾಫಿ ರುಚಿಸುತ್ತಿರಲೇ ಇಲ್ಲ. ತುಂಬಾ ಸ್ಟ್ರಾಂಗೋ, ಸಕ್ಕರೆ ಜಾಸ್ತಿಯೋ, ಚಿಕೋರಿ ಜಾಸ್ತಿಯೋ ಅಂತೂ ಏನೋ ಹೆಚ್ಚು ಕಡಿಮೆಯಿದ್ದು ಕಾಫಿ ಕುಡಿಯುವ ಮಜವೇ ಬರುತ್ತಿರಲಿಲ್ಲ. ಎಷ್ಟೋ ಸಲ ನಮ್ಮಮ್ಮನಿಗೆ ಯಾವುದಾದರು ಹೋಟೆಲು ಹೆಸರು ಹೇಳಿ ಅಲ್ಲಿ ಕಾಫಿ ಎಷ್ಟು ಚೆನ್ನಾಗಿರುತ್ತೆ ನೀನೂ ಯಾಕೆ ಹಾಗೆ ಮಾಡಬಾರದು ಅಂತ ಹೇಳ್ದಾಗ, ಅಂತಹದ್ದೇನಾಗಿದೆ ಕಾಫಿಗೆ ನಾವೆಲ್ಲಾ ಕುಡಿಯಲ್ವ, ನಿಮಗೆಲ್ಲಾ ಹೋಟೆಲ್ ತಿಂಡಿ, ಕಾಫಿ ರುಚಿ ಹತ್ತಿಸಿಕೊಂಡು ಕೊಬ್ಬು ಜಾಸ್ತಿಯಾಗಿದೆ ಅಂತ ಸಾಕಷ್ಟು ಸಲ ಬೈಗುಳ ತಿಂದಿದ್ದೀನಿ. ನಾನು ಕೆಲವೇ ಕೆಲವು ಮನೆಗಳಲ್ಲಿ ಮಾತ್ರ ರುಚಿಯಾದ ಕಾಫಿಯನ್ನು ಸವಿದಿರುವುದು. ಮಿಕ್ಕ ಮನೆಗಳ ಕಾಫಿ ಬಹಳ ಸ್ಟ್ರಾಂಗೊ ಅಥವಾ ಲೈಟೊ, ಸಕ್ಕರೆ ಜಾಸ್ತಿಯೊ, ವಾಸನೆಯೇ ಇಲ್ಲದ್ದೊ, ಬಿಸಿಯಿಲ್ಲದ್ದೊ, ತೇಲುತ್ತಿರುವ ಕೆನೆ ತುಂಬಿದ್ದೊ, ಹಳೇ ಕಾಫಿ ಚರಟದ ಮೇಲೆ ಮತ್ತೊಮ್ಮೆ ಕಾಫಿ ಪುಡಿ ಹಾಕಿ ಮಾಡಿದ ಕಾಫಿಯೊ. ಇಂತಹ ಕಾಫಿಗಳು ನನ್ನ ನಾಲಿಗೆಗೆ ತಾಕಿದೊಡನೆ ಮುಂದೆ ಒಂದು ಗುಟುಕೂ ಗಂಟಲಿಗೆ ಇಳಿಯದೆ ಕಾಫಿ ಅಷ್ಟಕ್ಕೇ ಬಿಡುವುದು ನನ್ನ ಜಾಯಮಾನ.



ಕಾಫಿಪ್ರಿಯರು ಮದುವೆ ಮನೆಗಳಿಗೆ ಹೋದರಂತೂ ಸುಗ್ಗಿಯೋ ಸುಗ್ಗಿ. ಮದುವೆ ಮನೆಗಳಲ್ಲಿ ಮಾಡುವ ಕಾಫಿಯ ರುಚಿಯೇ ಬೇರೆ. ನನಗೆ ತಿಳಿದ್ದಂಗೆ ಬಹುತೇಕ ಮದುವೆ ಮನೆಗಳಲ್ಲಿ ಅಡಿಗೆಯವರು ಕಾಫಿ ಚೆನ್ನಾಗೇ ಮಾಡಿರ್ತಾರೆ. ಹತ್ತಿರದ ಸಂಬಂಧಿಕರ ಮದುವೆಗೆ ಹೋದರಂತೂ ಅದೆಷ್ಟು ಸಲ ಕಾಫಿ ಕುಡಿದಿರುತ್ತೇನೋ ಗೊತ್ತಿಲ್ಲ, ಹೋದ ತಕ್ಷಣ ಅಡಿಗೆಮನೆಗೆ ಹೋಗಿ ಕಾಫಿ ಮಾಡೋ ಜಾಗಕ್ಕೆ ಕಣ್ಣು ಹಾಯಿಸಿ ಒಂದು ಬಿಸಿ ಬಿಸಿ ಕಾಫಿ ಕುಡಿದ ಮೇಲೇನೇ ಮುಂದಿನ ಕೆಲಸ. ಮೂರುದಿನದ ಮದುವೆ ನಡೆಯುತ್ತಿದ್ದ ಕಾಲದಲ್ಲಂತೂ ಮೊದಲನೆ ದಿನದ ದೇವರ ಸಮಾರಾಧನೆಯಿಂದ ಹಿಡಿದು ಬೀಗರೌತಣ ಮುಗಿದು ಸಾಮಾನು ಸಾಗಿಸುವ ತನಕ ಕಾಫಿ ಸ್ಟೌವ್ ಆರೋದೇ ಇಲ್ಲ. ಒಂದು ತರಹದ ೨೪/೭ ಸರ್ವೀಸ್ಸು. ಹೆಣ್ಣಿನ ಮನೆಯವರು ಅಡಿಗೆಯವರನ್ನು ಗೊತ್ತು ಮಾಡುವಾಗ ಎಲ್ಲಾ ಊಟ ತಿಂಡಿಗಳ ವಿವರಗಳ ಜೊತೆಗೆ ಕಾಫಿ ಚೆನ್ನಾಗಿ ಮಾಡಬೇಕ್ರೀ, ಹೊತ್ತು ಹೊತ್ತಿಗೆ ಕಾಫಿ ವಿಚಾರಿಸಿಕೊಳ್ಳಿ ಅಂತ ಬಾಯಿಬಿಟ್ಟೆ ಹೇಳಿರ್ತಾರೆ. ಅದಕ್ಕೆ ಇರಬೇಕು ಈ ವಧುವರರ ಛತ್ರದ ಮನೆಗೆ, ಗಂಡಿನ ಕಡೆಯವರು ಇರುವ ರೂಮಿನ ಕಡೆ, ಇಸ್ಪೀಟು ಆಡುತ್ತಿರುವ ರೂಮಿನ ಕಡೆಗೆ ಕಾಫಿ ಭಟ್ರು ಅಲ್ಯೂಮಿನಿಯಂ ಕೆಟಲಲ್ಲಿ ಬಿಸಿ ಬಿಸಿ ಕಾಫಿ ಇಟ್ಕೊಂಡು ಗಸ್ತು ಹೊಡಿತಾನೇ ಇರ್ತಾರೆ, ಅವರಿಗೂ ಗೊತ್ತಲ್ವೆ ಈ ರೂಮಿನಲ್ಲಿರುವವರಿಗೆ ಹೊತ್ತು ಹೊತ್ತಿಗೆ ಕಾಫಿ ಬಿದ್ರೆ, ಅಡಿಗೆ ರುಚಿ ಹೆಚ್ಚುಕಮ್ಮಿ ಆದ್ರೂ ಕೂಗಾಟ ಸ್ವಲ್ಪ ಕಡಿಮೆ ಇರುತ್ತೆ ಅಂತ. ವರಪೂಜೆ ಸಾಯಂಕಾಲದಲ್ಲಿ ಉಪ್ಪಿಟ್ಟು, ಕೇಸರಿಭಾತ್ ನಂತರ ಕುಡಿಯುವ ಕಾಫಿ, ಧಾರೆಯ ದಿನ ಬೆಳಿಗ್ಗೆ ಬಿಸಿ ಬಿಸಿ ಇಡ್ಲಿ, ಕಾಯಿಚಟ್ನಿ, ಕಾಶಿಹಲ್ವದ ನಂತರ ಕುಡಿಯುವ ಕಾಫಿ, ಆಹಾ ಅದರ ಮಜವೆ ಬೇರೆ. ಈ ಸಾಲು ಬರೆಯುತ್ತಾ ಇದ್ರೇನೆ ಯಾವುದಾದರು ಮದುವೆಗೆ ಹೋಗೋಣ ಅನ್ಸತ್ತೆ.

ಕೆಲಸದ ನಿಮಿತ್ತ ಮುಂಬೈ, ಪೂನ, ಇಂದೋರ್ ನಗರಗಳಿಗೆ ವರ್ಗವಾಗಿದ್ದಾಗ ಜೊತೆಯಲ್ಲೇ ಕಾಫಿ ಫಿಲ್ಟರ್, ಕಾಫಿಪುಡಿ ತೆಗೆದುಕೊಂಡು ಹೋಗುತ್ತಿದ್ದುದು ರೂಢಿ. ಅಲ್ಲಿಯೋ ಒಳ್ಳೆಯ ಕಾಫಿಪುಡಿ ಸಿಗುವುದೇ ಕಷ್ಟ. ದಾದರ್ ನಲ್ಲೋ, ಮಾತುಂಗದಲ್ಲೋ ಕೆಲವು ಅಂಗಡಿಗಳಲ್ಲಿ ಮಾತ್ರ ಒಳ್ಳೆಯ ಕಾಫಿಪುಡಿ ಸಿಗುತ್ತಿತ್ತು. ಮನೆಯಲ್ಲಿ ಕಾಫಿಪುಡಿ ಸ್ಟಾಕ್ ಖಾಲಿ ಆದ ಮೇಲೆ ಅಲ್ಲಿಗೆ ಹೋಗಿ ತರಬೇಕೆಂದರೆ ದೊಡ್ಡ ತಲೆನೋವು. ಈ ಊರುಗಳಲ್ಲಿ ಒಳ್ಳೆಯ ಫಿಲ್ಟರ್ ಕಾಫಿ ಕೊಡುವ ಹೋಟಲ್ಗಳು ಸಿಗುವುದೇ ಕಷ್ಟ. ಫಿಲ್ಟರ್ ಕಾಫಿ ಅಂತ ಹೇಳಿ ಕೊಡ್ತಾರೆ, ಕುಡಿದ ಮೇಲೆ ಸಂದೇಹ ಬರುತ್ತೆ, ಅದು ನಿಜವಾಗ್ಲೂ ಫಿಲ್ಟರ್ ಕಾಫಿನಾ ಅಂತ, ಹಾಗಾಗಿ ಆ ಊರುಗಳಲ್ಲಿ ಇದ್ದಷ್ಟು ವರ್ಷವೂ ಹೊರಗಡೆ ಹೋದಾಗ ಟೀ ಕುಡಿಯುತ್ತಿದ್ದೆ. ಕಾಫಿ ದಾಸನಾದ, ಎಂದೂ ಟೀ ಕುಡಿಯದ ನನಗೆ ಅದು ಬಹುದೊಡ್ಡ ಬದಲಾವಣೆ.

ಅದಾಗಿ ನಾನು ಅಮೆರಿಕಾಕ್ಕೆ ವಲಸೆ ಹೋದ ಮೇಲಂತೂ ಕಾಫಿ ಕುಡಿಯುವ ಪರಿಯೇ ಬೇರೆಯಾಗಿ ಹೋಯ್ತು. ನಾನು ಮೊದಲ ಬಾರಿ ಅಮೆರಿಕಾಕ್ಕೆ ಕಾಲಿಟ್ಟಿದ್ದು ಚಿಕಾಗೊ ನಗರದಲ್ಲಿ, ಅಲ್ಲಿಂದ ಕನೆಕ್ಷನ್ ಫ್ಲೈಟ್ ಫಿನಿಕ್ಸ್ ನಗರಕ್ಕಿತ್ತು. ಫ್ಲೈಟ್ ಹೊರಡಲು ಇನ್ನೂ ೨-೩ ಘಂಟೆಯಿದ್ದಿದ್ದರಿಂದ ಹತ್ತಿರದಲ್ಲೇ ಇದ್ದ ಸ್ಟಾರ್ ಬಕ್ಸ್ ಕಾಫಿಗೆ ನುಗ್ಗಿ ಕಾಫಿ ಆರ್ಡರ್ ಮಾಡಾಗಿತ್ತು. ಅದು ಅಮೆರಿಕಾ ಕಾಫಿಗೆ ನನ್ನ ಮೊದಲ ಪರಿಚಯ. ಬೆಂಗಳೂರಿನ ಕಾಫಿ ಡೇಗಳಲ್ಲಿ ಕೆಫೆ ಲಾಟೆ ಕುಡಿದು ಅಭ್ಯಾಸವಿತ್ತು, ಹಾಗಾಗಿ ಇಲ್ಲೂ ಒಂದು ಮೀಡಿಯಂ ಸೈಜ್ ಕಾಫಿ ಆರ್ಡರ್ ಮಾಡಿದ್ದೆ. ಅವನು ಕೊಟ್ಟ ಕಾಫಿ ಕಪ್ ಸೈಜ್ ನೋಡಿ ದಂಗಾಗಿದ್ದೆ. ಸುಮಾರು ೩ ಜನಕ್ಕೆ ಆಗೋ ಅಷ್ಟು ಕಾಫಿ, ನಮ್ಮಲ್ಲಿ ಒಂದು ಚೊಂಬು ಕಾಫಿ ಕುಡಿದ ಅಂತಾರಲ್ಲ ಆ ಲೆಕ್ಕ. ೧೦-೧೨ ಘಂಟೆಯ ಪ್ರಯಾಣದ ಸುಸ್ತಿಗೆ ಅಷ್ಟು ಕಾಫಿ ಬೇಕಾಗಿತ್ತು ಬಿಡಿ. ಬೆಂಗಳೂರಿನ ಫಿಲ್ಟರ್ ಕಾಫಿ ರುಚಿಗೆ ಒಗ್ಗಿಹೋಗಿದ್ದ ನನ್ನ ನಾಲಿಗೆ ಈ ಕಾಫಿಗಳಿಗೆ ಅಡ್ಜೆಸ್ಟ್ ಆಗಬೇಕೆನಿಸಿತು. ಅಮೆರಿಕಾದಲ್ಲಿ ಕಾಫಿ ಶಾಪ್ಗಳಿಗೇನು ಬರವಿಲ್ಲ, ಕಾಫಿ ಶಾಪ್ ಚೈನ್ ಸ್ಟೋರ್ ಗಳಿಂದ ಹಿಡಿದು, ಸ್ಥಳೀಯ ಹಳೆಯ ಕಾಫಿ ಶಾಪ್ಗಳು ಸಾಕಷ್ಟು ಸಿಗುತ್ತದೆ. ಮೊದಮೊದಲು ಸಾಮಾನ್ಯವಾಗಿ ಸಿಗುವ ಡ್ರಿಪ್ ಫಿಲ್ಟರ್ ಕಾಫಿಗೆ ಹಾಲು, ಸಕ್ಕರೆ ಹಾಕಿ ಕುಡಿಯುತ್ತಿದ್ದೆ. ಅದೋ ನನಗೆ ಬಿಸಿಯಾದ ಸಿಹಿ ಕಲಗಚ್ಚು ನೀರು ಕುಡಿಯುತ್ತಿದ್ದಂತಿರುತ್ತಿತ್ತು. ಹಾಗಾಗಿ ನನ್ನ ಮುಂದಿನ ಕಾರ್ಯ ಕ್ಯಾಪಚೀನೊ, ಕೆಫೆ ಲಾಟೆ, ಮಾಕಿಯಾಟೊ, ಎಸ್ಪ್ರೆಸೊ, ಅಮೆರಿಕಾನೊ, ಡಾರ್ಕ್ ಡ್ರಿಪ್ ಫಿಲ್ಟರ್ ಕಾಫಿಗಳಲ್ಲಿ ಯಾವುದಾದರೊಂದಕ್ಕೆ ಹೊಂದಿಕೊಳ್ಳುವದಾಗಿತ್ತು. ಕ್ಯಾಪಚೀನೊ, ಕೆಫೆ ಲಾಟೆ, ಮಾಕಿಯಾಟೊ ಕಾಫಿಗಳು ಹೆಚ್ಚು ಕಡಿಮೆ ನಮ್ಮ ಫಿಲ್ಟರ್ ಕಾಫಿಯ ರುಚಿಯನ್ನು ಹೋಲುತ್ತೆ, ಕ್ಯಾಪಚೀನೊ ಕಾಫಿಯಲ್ಲಿ ಹಾಲಿನ ನೊರೆ ಜಾಸ್ತಿ, ಲಾಟೆಯಲ್ಲಿ ಸ್ಟೀಮ್ಡ್ ಹಾಲು ಜಾಸ್ತಿ, ಮಾಕಿಯಾಟೊಲಿ ಸ್ಟೀಮ್ಡ್ ಹಾಲಿಗಿಂತ ಕಾಫಿ ಜಾಸ್ತಿ ಜೊತೆಗೆ ಸ್ವಲ್ಪ ಸ್ಟ್ರಾಂಗ್. ಮಾಕಿಯಾಟೊ ನನ್ನ ರುಚಿಗೆ ಬಹಳ ಹತ್ತಿರವಾಗಿದ್ದರಿಂದ ಕೊನೆಗೂ ಅದಕ್ಕೆ ಹೊಂದುಕೊಂಡೆ. ಡಾರ್ಕ್ ಡ್ರಿಪ್ ಫಿಲ್ಟರ್ ಕಾಫಿಯೂ ಘಮಘಮಿಸುತ್ತದೆ, ಕೊರತೆ ಏನಪ್ಪ ಅಂದರೆ ಫ್ಲಾಸ್ಕ್ನಲ್ಲಿ ಇಟ್ಟಿರುವ ತಣ್ಣನೆಯ ಹಾಲನ್ನು ಬೆರೆಸಿಕೊಂಡು ಕಾಫಿ ಕುಡಿಯಬೇಕು. ಯಾವಾಗ ಕಾಫಿಗೆ ತಣ್ಣನೆಯ ಹಾಲನ್ನು ಹಾಕ್ತೇವೋ ಅದರ ರುಚಿ ನೆಗೆದು ಬಿದ್ಹೋಯ್ತು ಅಂತಾನೆ, ಅದಕ್ಕೆ ಪರಿಹಾರವಾಗಿ ಕೆಲವು ಕಡೆ ನಾನೆ ಹಾಲನ್ನ ಮೈಕ್ರೊವೇವ್ ಅವನ್ನಲ್ಲಿ ಬಿಸಿ ಮಾಡಿಸಿ ಕಾಫಿಗೆ ಹಾಕಿಕೊಂಡು ಕುಡಿಯುತ್ತಿದ್ದೆ.

ಮೂರು ವರ್ಷಗಳ ಹಿಂದೆ ಈ ನನ್ನ ಕಾಫಿ ಹುಚ್ಚನ್ನು ಇನ್ನೊಂದು ಹಂತಕ್ಕೆ ಕರೆದುಕೊಂಡು ಹೋಗಿದ್ದು ನಾನು ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ. ಎಲ್ಲ ಕಂಪನಿಗಳಲ್ಲಿರುವಂತೆ ನಮ್ಮ ಕಂಪನಿಯಲ್ಲೂ ಚಿಕ್ಕ ಕಿಚನ್ ರೂಂ ವ್ಯವಸ್ಥೆಯಿತ್ತು.

(... ಮುಂದಿನ ಪುಟಕ್ಕೆ)


Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ಕಾಫಿನ ಇಷ್ಟ ಪಟ್ಕೊಂಡು ಕುಡಿಬೇಕ್ರಿ, ಕಷ್ಟ ಪಟ್ಕೊಂಡಲ್ಲ ...

ಕಟ್ಟಡದ ಪ್ರತಿಯೊಂದು ಅಂತಸ್ತಿನ ಕೆಲವು ಆಯಾಕಟ್ಟಿನ ಜಾಗಗಳಲ್ಲಿ ಈ ಕಿಚನ್ ರೂಂ ಇದ್ದು ಅಲ್ಲಿರುವ ಫ್ರಿಜ್, ಮೈಕ್ರೋ ವೇವ್ ಆವನ್, ಡ್ರಿಪ್ ಕಾಫಿ ಮೇಕರ್ ಹಾಗು ಇನ್ನಿತರ ಸೌಲಭ್ಯಗಳನ್ನು ನೌಕರರು ತಾವು ಮನೆಯಿಂದ ತಂದ ಊಟ/ತಿಂಡಿಯನ್ನು ಫ್ರಿಜ್ನಲ್ಲಿ ಇಡುವುದಕ್ಕೋ, ಮೈಕ್ರೋ ವೇವ್ ಆವನ್ ನಲ್ಲಿ ಬಿಸಿ ಮಾಡುವುದಕ್ಕೋ, ಬಿಸಿ ಬಿಸಿ ಕಾಫಿ ಮಾಡುವುದಕ್ಕೋ ಉಪಯೋಗಿಸುತ್ತಿದ್ದರು. ಕಾಫಿ ಪ್ರಿಯನಾದ ನಾನು ಹೊತ್ತು ಹೊತ್ತಿಗೆ ತಾಜ ಕಾಫಿ ಮಾಡುವ ಸಲುವಾಗಿ ಕಿಚನ್ ರೂಂ ಕಡೆ ಓಡಾಟ ಜಾಸ್ತಿ. ನಾನು ಕುಳಿತುಕೊಳ್ಳುತ್ತಿದ್ದ ಜಾಗದ ಹತ್ತಿರದಲ್ಲೇ ಇದ್ದ ಕಿಚನಿನಲ್ಲಿ ಅಲ್ಲೇ ಸಿಗುವ ಕಾಫಿಪುಡಿ ಹಾಗೂ ಹಾಲಿನಿಂದ ತಾಜ ಕಾಫಿ ಮಾಡುವುದು ನನ್ನ ದಿನನಿತ್ಯದ ಅಭ್ಯಾಸ. ಆ ಕಿಚನ್ನಲ್ಲಿದ್ದ ಕಾಫಿ ಮೇಕರ್ ಅವಾಗವಾಗ ಕೆಟ್ಟಿಕೂರುತ್ತಿತ್ತು, ಹಾಗಾಗಿ ಹತ್ತಿರದಲ್ಲಿದ್ದ ಇನ್ನೊಂದು ಕಿಚನ್ಗೂ ಕಾಫಿ ಮಾಡಲು ಹೋಗುತ್ತಿದ್ದೆ. ಒಮ್ಮೆ ಈ ಇನ್ನೊಂದು ಕಿಚನಿನಲ್ಲಿ ಕಾಫಿ ರೆಡಿ ಮಾಡುವಾಗ, ಅಷ್ಟರಲ್ಲೇ ಅಲ್ಲಿಗೆ ಇನ್ನೊಂದು ಡಿಪಾರ್ಟ್ಮೆಂಟಿನಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಬಂದು ಅಲ್ಲೇ ಇದ್ದ ಕಬೋರ್ಡಿನಿಂದ ಒಂದು ಬಾಕ್ಸ್ ತೆಗೆದು ಅದರಿಂದ ಕಾಫಿಬೀಜದ ಪ್ಯಾಕೆಟ್, ಹ್ಯಾಂಡ್ ಹೆಲ್ಡ್ ಕಾಫಿ ಗ್ರೈಂಡರ್, ಹ್ಯಾಂಡ್ ಹೆಲ್ಡ್ ಮಿಲ್ಕ್ ಬ್ಲೆಂಡರ್ ತೆಗೆದಿಟ್ಕೊಂಡ. ನಾನು ಹಾಕಿದ ಕಾಫಿ ಡಿಕಾಕ್ಷನ್ ಇನ್ನು ಆಗಿರಲಿಲ್ಲ, ಹಾಗಾಗಿ ಅವನೇನು ಮಾಡುತ್ತಾನೆಂದು ಆಶ್ಚರ್ಯವೂ ಆಸಕ್ತಿಯೂ ಮೂಡಿಸಿತ್ತು, ನೋಡುತ್ತಾ ನಿಂತಿದ್ದೆ. ಸ್ವಲ್ಪ ಕಾಫಿಬೀಜವನ್ನು ತೆಗೆದು ಹ್ಯಾಂಡ್ ಹೆಲ್ಡ್ ಕಾಫಿ ಗ್ರೈಂಡರ್ನಲ್ಲಿ ಪುಡಿ ಮಾಡಿಟ್ಕೊಂಡ, ನೀರು ಬಿಸಿ ಮಾಡಿ ಪಕ್ಕಕ್ಕಿಟ್ಟ. ಕಾಫಿ ಫಿಲ್ಟರ್ ಕೋನ್ಗೆ ಪೇಪರ್ ಹಾಕಿ, ಕಾಫಿಪುಡಿ ಬಿಸಿನೀರು ಹಾಕಿ ಡಿಕಾಕ್ಷನ್ ಇಳಿಯಲು ಬಿಟ್ಟ. ಜೊತೆಗೆ ಹಾಲು ಬಿಸಿ ಮಾಡಿ ಹ್ಯಾಂಡ್ ಹೆಲ್ಡ್ ಮಿಲ್ಕ್ ಬ್ಲೆಂಡರ್ನಿಂದ ಹಾಲನ್ನು ಬ್ಲೆಂಡ್ ಮಾಡಿಟ್ಕೊಂಡ. ನಾನೇ ಕಾಫಿ ಪಂಟ, ಇವನ್ಯಾರೋ ಕಾಫಿ ಮಾಡೋದ್ರಲ್ಲಿ ದೊಡ್ಡ ಪಂಟ್ರೇ ಇರಬೇಕು ಅನ್ಕೊಂಡು ಕಣ್ಣು ಬಾಯಿ ಬಿಟ್ಕೊಂಡು ನೋಡ್ತಾ ನಿಂತಿದ್ದೆ. ಅವನ ಕಾಫಿ ತಯಾರಿಯನ್ನು ಆಶ್ಚರ್ಯದಿಂದ ನೋಡುತ್ತಿದ್ದ ನನ್ನನ್ನು ನೋಡಿ, I make my own fresh coffee every time ಅಂದ, that's interesting ಅಂತ ಹೇಳಿ ನಕ್ಕೆ. ನಿಮಗೂ ಒಂದು ಕಪ್ ಕೊಡ್ಲ ಅಂದಿದ್ದಕ್ಕೆ ಹಲ್ಲು ಕಿರಿದು ಹೂಂ ಅಂದಾಗಿತ್ತು. ಫ್ರೆಷ್ ಡಿಕಾಕ್ಷನ್ಗೆ ಬಿಸಿಯಾಗಿ ಬ್ಲೆಂಡ್ ಮಾಡಿಟ್ಟಿದ್ದ ಹಾಲು ಬೆರಸಿ ಕಪ್ ನನ್ನ ಕೈಗೆ ಕೊಡುತ್ತಾ, ನಾನು ವಿನ್ಸೆಂಟ್ ಇಲ್ಲೇ ಡಿಸೈನ್ನಲ್ಲಿ ಕೆಲಸ ಮಾಡ್ತೀನಿ ಅಂದ. ಸಕ್ಕರೆ ಹಾಕಿಲ್ಲ ನೀನೇ ಹಾಕ್ಕೊ, ಅಥವಾ ಇಲ್ಲೇ molasses cubes(ನಮ್ಮ ಅಚ್ಚುಬೆಲ್ಲ ಅನ್ಕೊಳಿ) ಇದೆ ಟ್ರೈ ಮಾಡು, ಸಕ್ಕರೆಗಿಂತ ಕಾಫಿ ಇದರಲ್ಲಿ ರುಚಿ ಜಾಸ್ತಿ ಅಂದ. ಇಷ್ಟೆಲ್ಲಾ ಕಾಫಿ ಸಾಹಸ ಮಾಡುವ ಈ ಮಹಾನುಭಾವನನ್ನು ನೋಡಿ, ನಿನ್ ಪಾದ ಒಂದು ಜೆರಾಕ್ಸ್ ಕಾಪಿ ಕೊಡಪ್ಪ ಅಂತ ಮನಸ್ಸಿನಲ್ಲೇ ಅನ್ಕೊಂಡೆ. ಅವನು ಕೊಟ್ಟ ಕಾಫಿಯ ರುಚಿ ನನ್ನನ್ನು ಎಲ್ಲೋ ಕರೆದುಕೊಂಡು ಹೋಗಿತ್ತು, ಅಷ್ಟು ರುಚಿಯಾದ ಕಾಫಿ. ಮತ್ತೆ ಸುಮಾರು ಸಲ ಆ ಕಿಚನ್ನಲ್ಲಿ ಅವನು ಮಾಡುತ್ತಿದ್ದ ಕಾಫಿಯ ಸೇವನೆಯೂ ಆಗಿ ಪರಿಚಯ ಗೆಳತನಕ್ಕೆ ತಿರುಗಿತ್ತು.

ಹೀಗೆ ಅವನ ಕಾಫಿಯ ರುಚಿಗೆ ಮಾರುಹೋಗಿದ್ದ ನಾನು, ಮನೆಯಲ್ಲೇಕೆ ಹೀಗೆ ಕಾಫಿ ಮಾಡಬಾರದೆಂದು ಆಲೋಚಿಸಿ ಅವನಿಂದ ಎಲ್ಲಾ ಮಾಹಿತಿ ಪಡೆದು ನನ್ನ ಹೆಂಡತಿಗೆ ಇನ್ನು ಮುಂದೆ ಕಾಫಿಯನ್ನು ಈ ರೀತಿ ಮಾಡೋಣವೆಂದಿದ್ದಕ್ಕೆ ಅವಳು ಈಗಲೇ ಮಾಡಲು ಸಾಕಷ್ಟು ಕೆಲಸವಿದೆ ಅದರ ಮಧ್ಯೆ ಈ ಕೆಲಸ ಎಲ್ಲಿಂದ ಹುಡುಕಿಕೊಂಡು ಬಂದ್ರಿ, ಏನೂ ಬೇಕಾಗಿಲ್ಲ ಸುಮ್ಮನೆ ಈಗ ಮಾಡ್ತಿರೋ ಕಾಫಿನ ಕುಡೀರಿ ಸಾಕು ಅಂತ ಖಡಾಖಂಡಿತವಾಗಿ ಹೇಳಿದ್ಳು.ಆ ತರಹದ ರುಚಿಯಾದ ಕಾಫಿ ಕುಡಿದ ನನಗೆ ಬಿಡಲು ಮನಸ್ಸಿರಲಿಲ್ಲ, ಹಾಗಾಗಿ ಇನ್ಮೇಲೆ ನಾನೇ ಕಾಫಿ ಮಾಡುತ್ತೇನೆಂದು ಒಪ್ಪಿಸಿ ಒಳ್ಳೆಯ ಕಾಫಿಬೀಜ, ಹ್ಯಾಂಡ್ ಹೆಲ್ಡ್ ಕಾಫಿ ಗ್ರೈಂಡರ್, ಹ್ಯಾಂಡ್ ಹೆಲ್ಡ್ ಮಿಲ್ಕ್ ಬ್ಲೆಂಡರ್, ಕಾಫಿ ಫಿಲ್ಟರ್ ಕೋನ್ ತಂದು ಮೊದಲ ಸಲ ಮನೆಯಲ್ಲೇ ಕಾಫಿಬೀಜ ಪುಡಿ ಮಾಡಿ ತಾಜ ಕಾಫಿ ಕುಡಿದಾಗ ಅದರ ಮಜವೇ ಬೇರೆಯಿತ್ತು. ಒಂದು ಕಡೆ ನೀರು ಕುದಿಯಲು ಬಿಟ್ಟು, ಇನ್ನೊಂದು ಕಡೆ ಕಾಫಿಬೀಜವನ್ನು ಆಗ ತಾನೆ ಫ್ರೆಷ್ ಆಗಿ ಪುಡಿಮಾಡಿ ತಕ್ಕಷ್ಟು ಚಿಕೋರಿ ಬೆರೆಸಿ, ಜೊತೆಜೊತೆಗೆ ಹಾಲನ್ನು ಕುದಿಸಿ, ಬ್ಲೆಂಡ್ ಮಾಡಿ ಕಾಫಿಯನ್ನು ಕುಡಿಯಬೇಕಾಗಿದ್ದ ಸಾಹಸವನ್ನು ನೋಡಿದ ನನ್ನ ಹೆಂಡತಿ, ನಿಮಗ್ಯಾಕೆ ಈ ತರಹ ಕಾಫಿ ಮಾಡುವ ಹುಚ್ಚು ಸುಮ್ಮನೆ ಅಂಗಡಿಲಿ ಸಿಗೋ ಕಾಫಿಪುಡಿ ಹಾಕ್ಕೊಂಡು ಕುಡಿದರಾಯ್ತು, ಒಂದು ಕಾಫಿಗೆ ಇಷ್ಟೆಲ್ಲಾ ಆವಾಂತರ ಯಾಕೆ ಬೇಕು ಅಂತ ಹೇಳಿದ್ಳು. ನಾನೋ ಬಿಟ್ಟಿರಲಿಲ್ಲ, ಈ ತರಹದ ರುಚಿಯಾದ ಕಾಫಿ ಕುಡಿದ ಮೇಲೆ, ೨-೩ ತಿಂಗಳ ಹಿಂದೆ ಪ್ಯಾಕ್ ಮಾಡಿದ ಹಳೆಯ ಕಾಫಿಪುಡಿಯ ಕಾಫಿ ಈಗ ಹೇಗೆ ರುಚಿಸಬೇಕು ನನಗೆ. ವಿನ್ಸೆಂಟ್ ಕಿಚನ್ನಲ್ಲಿ ಸಿಕ್ಕಾಗಲೆಲ್ಲಾ ವಿಧವಿಧವಾದ ಕಾಫಿಯ ಬಗ್ಗೆಯೇ ಮಾತು, ಹಾಗಾಗಿ ಬೇರೆ ಬೇರೆ ದೇಶದ ಕಾಫಿಬೀಜಗಳನ್ನು ತಂದು ಕಾಫಿ ಸವಿಯುವುದು ಶುರುವಾಯ್ತು. ಬ್ರೆಜಿಲಿಯನ್, ಕೊಲೊಂಬಿಯನ್, ಕೋಸ್ಟ ರೀಕನ್, ಇಥಿಯೋಪಿಯನ್, ವಿಯೆಟ್ನಾಮೀಸ್, ಇಂಡಿಯನ್ ಹೀಗೆ ಒಂದಲ್ಲ ಒಂದು ಹೊಸ ರುಚಿಯ ಕಾಫಿ ಮಾಡುವುದು ಅಭ್ಯಾಸವಾಗಿಹೋಗಿದೆ. ಬೇರೆ ಬೇರೆ ಸ್ವಾದದ ಕಾಫಿಯ ರುಚಿಯೇ ಬೇರೆ. ಕುಡಿದೇ ತಿಳಿಯಬೇಕು ಅದರ ಮಜವ.

ಈಗೆಲ್ಲಾ ಆರ್ಗಾನಿಕ್ ಪದಾರ್ಥಗಳನ್ನು ಹೆಚ್ಚು ಉಪಯೋಗಿಸುವುದು ಶೋಕಿಯಾಗಿಬಿಟ್ಟಿದೆ. ಅದೇ ಶೋಕಿನಲ್ಲಿ ನನಗೊಮ್ಮೆ ಆರ್ಗಾನಿಕ್ ಕಾಫಿಬೀಜ ಕಣ್ಣಿಗೆ ಬಿತ್ತು ನೋಡಿ, ಶುರುವಾಯ್ತು ಅದರ ಮೇಲೆ ನನ್ನ ಪ್ರಯೋಗ. ಆರ್ಗಾನಿಕ್ ಕಾಫಿಬೀಜವೋ ನೋಡುವುದಕ್ಕೆ ಬೇರೆ ಕಾಫಿಬೀಜಗಳಂತಿರಲಿಲ್ಲ, ಒಣಗಿ, ಮುರುಟಾಗಿದ್ದ ಹಳೇ ಹುಣಸೆ ಬೀಜಗಳಂತಿದ್ದವು. ನನಗ್ಯಾಕೋ ಇದರಲ್ಲಿ ಕಾಫಿ ರುಚಿ ಹೆಂಗಾಗುತ್ತದೋ ಎಂದು. ಕಾಫಿಯನ್ನೇನೋ ಮಾಡಿ ಕುಡಿದೆ, ಬೇರೆ ಕಾಫಿಬೀಜದಲ್ಲಿ ಮಾಡಿದ ಕಾಫಿಯ ಅರ್ಧದಷ್ಟೂ ರುಚಿಯಿರಲಿಲ್ಲ. ಈ ಕಾಫಿಬೀಜದಲ್ಲಿ ಮುಂದೆ ನನಗೆ ಕಾಫಿ ಮಾಡುವ ಇಚ್ಛೆಯಿರಲಿಲ್ಲ. ಕಾಫಿಬೀಜವನ್ನು ನೋಡಿದರೆ ಹೆಚ್ಚು ಹುರಿದಂಗೆ ಕಾಣಲಿಲ್ಲ. ಕಾಫಿಬೀಜ ಹೆಚ್ಚು ಹುರಿದಷ್ಟೂ ಅದರ ಎಣ್ಣೆ ಬಿಟ್ಟು, ಕಾಫಿ ಸ್ಟ್ರಾಂಗ್ ಹಾಗು ಸ್ವಾದ ಹೆಚ್ಚಿಸುತ್ತೆ. ಆಗ ನನ್ನ ತಲೆಗೆ ಹೊಳೆದಿದ್ದು ಈ ಬೀಜವನ್ನು ಬಿಸಾಡುವ ಬದಲು ಮನೆಯಲ್ಲೇ ಇನ್ನೂ ಸ್ವಲ್ಪ ಜಾಸ್ತಿ ಹುರಿಯಬಹುದೆಂದು. ಈ ಐಡಿಯಾನ ನನ್ನ ಹೆಂಡತಿ ಮುಂದಿಟ್ಟಾಗ ಅವಳು ನಿನ್ನನ್ನು ನೋಡಿ ನಗಬೇಕೋ ಅಳಬೇಕೋ ಗೊತ್ತಾಗ್ತಿಲ್ಲ, ಇಷ್ಟು ದಿನ ಕಾಫಿಬೀಜ ಪುಡಿಯಷ್ಟೇ ಮಾಡುತ್ತಿದ್ದೆ ಈಗ ಮನೆಯಲ್ಲೇ ಹುರಿದು, ಪುಡಿ ಮಾಡ್ಕೊಂಡು ಮನೇನ ಕಾಫಿಪುಡಿ ಅಂಗಡಿ ಮಾಡಬೇಕು ಅಂದ್ಕೊಂಡಿದಿಯಾ. ದುಡ್ಡು ಹೋದರೂ ಪರವಾಗಿಲ್ಲ ಆ ಕಾಫಿಬೀಜ ಬಿಸಾಕಿ ಬೇರೆ ಕಾಫಿಬೀಜ ತೊಗೊ, ಈ ಹುರಿಯೊ ಹುಚ್ಚು ಐಡಿಯಾಗಳನ್ನ ತಲೆಯಿಂದ ತೆಗೆದುಹಾಕು ಅಂದಿದ್ಲು. ಅವತ್ತೇನಾದ್ರು ಹುರಿದು ಕಾಫಿಪುಡಿ ಮಾಡಿದಿದ್ರೆ ನನ್ನ ಹೆಂಡತಿ ಹೇಳ್ದಂಗೆ ಇವತ್ತು ನಮ್ಮ ಅಡಿಗೆಮನೆ ಕಾಫಿಪುಡಿ ಅಂಗಡಿ ತರಹ ಇರುತ್ತಿತ್ತು ಅನ್ಸತ್ತೆ. ಏನೇ ಹೇಳಿ ತರತರಾವರಿ ಕಾಫಿನ ಹೊತ್ತ ಹೊತ್ತಿಗೆ ಇಷ್ಟಪಟ್ಕೊಂಡು ಕುಡಿತೀನಿ. ಕಾಫಿನ ಇಷ್ಟ ಪಟ್ಕೊಂಡು ಕುಡಿಬೇಕ್ರಿ, ಕಷ್ಟ ಪಟ್ಕೊಂಡಲ್ಲ. ಬರೆದು ಆಯಾಸವಾಗಿದೆ, ಒಂದು ಫ್ರೆಷ್ ಡಿಕಾಕ್ಷನ್ ಹಾಕಿ ಬರ್ತೀನಿ. ಬಿಡುವು ಮಾಡಿಕೊಂಡು ಮನೆ ಕಡೆ ಬನ್ನಿ ಒಂದು ಫ್ರೆಷ್ ಫಿಲ್ಟರ್ ಕಾಫಿ ಕುಡಿದು ಹೋಗುವಿರಂತೆ.





Copyright © KCO – Brindavana

ಸಂಚಿಕೆ
೧೪
ಜನವರಿ, ೨೦೧೮

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## ದೂರ ದೇಶವೆಂಬ ಪಕ್ಕದ ಮನೆ



ಕಾವ್ಯ ಕಡಮೆ ನಾಗರಕಟ್ಟೆ

ಅಂದು ಬೆಳಿಗ್ಗೆ ನಾನು ಹುಬ್ಬಳ್ಳಿಯಲ್ಲಿರುವ ನನ್ನ ತಾಯಿಯ ಹತ್ತಿರ ಫೋನಿನಲ್ಲಿ ಮಾತನಾಡುತ್ತಿದ್ದೆ. ನನಗೆ ನ್ಯೂಜೆರ್ಸಿಯಲ್ಲಿ ಬೆಳಗಾದಾಗ ಅಮ್ಮನಿಗೆ ಹುಬ್ಬಳ್ಳಿಯಲ್ಲಿ ಅದೇ ದಿನ ಸಂಜೆಯಾಗಿರುತ್ತದೆ. ಅವರು ಅಂದು ಮಾಡಿದ ಅಡುಗೆಯ ಬಗ್ಗೆ, ಮನೆಗೆ ಬಂದು ಹೋದ ನೆಂಟರ ಬಗ್ಗೆ, ಆ ನೆಂಟರ ಮಗು ಸೋಫಾದ ಮೇಲಿನಿಂದ 'ಛೋಟಾ ಭೀಮ್' ತರಹ ಜಂಪ್ ಮಾಡಲು ಹೋಗಿ ತನ್ನ ಮಂಡಿಗೆ ಸಣ್ಣ ಗಾಯ ಮಾಡಿಕೊಂಡಿದ್ದರ ಬಗ್ಗೆ, ಅಮ್ಮ ಓದಿದ ಹೊಸ ಪುಸ್ತಕದ ಬಗ್ಗೆ, ಅವರ ಸಣ್ಣ ತಲೆನೋವಿನ ಬಗ್ಗೆ ಮಾತನಾಡಿಯಾದ ಮೇಲೆ ಒಂದು ಪ್ರಶ್ನೆ ಕೇಳಿದೆ. "ಪಕ್ಕದ ಮನೆಯ ವತ್ಸಲಾ ಆಂಟಿ ಈಗ ಹೇಗಿದ್ದಾರಮ್ಮಾ?" ಅಂತ. "ಏನೋ ನನಗೂ ಗೊತ್ತಿಲ್ಲ! ಅವರು ಸಿಗದೇ ತಿಂಗಳ ಮೇಲೇ ಆಯ್ತು" ಅಂದರು ಅಮ್ಮ.

ನನಗೆ ಅವರ ಆ ಉತ್ತರ ಕೇಳಿ ಅಚ್ಚರಿಯಾಯಿತು. ಹದಿನಾರು ಸಾವಿರ ಕಿಲೋಮೀಟರುಗಳಷ್ಟು ದೂರವಿರುವ ನನಗೆ ಅಮ್ಮ ಅಂದು ಸಾರಿಗೆ ಕರಿಬೇವಿನ ಒಗ್ಗರಣೆ ಹಾಕಿದ್ದರೆನ್ನುವುದು ಗೊತ್ತಿತ್ತು. ಒಗ್ಗರಣೆ ಹಾಕುವಾಗ ಬಿಸೀ ಎಣ್ಣೆಗೆ ಸಾಸಿವೆ ಸಿಡಿದು ಅಮ್ಮನ ಅಂಗೈ ಮೇಲೆ ಆದ ಸಾಸಿವೆಯಾಕಾರದ ಪುಟ್ಟ ಕಂದು ಕಲೆಯ ಅರಿವಿತ್ತು. ಅವರ ಮನೆಗೆ ಬಂದ ಆ ನೆಂಟರ ಮಗುವಿನ ತುಂಟತನದ ಪರಿಚಯವೂ ಕಣ್ಣಿಗೆ ಕಟ್ಟುವಷ್ಟು ಸ್ಪಷ್ಟವಿತ್ತು. ಆದರೆ ಕರೆದರೆ ಕೇಳುವಷ್ಟೇ ಹತ್ತಿರವಿರುವ ಪಕ್ಕದಮನೆಯ ವತ್ಸಲಾ ಆಂಟಿಯನ್ನು ನನ್ನ ತಾಯಿ ತಿಂಗಳಿಂದ ಕಂಡಿರಲಿಲ್ಲ, ಮಾತನಾಡಿಸಿರಲಿಲ್ಲ. "ಅವರಿಗೂ ಅವರದೇ ಕೆಲಸದ ಗಡಿಬಿಡಿ ಪಾಪ. ನಿನ್ನ ಹಾಗೆ ಅವರೂ ದಿನಾ ಫೋನು ಮಾಡಿ ತಲೆ ತಿನ್ನುವವರಾಗಿದ್ದರೆ ಸಿಗ್ತಿದ್ದರೋ ಏನೋ" ಅಂತ ಅಮ್ಮ ಖುಷಾಲು ಮಾಡಿದರು.

ದೂರವಾಣಿ ಎಂಬ ಸಂಪರ್ಕ ಮಾಧ್ಯಮಕ್ಕೆ ಮತ್ತು ಅಂತರ್ಜಾಲ ಎಂಬ ನವಮಾಧ್ಯಮಕ್ಕೆ ನನ್ನ ಪೀಳಿಗೆಯವರು ಎಷ್ಟು ಋಣಿಯಾಗಿದ್ದರೂ ಸಾಲದು ಅನ್ನಿಸುತ್ತದೆ. ನಮ್ಮ ಹಿಂದಿನ ತಲೆಮಾರಿನವರು ಯಾವುದಕ್ಕಾಗಿ ಒದ್ದಾಡುತ್ತಿದ್ದರೋ ಅದು ನಮಗೆ ಸುಲಭದಲ್ಲಿ ಸಿಗುತ್ತಿರುವುದು ವೈಜ್ಞಾನಿಕ ಅನ್ವೇಷಣೆಗಳು ನಮಗೆ ದೊರಕಿಸಿಕೊಟ್ಟ ಭಾಗ್ಯವೇ ಸರಿ. ನಮ್ಮ ತಾಯಿ ಅವರ ತಾಯಿಯ ಹತ್ತಿರ ಹೀಗೆ ಹೊತ್ತು ಗೊತ್ತಿಲ್ಲದೇ ಫೋನಿನಲ್ಲಿ ಹರಟಿದ್ದನ್ನು ನಾನು ಕಂಡಿಲ್ಲ. ಹದಿನೆಂಟೇ ವರ್ಷಗಳ ಹಿಂದೆ ಹೊಸತಾಗಿ ನಮ್ಮ ಮನೆಯಲ್ಲಿ ಟೆಲಿಫೋನು ಕನೆಕ್ಷನ್ ತೆಗೆದುಕೊಂಡಾಗ ಕಿಂಗ್ ಸೈಜ್ ಪುಸ್ತಕದ ಆಕಾರದ ಆ ಯಂತ್ರ ಒಂದೇ ಒಂದು ಬಾರಿ ಉಲಿಯುವುದಕ್ಕಾಗಿ ದಿನವಿಡೀ ಟೆಲಿಫೋನಿನ ಹಿಂದೆಮುಂದೆ ಓಡಾಡಿಕೊಂಡಿದ್ದು ನನಗೆ ನೆನಪಿದೆ. ಕಾರವಾರದ ದೊಡ್ಡಪ್ಪನೋ, ಬೆಂಗಳೂರಿನ ಮಾಮನೋ ಫೋನು ಮಾಡಿದಾಗ ಒಂದೇ ಒಂದು ಬಾರಿ ರಿಸೀವರ್‌ಗೆ ಕಿವಿಕೊಟ್ಟು ಆಚೆ ಕಡೆಯವರ ದನಿ ಕೇಳಲು ನಾನೂ ತಂಗಿಯೂ ಕಾತುರದಿಂದ ಕಾಯುತ್ತಿದ್ದೆವು. ಆಗಿನ್ನೂ ಅಷ್ಟೇನೂ ಮುಖ್ಯವಲ್ಲದ ಸುದ್ದಿಗಳನ್ನು ಹೊತ್ತು ತರುತ್ತಿದ್ದ ಹಳದಿ ಪೋಸ್ಟ್ ಕಾರ್ಡುಗಳು, ದೀರ್ಘ ಗಂಭೀರ ಸಂಗತಿಗಳ ಬರೆಸಿಕೊಂಡು ಬರುತ್ತಿದ್ದ ಹಸಿರು ಇನ್ಲ್ಯಾಂಡ್ ಪತ್ರಗಳು, ವೈಯಕ್ತಿಕ ನೆಲೆಯಲ್ಲಿ ಬ್ರೇಕಿಂಗ್ ನ್ಯೂಸ್ ಗಳನ್ನು ದಿಢೀರನೆ ತಂದು ಓದುವವರ ಎದೆ ಬಡಿತವನ್ನು ತೀವ್ರವಾಗಿಸುತ್ತಿದ್ದ ಟೆಲಿಗ್ರಾಮ್ ಗಳು ಮನೆಯ ಬಾಗಿಲ ತನಕ ಹೇರಳವಾಗಿ ಬರುತ್ತಿದ್ದ ಕಾಲ.



ಈಗ ಅವೇ ಸುದ್ದಿಗಳು ಬಾಗಿಲಿನ ತನಕ ತೆವಳುತ್ತ ಬರದೇ ಸಿಡಿಲು ಬಡಿದಂತೆ ಫೋನಿನಲ್ಲೇ ಕಿವಿಗಪ್ಪಳಿಸುವುದು ಸಂತೋಷ ಪಡಬೇಕಾದ ವಿಷಯವೋ ಖೇದ ಪಡಬೇಕಾದದ್ದೋ ಹೇಳಲಾರೆ. ಆ ಕಾಲದಲ್ಲೇ ಹೆಚ್ಚು ಮುದವಿತ್ತು ಎಂದು ನಂಬುವ ಅನೇಕ ಹಿರಿಯರು ನಮ್ಮ ನಡುವೆಯೇ ಇದ್ದಾರೆ. ಆದರೆ ಭಾರತ ಬಿಟ್ಟು ಪರದೇಶಗಳಿಗೆ ವಲಸೆ ಬಂದವರ ಬಳಿ ಈ ವಾದವನ್ನು ಮುಂದಿಟ್ಟರೆ ಯಾರೂ ಇಂದಿನ ಸಂಪರ್ಕ ಕ್ರಾಂತಿಯನ್ನು ಜರಿಯಲಾರರು. ಅದಕ್ಕೆ ಕಾರಣಗಳು ಒಂದೆರಡಲ್ಲ.

ಭಾರತೀಯರು ಇಂದು ಹಿಂದೆಂದಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪರದೇಶಗಳಿಗೆ ವಲಸೆ ಬರುತ್ತಿದ್ದಾರೆ. ಉನ್ನತ ವ್ಯಾಸಂಗ, ಉದ್ಯೋಗ ಮತ್ತು ವಿವಾಹ- ಇವು ಈ ವಲಸೆಗೆ ಮುಖ್ಯ ಕಾರಣಗಳು. ಅಮೇರಿಕಾ ಮಾತ್ರವಲ್ಲದೇ ಸೌದಿ ಅರೇಬಿಯಾ, ನೇಪಾಳ, ಯು.ಎ.ಇ., ಮಲೇಶಿಯಾ, ಪಾಕಿಸ್ಥಾನ, ಕ್ಯಾನಡಾ, ಯುನೈಟೆಡ್ ಕಿಂಗ್ಡಮ್, ಮೈನ್ಮಾರ್, ಆಸ್ಟ್ರೇಲಿಯಾ ಮುಂತಾದ ಅನೇಕ ರಾಷ್ಟ್ರಗಳಲ್ಲಿ ಅನಿವಾಸಿ ಭಾರತೀಯರು ಹಂಚಿ ಹೋಗಿದ್ದಾರೆ. ಭಾರತದ ಮಿನಿಸ್ಟ್ರಿ ಆಫ್ ಎಕ್ಸ್ಟರ್ನಲ್ ಅಫೇರ್ಸ್ ಪ್ರಕಾರ ಮೂರು ಕೋಟಿ, ಎಂಟು ಲಕ್ಷ ಜನ ಭಾರತೀಯ ಮೂಲದವರು ಬೇರೆ ದೇಶಗಳಲ್ಲಿ ನೆಲೆಸಿದ್ದಾರೆ.

ಬೆಂಗಳೂರಿನಲ್ಲಿರುವ ನನ್ನ ಪರಿಚಯದ ಹಿರಿಯ ಮಹಿಳೆಯೊಬ್ಬರು ಮೂವತ್ತು ವರ್ಷಗಳ ಕೆಳಗೆ ಅವರ ಮಗ ಅಮೇರಿಕೆಗೆ ಉನ್ನತ ವ್ಯಾಸಂಗಕ್ಕಾಗಿ ತೆರಳುತ್ತೇನಂದಾಗ ತಾವು ಅತ್ತು ಕರೆದು ರಂಪಮಾಡಿ ಅವನನ್ನು ಭಾರತದಲ್ಲೇ ಉಳಿಸಿಕೊಂಡಿದುದರ ಕುರಿತು ಹೇಳುತ್ತಿದ್ದರು. "ಒಂದು ಬಾರಿ ಸಾಗರ ಲಂಘನ ಮಾಡಿದರೆ ಮುಗಿದಂತೆಯೇ ಅಲ್ವೇ? ಅವರೂ ವಾಪಸ್ಸು ಬರೊಲ್ಲ, ಅವರಿಂದ ಸುದ್ದಿ ಬರೋದೂ ಕ್ರಮೇಣ ನಿಂತು ಹೋಗುತ್ತೆ" ಎನ್ನುವುದು ಅವರ ಅಂದಿನ ವಾದವಾಗಿತ್ತಂತೆ. ಈಗ ಅದೇ ಅಜ್ಜಿ ತಮ್ಮ ಮೊಮ್ಮಗಳನ್ನು ಖುಷಿಯಿಂದ ಹರಸಿ ಜರ್ಮನಿಯ ಪಟ್ಟಣವೊಂದಕ್ಕೆ ಎಂ.ಎಸ್ ಓದಲು ಕಳುಹಿಸಿಕೊಟ್ಟಿದ್ದಾರೆ. "ನೀನೇ ಕಾಲಕಾಲಕ್ಕೆ ಫೋನು ಮಾಡಿದರೆ ಸರಿ. ಇಲ್ಲದಿದ್ದರೆ ನಾನೇ ವಾಟ್ಸಾಪಿನಲ್ಲಿ ನಿನಗೆ ವೀಡಿಯೋ ಕರೆ ಮಾಡಿ ಕಾಟ ಕೊಟ್ಟುಬಿಡ್ತೀನಿ ಹುಷಾರ್!" ಅಂತ ಮೊಮ್ಮಗಳಿಗೆ ಮುದ್ದಿನಿಂದ ದಬಾಯಿಸಿದ್ದಾರೆ.

ಪರದೇಶಗಳಲ್ಲಿ ನೆಲೆಸಿರುವವರು ಸ್ವದೇಶದಲ್ಲಿನ ತಮ್ಮ ಆಪ್ತರೊಡನೆ ನಡೆಸಲಿಚ್ಛಿಸುವ ಸಂವಹನ ಈಗ ಮುಂಚಿನಂತೆ ತುಟ್ಟಿಯ ಬಾಬ್ತಲ್ಲ. ಅಮೇರಿಕಾದ ಅನಿವಾಸಿ ಭಾರತೀಯರ ಮಟ್ಟಿಗೆ ಹೇಳಬೇಕೆಂದರೆ ಮದರ್ ಇಂಡಿಯಾ, ಗೂಗಲ್ ವ್ಹಾಯ್ಸ್ ಮುಂತಾದ ಸೇವೆಗಳು ಕಾಲಿಂಗ್ ಕಾರ್ಡುಗಳ ಮೂಲಕ ಅತಿಕಡಿಮೆ ಬೆಲೆಯಲ್ಲಿ ಕರೆ ಮಾಡುವ ಸೌಲಭ್ಯಗಳನ್ನು ತಮ್ಮ ಗ್ರಾಹಕರಿಗೆ ಒದಗಿಸುತ್ತಿವೆ. ಇನ್ನು ಫೇಸ್ಬುಕ್ ಮೆಸೆಂಜರ್, ವಾಟ್ಸಾಪ್, ಗೂಗಲ್ ಹ್ಯಾಂಗ್‌ಔಟ್ ಗಳಲ್ಲಿ ವೀಡಿಯೋ ಕರೆಗಳನ್ನು ಮಾಡುವುದು ಅಂತರ್ಜಾಲ ಸೌಲಭ್ಯವಿದ್ದವರಲ್ಲಿ ಉಚಿತವಾಗಿವೆ. ಹುಟ್ಟಿದೂರಿನಲ್ಲಿ ನಡೆದ ಯಾವುದೇ ಸುದ್ದಿಗಳು ಕ್ಷಣಾರ್ಧದಲ್ಲಿ ಸಾಗರ ಲಂಘನ ಮಾಡಿ ತಲುಪಬೇಕಾದ ಕಿವಿಗಳನ್ನು, ಕಣ್ಣುಗಳನ್ನು ತಲುಪುತ್ತಿವೆ. ಅದೇ ಕಾರಣಕ್ಕಾಗಿ ದೂರದೇಶವೆಂಬುದು ಅಕ್ಷರಶಃ ಪಕ್ಕದ ಮನೆಯಷ್ಟೇ ಸನಿಹ ಬಂದು ನಿಂತುಬಿಟ್ಟಿದೆ.

(ಮುಂದಿನ ಪುಟಕ್ಕೆ.....)


Copyright © KCO – Brindavana

ಬೃಂದಾವನ ವಾಣಿ
ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



## *ದೂರ ದೇಶವೆಂಬ ಪಕ್ಕದ ಮನೆ*

ಈ ವರ್ಷ ಎಂಭತ್ತಕ್ಕೆ ಕಾಲಿಡುತ್ತಿರುವ ಹರಿಣಾಕ್ಷಿ ಮೋಹನಕುಮಾರ್ ಅಂದು ಪಾರ್ಕಿನಲ್ಲಿ ಸಿಕ್ಕವರು ಮಾತನಾಡುತ್ತಿದ್ದರು. ಅವರು ಅಮೇರಿಕೆಗೆ ಬಂದಿದ್ದು ಅರವತ್ತರ ದಶಕದಲ್ಲಿ. ನ್ಯೂಯಾರ್ಕ್ನ ವಿಶ್ವವಿದ್ಯಾಲಯವೊಂದರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅವರ ಪತಿ ಮೋಹನಕುಮಾರರು ಒಂದು ವರ್ಷ ಮೊದಲೇ ಅಮೇರಿಕೆಗೆ ಬಂದು ನೆಲೆ ನಿಂತಿದ್ದರು. ಹರಿಣಾಕ್ಷಿಯವರು ಕಂಕುಳಲ್ಲೊಂದು ಕೂಸಿಟ್ಟುಕೊಂಡು ನ್ಯೂಯಾರ್ಕಿನ ಜಾನ್ ಎಫ್ ಕೆನಡಿ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ ಅವರಿಗೆ ಇಪ್ಪತ್ತೆದgA ಹರೆಯ. ಅಕ್ಟೋಬರ್ ತಿಂಗಳ ಕೊನೆಯ ವಾರದ ಒಂದು ದಿನವಾಗಿತ್ತು ಅದು. ಫಾಲ್ ತಿಂಗಳುಗಳು ಮುಗಿದು ಇನ್ನೇನು ಚಳಿಗಾಲ ಶುರುವಾಗುವುದರಲ್ಲಿತ್ತು. ನ್ಯೂಯಾರ್ಕಿನಲ್ಲಿ ವ್ಯಾಸಂಗ ಮಾಡುತ್ತ ನ್ಯೂಜರ್ಸಿಯಲ್ಲಿ ಮನೆ ಮಾಡಿದ ಅವರ ಪತಿ ಅಂದು ವಿಮಾನ ನಿಲ್ದಾಣಕ್ಕೆ ತಮ್ಮ ಸೆಕೆಂಡ್ ಹ್ಯಾಂಡ್ ಕಾರಿನಲ್ಲಿ ಹರಿಣಾಕ್ಷಿಯವರನ್ನು ಕರೆಯಲು ಬಂದಿದ್ದರಂತೆ. ಬದುಕಿನಲ್ಲಿ ಪ್ರಥಮ ಬಾರಿಗೆ ಅಮೇರಿಕದ ನೆಲದಲ್ಲಿ ಪಾದಾರ್ಪಣೆ ಮಾಡಿದ ಅವರನ್ನು ಅವರ ಪತಿ ಮೊದಲು ಕರೆದೊಯ್ದಿದ್ದು ಬಟ್ಟೆ ಅಂಗಡಿಗೆ.ಇನ್ನೇನು ಕೆಲವೇ ದಿನಗಳಲ್ಲಿ ಶುರುವಾಗಲಿರುವ ಚಳಿಗಾಲಕ್ಕಾಗಿ ಕೆಲವು ಬೆಚ್ಚಗಿನ ಬಟ್ಟೆಗಳನ್ನೂ, ಜಾಕೆಟ್ಟುಗಳನ್ನೂ ಅವರು ಪತ್ನಿಗೆ, ಮಗುವಿಗೆ ಕೊಂಡು ತಂದರಂತೆ. ಹೀಗೆ ಏರ್ಪೋರ್ಟಿನಿಂದ ಬಟ್ಟೆಯಂಗಡಿಗೆ, ನಂತರ ಮನೆಗೆ ತೆರಳುವ ಪಯಣದುದ್ದಕ್ಕೂ ಇವರು ಗಂಡನಿಗೆ "ಯಾಕೆ ಇಷ್ಟೆಲ್ಲ ಖರ್ಚು ಮಾಡುತ್ತೀರಿ? ಚಳಿಗಾಲವಾದರೇನು? ನಮ್ಮಮ್ಮ ವುಲನ್ನಿನ ಸ್ವೆಟರು ಹೊಲಿದು ಕೊಟ್ಟಿದ್ದಾರೆ. ಅದನ್ನೇ ತೊಡ್ತೀನಿ" ಎನ್ನುತ್ತಲೇ ಇದ್ದರಂತೆ. ಅದಕ್ಕೆ ಅವರ ಪತಿ ನಸುನಗುತ್ತಲೇ ಕಾರು ಚಲಾಯಿಸುತ್ತಿದ್ದರಂತೆ. "ಆಗ ಒಂದು ಅಮೇರಿಕನ್ ಡಾಲರು ಭಾರತದ ಏಳು ರೂಪಾಯಿ, ಹತ್ತು ಪೈಸೆಗೆ ಸಮನಾಗಿತ್ತು. ಹತ್ತಾರು ಡಾಲರುಗಳನ್ನು ಇವರು ವಸ್ತ್ರಗಳ ಮೇಲೆ ವ್ಯಯ ಮಾಡುವುದು ನೋಡಿ ಅಷ್ಟೊಂದು ಹಣವನ್ನು ಇವರ್ಯಾಕೆ ದುಂದು ಮಾಡುತ್ತಿದ್ದಾರೆ ಅಂದುಕೊಂಡಿದ್ದೆ. ನಂತರ ಚಳಿಗಾಲ ಶುರುವಾದ ಮೇಲೆ ಗೊತ್ತಾಯಿತಮ್ಮ. ತಾಪಮಾನವು ಶೂನ್ಯ ಡಿಗ್ರಿಗಿಂಥ ಕೆಳಗೆ ಹೋಗಿ ಆಕಾಶದಿಂದ ಹತ್ತಿಯ ರೂಪದಲ್ಲಿ ಮಂಜು ಬೀಳಲು ತೊಡಗಿದ ಮೇಲೆ ನಮ್ಮ ಮೈಸೂರಿನ ಚಳಿಗಾಲದಷ್ಟು ಧಾರಾಳಿಯಲ್ಲ ಈ ಅಮೇರಿಕದ ಚಳಿಗಾಲ ಅಂತ ಮೊದಲ ಬಾರಿಗೆ ಅನುಭವಕ್ಕೆ ಬಂದಿತ್ತು ನೋಡು" ಅಂತ ಆ ದಿನಗಳನ್ನು ಮಿಂಚುಕಣ್ಣಳಲ್ಲಿ ನೆನಪಿಸಿಕೊಳ್ಳುತ್ತಿದ್ದರು.

"ಆಗೆಲ್ಲ ಈಗಿನಂತೆ ಹತ್ತಾರು ಕನ್ನಡ ಸಂಘಗಳು, ದೇವಸ್ಥಾನಗಳು ಅಮೇರಿಕದಲ್ಲಿ ಕಾಣಸಿಗುತ್ತಿರಲಿಲ್ಲ. ನಾವೇ ಸ್ನೇಹಿತರನೇಕರು ಭಾಷೆಯ ಹಂಗಿಲ್ಲದೇ ಇಂಡಿಯನ್ ಕ್ಲಬ್ಬಳನ್ನು ನಡೆಸುತ್ತಿದ್ದವು. ವಾರಾಂತ್ಯಗಳಲ್ಲಿ ನಮ್ಮ ಮಕ್ಕಳನ್ನೆಲ್ಲ ಒಟ್ಟುಗೂಡಿಸಿಕೊಂಡು ಭಾರತದ ಹಲವಾರು ಭಾಷೆಗಳ, ಸಂಸ್ಕೃತಿಗಳ, ಜನಪದ ಗೀತೆಗಳ ಪರಿಚಯ ಮಾಡಿಸುತ್ತಿದ್ದೆವು. ಆದರೂ ಬಹುತೇಕ ಮಕ್ಕಳು ದೊಡ್ಡವರಾಗುತ್ತಿದ್ದಂತೆ ಈ ಪಾಠಗಳಲ್ಲಿ ಆಸಕ್ತಿ ಕಳೆದುಕೊಂಡಿದ್ದನ್ನು ನೋಡಿದ್ದೇನೆ. ಪಾಪ ಅದರಲ್ಲಿ ಅವರದಾದರೂ ಏನು ತಪ್ಪು? ಇಲ್ಲೇ ಹುಟ್ಟಿ, ಇಲ್ಲೇ ಬೆಳೆದು, ಇಲ್ಲಿಯ ಸ್ನೇಹಿತರೊಂದಿಗೆ ಒಡನಾಡುವ ಮಕ್ಕಳಿಗೆ ಭಾರತೀಯ ಭಾಷೆಗಳನ್ನು ಕಲಿಯುವುದು, ಭಾರತೀಯ ಸಂಸ್ಕೃತಿಯ ಬಗೆಗಿನ ತಿಳಿವಳಿಕೆಯನ್ನು ಪಡೆಯುವುದು ಒಂದು ಆಕರ್ಷಕ ಹವ್ಯಾಸವಿದ್ದಂತೆ ಅಷ್ಟೇ. ಭಾರತದಲ್ಲೇ ಹುಟ್ಟಿ ಬೆಳೆದ ನಮ್ಮ ರೀತಿ ನಮ್ಮ ಮಕ್ಕಳ ಮನಸ್ಸಿನಲ್ಲಿ ನೆಲದ ಸೆಳೆತ, ನಮ್ಮ ಮಣ್ಣು- ಸಂಸ್ಕೃತಿಗಳ ಸೆಳೆತ ಸಹಜವಾಗಿ ಅರಳುವುದೇ ಇಲ್ಲ ಎಂಬ ಸತ್ಯವನ್ನು ಮನಗಂಡಿದ್ದೇನೆ. ಆದರೂ ಅಲ್ಲೊಬ್ಬರು ಇಲ್ಲೊಬ್ಬರು ಮಕ್ಕಳು, ಆಗೊಮ್ಮೆ ಈಗೊಮ್ಮೆ ಈ ನನ್ನ ತಿಳಿವಳಿಕೆಯನ್ನು ಹುಸಿ ಮಾಡಿ ಭಾರತಕ್ಕೆ ಮರಳಿ ಅಲ್ಲೇ ನೆಲೆನಿಂತಿದ್ದೂ ಇದೆ" ಅಂತ ಆಶಾವಾದ ವ್ಯಕ್ತಪಡಿಸಿದರು.

1965ನೇ ಇಸವಿಯಲ್ಲಿ ಅಂದಿನ ಅಮೇರಿಕ ಅಧ್ಯಕ್ಷರಾದ ಲಿಂಡನ್ ಜಾನ್ಸನ್ ಅವರು "ಇಮಿಗ್ರೇಷನ್ ಮತ್ತು ನ್ಯಾಷನಾಲಿಟಿ ಮಸೂದೆ"ಯನ್ನು ಸಹಿ ಮಾಡಿ ಭಾರತೀಯ ಮೂಲದವರೂ ಸ್ವಾಭಾವೀಕರಣದಿಂದ ಅಮೇರಿಕನ್ ಪ್ರಜೆಗಳಾಗಬಹುದೆಂಬ ನಿಯಮವನ್ನು ಮಾನ್ಯ ಮಾಡಿದರು. ಆ ವರ್ಷದಿಂದ ಭಾರತೀಯ ಮೂಲದವರಿಗೆ ಅಮೇರಿಕದ ಪೌರತ್ವ ದೊರೆಯಲು ಶುರುವಾಯಿತು. 2015ರ ಜನಗಣತಿಯ ಪ್ರಕಾರ ಅಮೇರಿಕದಲ್ಲಿ ನಲವತ್ತು ಲಕ್ಷ ಜನ ಭಾರತೀಯ ಮೂಲದವರಿದ್ದಾರೆ. ಅಂದರೆ ಅಮೇರಿಕದ ಒಟ್ಟು ಜನಸಂಖ್ಯೆಯಲ್ಲಿ ಶೇ. 1% ರಷ್ಟು ಜನ ಭಾರತೀಯ ಮೂಲದವರು.

ಕನ್ನಡ, ಹಿಂದಿ, ತಮಿಳು, ತೆಲುಗು ಮುಂತಾದ ಭಾಷೆಗಳ ರೇಡಿಯೋ ಕೇಂದ್ರಗಳು ಭಾರತೀಯರು ಹೆಚ್ಚಾಗಿ ನೆಲೆಸಿರುವ ನ್ಯೂಯಾರ್ಕ್ ಸಿಟಿ, ಶಿಕಾಗೋ, ಹ್ಯೂಸ್ಟನ್ ಮುಂತಾದ ಕಡೆಗಳಲ್ಲಿ ಪ್ರಸಾರವಾಗುತ್ತಿವೆ. ಮುಖ್ಯವಾಗಿ ಹ್ಯೂಸ್ಟನ್ನಿಂದ ಹೊರಡುವ ಕನ್ನಡ ಕಾರಂಜಿ ರೇಡಿಯೋ ಮಕ್ಕಳಿಗಾಗಿ ಮತ್ತು ವಯಸ್ಕರಿಗಾಗಿ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಕೇಬಲ್ ಕನೆಕ್ಷನ್ನಿನ ಮೂಲಕ ಭಾರತೀಯ ಟೀವಿ ಚಾನಲ್ಲುಗಳನ್ನು ಪಡೆಯಬಹುದಾಗಿದೆ.

ಭಾರತೀಯ ಮೂಲದವರಾದ ಅಜೀಜ್ ಅನ್ಸಾರಿ, ಹಸನ್ ಮಿನಾಜ್, ಕೋವಿದ್ ಗುಪ್ತಾ, ಕಾಲ್ ಪೆನ್, ಮಿಂಡಿ ಕಾಳಿಂಗ್ ಅಮೇರಿಕದ ಟೀವಿ, ಸಿನಿಮಾಗಳಲ್ಲಿ ಸದ್ದು ಮಾಡುತ್ತಿದ್ದರೆ ಕಮಲಾ ಹ್ಯಾರಿಸ್, ಬಾಬಿ ಜಿಂದಾಲ್, ಅಮಿ ಬೇರಾ, ನಿಕ್ಕಿ ಹ್ಯಾಲಿ ಮುಂತಾದವರು ರಾಜಕೀಯದಲ್ಲಿ ದಕ್ಷ ಹೆಜ್ಜೆಗಳನ್ನಿಡುತ್ತಿದ್ದಾರೆ. ಅಮೇರಿಕದ ಐವತ್ತೂ ರಾಜ್ಯಗಳಲ್ಲಿ ಲೆಕ್ಕವಿಲ್ಲದಷ್ಟು ಎಲ್ಲ ಭಾರತೀಯ ಧರ್ಮಗಳ ಪ್ರಾರ್ಥನಾ ಮಂದಿರಗಳಿವೆ. ಅಕ್ಕ (AKKA- Association of Kannada Kootas of America), ಟಾನಾ (TANA—Telugu Association of North America) ಮುಂತಾದ ಭಾರತೀಯ ಭಾಷೆಗಳಡಿಯಲ್ಲಿ ಕಟ್ಟಿದ ಸಂಘಗಳಿವೆ. ಕನ್ನಡ ಸಾಹಿತ್ಯಕ್ಕೆಂದೇ ಮೀಸಲಾಗಿರುವ ಕನ್ನಡ ಸಾಹಿತ್ಯ ರಂಗವಂತೂ ಅನಿವಾಸಿ ಬರಹಗಾರರಿಗೆ ಜೀವದಾಯಿನಿಯಂತಿದೆ.

***

ನಮ್ಮ ಮನೆಯಿಂದ ಒಂದು ಘಂಟೆ ಡ್ರೈವ್ ಮಾಡಿದರೆ ಜರ್ಸಿ ಸಿಟಿ ಎಂಬ ಪಟ್ಟಣ ಸಿಗುತ್ತದೆ. ಅಲ್ಲಿನ ಇಂಡಿಯಾ ಸ್ಕ್ವೇರ್ ಭಾರತೀಯ ಶೈಲಿಯ ಅಂಗಡಿಗಳಿಗೆ, ಬೀದಿಗಳಿಗೆ ಹೆಸರಾಗಿದೆ. ಆ ಚೌಕದಲ್ಲಿ ನಿಂತರೆ ಭಾರತದ್ದೇ ಯಾವುದೋ ಬೀದಿಯಲ್ಲಿ ನಿಂತಂತೆ ಭ್ರಮೆಯಾಗುವುದು. ಕಳೆದ ಸರ್ತಿ ಹುಬ್ಬಳ್ಳಿಯ ಮನೆಗೆ ಹೋದಾಗ ನನ್ನ ತಂಗಿ ಮನೆಯ ಹತ್ತಿರವೇ ಶುರುವಾದ ಮಾಲ್ ಒಂದಕ್ಕೆ ಕರೆದೊಯ್ದಿದ್ದಳು. ಆ ಮಾಲ್ನಲ್ಲಿ ನಿಂತಾಗ ನನಗೆ ಅಮೇರಿಕದಲ್ಲೇ ಇದ್ದಂತೆ ಭ್ರಮೆಯಾಗಿತ್ತು. ಇದೊಂದು ರೀತಿ ಬಸ್ಸಿನ ಸೌಲಭ್ಯವಿಲ್ಲದ ಗ್ರಾಮವೊಂದರಲ್ಲಿ ಕುಳಿತು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ಓದಿದ ಹಾಗೆ. ಅಮೇರಿಕದ ಮೆಟ್ರೋಪಾಲಿಟನ್ ಸಿಟಿಯಲ್ಲಿ ಕುಳಿತು ಮಂಟೇಸ್ವಾಮಿ ಪದ್ಯ ಕೇಳಿದ ಹಾಗೆ.

ನೆಲದ ಮೇಲೆ ಒಂದು ರೇಖೆ ಎಳೆದು ಈಚೆಗಿನದು ನನ್ನ ಜಾಗ, ಆಚೆಗಿನದು ನಿನ್ನದು ಎನ್ನುವಲ್ಲಿ ಮನುಷ್ಯನಿಗೆ ದೊರಕುವ ಸುಖವೇನು ಎಂಬುದು ಅರ್ಥವಾಗುವುದಿಲ್ಲ. ದೇಶ, ಧರ್ಮ, ವರ್ಣ, ಲಿಂಗ ಮುಂತಾದವುಗಳ ಹೆಸರಿನಲ್ಲಿ ಎಳೆಯುವ ರೇಖೆಗಳಿಗೂ ಇದೇ ವ್ಯಾಖ್ಯಾನ ಅನ್ವಯವಾಗುವುದು. ಹುಟ್ಟಿದ ದೇಶ ಬಿಟ್ಟು ವಲಸೆ ನಿಂತಾಗ ಈ ಗೆರೆಗಳಿಗೆ ಅರ್ಥವೇ ಇಲ್ಲ ಎಂಬುದು ಗಮನಕ್ಕೆ ಬರುವುದು. ಈ ರೀತಿ ದೂರದೇಶಕ್ಕೂ, ಪಕ್ಕದ ಮನೆಗೂ ನಡುವಿರುವ ಸೀಮೆಗಳು ಅಳಿಸಿಹೋಗುವುದೇ ಭವಿಷ್ಯದ ಆಶಾವಾದವಿರಬಹುದೇನೋ!

***


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ



ಕವನ

ಅನಿಲ್ ಭಾರದ್ವಾಜ

## ಮಾನವ ತನ್ನ ಬದುಕಿನಲ್ಲಿ



ಮಾನವನಿಗೆ ಬದುಕಿನಲಿ ಸಮಯವಿಲ್ಲ
ಎಲ್ಲದಕು ಸಮಯ ಕೊಡಲು
ಬೇಕಾಷ್ಟು ಋತುಗಳಿಲ್ಲ
ಪ್ರತೀ ಉದ್ದೇಶಕು ಋತುವಿಡಲು
ತಪ್ಪಿದವು ಪುರಾಣಗಳು ಇದ ಹೇಳಲು

ಮಾನವನು ಆ ಒಂದೇ ಕ್ಷಣದಲಿ ಪ್ರೀತಿಸಲು ಬೇಕು
ದ್ವೇಷಿಸಲು ಬೇಕು,
ಆ ಎರಡು ಕಂಗಳಲೇ ನಗಲು ಬೇಕು
ಅಳಲು ಬೇಕು,
ಕಲ್ಲುಗಳನಾ ಜೋಡಿ ಕರಗಳಿಂದಲೇ ಎಸೆಯಬೇಕು
ಮತ್ತೆ ಕೂಡಿ ಹಾಕಲಿಬೇಕು,
ಸಮರದಲಿ ಒಲವನು, ಒಲವಿನಲಿ ಸಮರವನು ಮಾಡಲೇಬೇಕು,
ಮತ್ತೆ ದ್ವೇಷಿಸಬೇಕು ಹಾಗೆ ಮನ್ನಿಸಬೇಕು,
ನೆನಪಿಡಬೇಕು ಮರೆಯಲೂ ಬೇಕು,
ಜೋಡಿಸಬೇಕು ಗೊಂದಲಪಡಿಸಬೇಕು, ತಿನಬೇಕು ಮತ್ತದನ ಅರಗಿಸಿಕೊಳಬೇಕು
ಇತಿಹಾಸಕೀ ಕ್ರಿಯೆಗೆ ವರ್ಷಾನುವರ್ಷಗಳು ಬೇಕು

ಮಾನವನಿಗೆ ಸಮಯವಿಲ್ಲ
ಕಳೆದಾಗ ಹುಡುಕುವ, ಮತ್ತದು ಸಿಕ್ಕಾಗ ಮರೆಯುವ
ಮರೆತಾಗ ಪ್ರೀತಿಸುವ, ಪ್ರೀತಿಸುವಾಗ ಮರೆಯಲಾರಂಭಿಸುವ

ಅನುಭವೀ ಆತ್ಮವು ಅವನದು, ಬಹಳ ಕುಶಲಿಯೂ ಹೌದು ಆ ಆತ್ಮವು
ಬರೀ ಅವನ ಶರೀರ ಅಪ್ರೌಢವಾಗಿ ಉಳಿವುದೆಂದೆಂದೂ
ಅದು ಯತ್ನಿಸಿವುದು ಮತ್ತೆ ಗುರಿತಪ್ಪುವುದು,
ಗಲಿಬಿಲಿಗೊಳ್ಳುವುದು, ಒಂದನೂ ಕಲಿಯದು,
ಅದರಾನಂದದಲಿ ವೇದನೆಯಲಿ ಅಮಲೇರಿದಂತಾಗಿ ಕುರುಡು ತಾನಾಗಿ

ಅವ ಕಾಲವಾಗುವ ಶರತ್ಕಾಲದಲಿ ಅಳಿಯುವ ಅಂಜೂರದಂತೆ
ಸುಕ್ಕಾಗಿ, ಅವನನೇ ತುಂಬಿಕೊಂಡು ಮತ್ತೆ ಸಿಹಿಯಾಗಿ
ಎಲೆಗಳು ಒಣಗುತಿವೆ ನೆಲದ ಮೇಲೆ
ಬತ್ತಲೆಯ ಕೊಂಬೆಗಳು ತೋರುತಲಿವೆ ಆ ಜಾಗವನು
ಎಲ್ಲಿ ಎಲ್ಲದಕು ಸಮಯವುಂಟು

(ಯೆಹೂಡ ಅಮಿಚಾಯ್ ಅವರ 'A Man In His Life' ನ ಕನ್ನಡ ಅನುವಾದ)



ಕವನ

ಕಲಾವತಿ ರಮೇಶ್

## ಬಣ್ಣ ಮತ್ತು ಆಕಾಶ

ನಸುಕೆಂಪಿಗೆ ತುಸು ನಾಚಿಕೆಯೇ ?
ನೇರಳೆಗೆ ಯಾಕೋ ಯೋಚನೆಯೇ?

ನೀಲಿಯೇ ಯಾಕಿರಬೇಕು ಆಕಾಶ !!
ಕೊಡಬಾರದೇ ಬೇರೆ ಬಣ್ಣಕ್ಕೂ ಒಂದು ಅವಕಾಶ!!

ಕೆಂಪು ತೋರುವುದೇ ಒಲುಮೆ?
ಹಸಿರು ದನಿಸುವುದೇ ನಲುಮೆ?

ಕೇಸರಿ ತೋರುವುದೇ ಶೌರ್ಯ?
ಬಣ್ಣಕ್ಕೂ ಇಹುದೆ ಭಾಷ್ಯ!??!

ನೀಲಿಯ ಭೂಮಿ ಸುತ್ತುವುದು
ಹಳದಿ ಕೆಂಪಿನ ಸೂರ್ಯನ ಸುತ್ತ

ಇವರ ಜೊತೆ ಸೇರುವ ತಂಪು
ಚಂದ್ರ ಎಂಥ ವಿನೂತನ ವಿಸ್ಮಯ !!

ಇಂಥ ಬಣ್ಣದ ಜಗ ನೋಡುವುದೇ
ಒಂದು ವರ್ಣಿಸಲಾರದ ಸೌಭಾಗ್ಯ..

ಮೊಬೈಲೇ ಜಗ ಆಗಿರುವ ಕುರುಡು ಕಣ್ಣಿಗೆ
ಕಾಣುವುದು ಮಾತ್ರ ಫೇಸ್ಬುಕ್ ಟ್ವಿಟರಿನ ಸಖ್ಯ ...


Copyright © KCO – Brindavana

# ಬೃಂದಾವನ ವಾಣಿ

ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ ಪತ್ರಿಕೆ

## ನಾವು ನೋಡಿದ ಸಿನೆಮಾ









## ಸದಸ್ಯತ್ವ ಮಾಹಿತಿ

ಬೃಂದಾವನ ಕನ್ನಡ ಕೂಟ ,ಕನ್ನಡ ಮತ್ತು ಕನ್ನಡಿಗರ ಪರವಾದ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದೆ. ನ್ಯೂ ಜೆರ್ಸಿ ಮತ್ತು ಸುತ್ತ ಮುತ್ತ ಇರುವ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಎಂಬ ವಿನಂತಿ. ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಬೃಂದಾವನದ "ಸದಸ್ಯತ್ವ". ವಾರ್ಷಿಕ , ದ್ವೈ ವಾರ್ಷಿಕ , ಅಜೀವ ಅಥವಾ ವಿದ್ಯಾರ್ಥಿ ಸದಸ್ಯತ್ವಗಳಲ್ಲಿ ,ನಿಮಗೆ ಸೂಕ್ತವಾದ ಸದಸ್ಯತ್ವವನ್ನು ಆಯ್ಕೆ ಮಾಡಿ. ಈಗ ಸದಸ್ಯತ್ವ ಪರಿಪೂರ್ಣ ಇಲೆಕ್ಟ್ರಾನಿಕ್ ರೂಪದಲ್ಲಿ ಆನ್ಲೈನ್ ದೊರೆಯುತ್ತದೆ. www.brindavana.orgಗೆ ಹೋಗಿ ನಿಮ್ಮ ವಿವರಗಳನ್ನು ನೀಡಿ ಸೂಕ್ತವಾದ ಸದಸ್ಯತ್ವ ಪಡೆಯಿರಿ. ಕ್ಷಣಾರ್ಧದಲ್ಲಿ ನಿಮಗೆ e-mail ಮುಖೇನ ಸದಸ್ಯತ್ವದ ವಿವರ ಬಂದು ಸೇರುವುದು. ನಿಮ್ಮ ಈ ಬೃಂದಾವನ, Karnataka Cultural Organization - Brindavana (KCOB) NJ, USA. 501(3)(c)ಪಡೆದ ಚಾರಿಟಿ ಸಂಸ್ಥೆ. ಇದಕ್ಕೆ ನಿಮ್ಮ ಕಾಣಿಕೆ ಪರಿಪೂರ್ಣ ಟ್ಯಾಕ್ಸ್ ರಹಿತ.
ಏನಾದರು ಪ್ರಶ್ನೆ ಇದ್ದಲ್ಲಿ president@brindavana.orgಗೆ ಇ-ಮೇಲ್ ಮಾಡಿ.
ಕನ್ನಡದ ಮಕ್ಕಳೆಲ್ಲ ಒಂದಾಗಿ ಬನ್ನಿ, ಎಲ್ಲರೂ ಸೇರಿ ಕನ್ನಡ ತಾಯಿ ಭುವನೇಶ್ವರಿಯನ್ನು ಆರಾಧಿಸಿ, ಕನ್ನಡದ ಕಂಪನ್ನು ಹರಡೋಣ.

**ಸೂಚನೆ:**

ನ್ಯೂಜೆರ್ಸಿಯ ಮತ್ತು ಸಮಸ್ತ ಕನ್ನಡದ ಸ್ನೇಹಿತರೆಲ್ಲರೂ "ಬೃಂದಾವನ ವಾಣಿ"ಯಲ್ಲಿ ಭಾಗಿಗಳಾಗಬೇಕೆಂಬುದು ನಮ್ಮ ಆಶಯ. ವಾಣಿಯಲ್ಲಿ ಮೂಡಿಬರುವ ಅಂಕಣಗಳು-ಸಾಹಿತ್ಯವಾಣಿ,ವನಿತಾವಾಣಿ, ಪುಟಾಣಿ-ಪ್ರಪಂಚ, ಬಾಲಪ್ರತಿಭೆ, ಕ್ರೀಡ, ಅಮೇರಿಕಾ ನಾ ಕಂಡಂತೆ, ಯುವ ವಾಣಿ, ಸುತ್ತ-ಮುತ್ತ, ಹಾಗೇ ಸುಮ್ಮನೆ.. ಈ ಅಂಕಣಗಳಿಗೆ ಲೇಖನ,ಕವನ,ಕಥೆ, ಚುಟುಕುಗಳನ್ನು ಬರೆದು ಕಳಿಸಿ. ಅಡುಗೆ, ಮನೆ ಮದ್ದು, ಅಲಂಕಾರ, ಸಂಪ್ರದಾಯಗಳ ಮಾಹಿತಿ ನೀಡುವ ಕಿರುಲೇಖನಗಳನ್ನು, ಮಕ್ಕಳು ಬರೆದ ವರ್ಣಚಿತ್ರಗಳನ್ನು ಕಳುಹಿಸಬಹುದು. ಮಕ್ಕಳಿಗಾಗಿ ನೀತಿ ಕಥೆಗಳನ್ನು ಬರೆದು ಕಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ಅಮೇರಿಕಾ ನಾ ಕಂಡಂತೆ** - ಇದು ಜೀವನಾನುಭವಗಳ ಅಂಕಣ. ನಿಮ್ಮ ಅನುಭವಗಳನ್ನು ಹಂಚಿಕೊಳ್ಳಿ. ನೀವು ಕ್ಲಿಕ್ಕಿಸಿದ ಸುಂದರ ಛಾಯಾಚಿತ್ರಗಳನ್ನು ಕಳುಹಿಸಬಹುದು.
ನಿಮ್ಮ ಅನಿಸಿಕೆ,ಸಲಹೆ,ಸೂಚನೆಗಳಿಗೆ ತಪ್ಪದೇ ತಿಳಿಸಿ. vani@brindavana.org ಮೂಲಕ ನೀವು ನಮ್ಮನ್ನು ಸಂಪರ್ಕಿಸಬಹುದು.

**ವಿಶೇಷ ಸೂಚನೆ** : ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. ಲೇಖನಗಳು ಸಂಕ್ಷಿಪ್ತವಾಗಿರಲಿ. ಕಳುಹಿಸಿದ ಮಾಹಿತಿ, ಲೇಖನ ಅಸಂಪೂರ್ಣ ಅಥವಾ ಅನುಚಿತವೆನಿಸಿದರೆ ಅದನ್ನು ಪ್ರಕಟಿಸಲಾಗುವುದಿಲ್ಲ.ಸಂಪಾದಕ ಮಂಡಳಿಯ ತೀರ್ಮಾನವೇ ಅಂತಿಮ. 'ಬೃಂದಾವನ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು, ಮಾಹಿತಿಗಳಿಗೆಲ್ಲ ಲೇಖಕರೇ ಜವಾಬ್ದಾರರು.ಅಂಕಣಗಳಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ ,'ಬೃಂದಾವನ ವಾಣಿ' ಮತ್ತು ಬೃಂದಾವನ' ಕನ್ನಡ ಕೂಟ ಜವಾಬ್ದಾರರಲ್ಲ.

'ಬೃಂದಾವನ ವಾಣಿ' ಮತ್ತು 'ಬೃಂದಾವನ' ಕನ್ನಡ ಕೂಟ ಯಾವುದೇ ಒಂದು ರಾಜಕೀಯ ಪಕ್ಷವನ್ನು , ಧರ್ಮವನ್ನು ಅಥವಾ ಪಂಗಡವನ್ನು ಪ್ರತಿನಿಧಿಸುವುದಿಲ್ಲ . ನಮ್ಮ ಧ್ಯೇಯ ಕರ್ನಾಟಕ ರಾಜ್ಯ, ಕನ್ನಡ ಭಾಷೆ , ಸಂಸ್ಕೃತಿ ಹಾಗು ಕನ್ನಡಿಗರ ಅಭ್ಯುಧಯ ಮಾತ್ರ.


Copyright © KCO – Brindavana